ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 14 ಮಂಗಳವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 208 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ದೀಪಾವಳಿ ದಿನದಂದು ನಡೆದ ಅಗ್ನಿ ದುರಂತಗಳು

ಬೆಂಗಳೂರಿನಲ್ಲಿ ಮತ್ತೊಂದು ಅಗ್ನಿ ಅವಘಡ; ಧಗಧಗನೆ ಹೊತ್ತಿ ಉರಿದ 5 ಅಂತಸ್ತಿನ ಕಟ್ಟಡ!



ಬೆಂಗಳೂರು: ಬೆಂಗಳೂರಿನಲ್ಲಿ ಮತ್ತೊಂದು ಅಗ್ನಿ ಅವಘಡ ಸಂಭವಿಸಿದೆ. ಬಾಣಸವಾಡಿ ಹೊರ ವರ್ತುಲ ರಸ್ತೆಯಲ್ಲಿ ಐದು ಅಂತಸ್ತಿನ ಬಿಲ್ಡಿಂಗ್ ಧಗ-ಧಗನೆ ಹೊತ್ತಿ ಉರಿದಿದೆ. ತಡ ರಾತ್ರಿ 12 ಗಂಟೆಗೆ ಬೆಂಕಿ ಕಾಣಿಸಿಕೊಂಡಿದ್ದು, ಬೆಂಕಿಯ ಕೆನ್ನಾಲಿಗೆ ನೋಡ ನೋಡುತ್ತಿದ್ದಂತೆಯೇ ಇಡೀ ಕಟ್ಟಡ ಆವರಿಸಿದೆ. ಘಟನೆಯಲ್ಲಿ ಫರ್ನಿಚರ್ ಶಾಪ್, ಕೋಚಿಂಗ್ ಸೆಂಟರ್, ಐಟಿ ಕಂಪನಿ ಸಂಪೂರ್ಣ ಸುಟ್ಟು ಕರಕಲಾಗಿದ್ದು, ಕೋಟ್ಯಂತರ ರೂ. ನಷ್ಟ ಸಂಭವಿಸಿದೆ. ನೆಲಮಹಡಿ ಮತ್ತು ಮೊದಲನೇ ಮಹಡಿ ಫರ್ನಿಚರ್ ಶೋರೂಂ ಇತ್ತು. 2ನೇ ಮಹಡಿಯಲ್ಲಿ ಕೋಚಿಂಗ್ ಸೆಂಟರ್ ಇತ್ತು. ಮೂರು ಮತ್ತು 4ನೇ ಮಹಡಿಯಲ್ಲಿ ಸಾಫ್ಟ್‌ವೇರ್ ಕಂಪನಿ ಇತ್ತು. ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಕಟ್ಟಡದಲ್ಲಿ ಸಿಲುಕಿದ್ದ ಇಬ್ಬರು ಸೆಕ್ಯೂರಿಟಿ ಗಾರ್ಡ್‌ಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಕಟ್ಟಡ ಶಂಕರ್ ಎಂಬುವರಿಗೆ ಸೇರಿದ್ದಾಗಿದೆ. ಶಂಕರ್ 5 ವರ್ಷಗಳಿಂದ ಕಟ್ಟಡ ಬಾಡಿಗೆಗೆ ನೀಡಿದ್ದರು ಎನ್ನಲಾಗಿದೆ. ಈ ಸಂಬಂಧ ರಾಮಮೂರ್ತಿ ನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ನಾಗಾಲ್ಯಾಂಡ್‌ನಲ್ಲಿ ಪಟಾಕಿ ಕಿಡಿ ತಗುಲಿ ಬೆಂಕಿ ಅವಘಡ; ಮಕ್ಕಳು ಸೇರಿ ಒಂದೇ ಕುಟುಂಬದ ಐವರು ಸಜೀವ ದಹನ

ದಿಮಾಪುರ: ನಾಗಾಲ್ಯಾಂಡ್‌ನ ದಿಮಾಪುರ್ ಜಿಲ್ಲೆಯ ನಹರ್ಬರಿ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡು ಮೂವರು ಮಕ್ಕಳು ಸೇರಿದಂತೆ ಒಂದೇ ಕುಟುಂಬದ ಐವರು ಸಜೀವ ದಹನಗೊಂಡಿದ್ದಾರೆ ಎಂದು ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಭಾನುವಾರ ರಾತ್ರಿ 10.45ರ ಸುಮಾರಿಗೆ ಈ ಘಟನೆ ಸಂಭವಿಸಿದ್ದು, ನಾಗ ಸಮುದಾಯವಲ್ಲದ ಜನರು ವಾಸಿಸುವ ಹುಲ್ಲಿನ ಮನೆಗಳ ಸಾಲುಗಳಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ಅವರು ಹೇಳಿದರು. ದೀಪಾವಳಿ ಆಚರಣೆ ವೇಳೆ ಪಟಾಕಿ ಸಿಡಿಸಿದ್ದರಿಂದ ಬೆಂಕಿ ಹೊತ್ತಿಕೊಂಡಿರುವ ಸಾಧ್ಯತೆ ಇದೆ. ಬೆಂಕಿಯಿಂದಾಗಿ ಸುಮಾರು 50 ಕುಟುಂಬಗಳು ತೊಂದರೆಗೀಡಾಗಿವೆ ಎಂದು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಧಿಕಾರಿ ತಿಳಿಸಿದ್ದಾರೆ. ಆರು ಅಗ್ನಿಶಾಮಕ ವಾಹನಗಳು ಸುಮಾರು 2 ಗಂಟೆ ಕಾರ್ಯಾಚರಣೆಯ ನಂತರ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿವೆ. ಆದರೆ, ಅಗ್ನಿ ಅವಘಡಕ್ಕೆ ನಿಖರ ಕಾರಣ ತನಿಖೆ ನಂತರವೇ ತಿಳಿಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೃತರ ಶವಗಳನ್ನು ಪೊಲೀಸರಿಗೆ ಹಸ್ತಾಂತರಿಸಲಾಗಿದೆ.

ಉಡುಪಿಯಲ್ಲಿ ದೀಪಾವಳಿ ಪೂಜೆ ವೇಳೆ ಬೆಂಕಿ ಅವಘಡ; ಸುಟ್ಟು ಕರಕಲಾದ 8 ಮೀನುಗಾರಿಕಾ ದೋಣಿಗಳು



ಮಂಗಳೂರು: ಉಡುಪಿ ಜಿಲ್ಲೆಯ ಗಂಗೊಳ್ಳಿಯ ನದಿ ದಡದಲ್ಲಿ ಲಂಗರು ಹಾಕಲಾಗಿದ್ದ ಎಂಟು ಮೀನುಗಾರಿಕಾ ದೋಣಿಗಳು ಸೋಮವಾರ ಬೆಳಗಿನ ಜಾವ ಬೆಂಕಿಗೆ ಆಹುತಿಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಕಿಗೆ ಕಾರಣ ಏನೆಂಬುದು ತಕ್ಷಣಕ್ಕೆ ತಿಳಿದುಬಂದಿಲ್ಲ ಎಂದು ಮೂಲಗಳು ತಿಳಿಸಿವೆ. ದೀಪಾವಳಿ ಅಂಗವಾಗಿ ಸಿಡಿಸಿದ ಪಟಾಕಿ ಕಿಡಿ ದೋಣಿಯ ಮೇಲೆ ಬಿದ್ದಿದ್ದರಿಂದ ಬೆಂಕಿ ಕಾಣಿಸಿಕೊಂಡಿದೆ ಎಂದು ಇತರ ಮೂಲಗಳು ತಿಳಿಸಿವೆ.

ಒಂದು ದೋಣಿಯಲ್ಲಿ ಮೊದಲಿಗೆ ಕಾಣಿಸಿಕೊಂಡ ಬೆಂಕಿಯು ಸ್ವಲ್ಪ ಸಮಯದಲ್ಲಿಯೇ ಲಂಗರು ಹಾಕಲಾಗಿದ್ದ ಇತರ ದೋಣಿಗಳಿಗೂ ಹರಡಿತು. ಕುಂದಾಪುರ ಮತ್ತು ಬೈಂದೂರಿನಿಂದ ಆಗಮಿಸಿದ ಅಗ್ನಿಶಾಮಕ ಮತ್ತು ರಕ್ಷಣಾ ಸಿಬ್ಬಂದಿ ಬೆಂಕಿಯನ್ನು ಹತೋಟಿಗೆ ತಂದಿದ್ದಾರೆ. ಕರಾವಳಿ ಕಾವಲು ಸಿಬ್ಬಂದಿ ಮತ್ತು ಪೊಲೀಸರು ಸಹ ರಕ್ಷಣಾ ಕಾರ್ಯದಲ್ಲಿ ಸಹಕರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಗ್ನಿ ಅವಘಡದಿಂದ ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ ಎಂದು ಮೂಲಗಳು ತಿಳಿಸಿವೆ.

ರಾಸಾಯನಿಕ ಗೋದಾಮಿನಲ್ಲಿ ಅಗ್ನಿ ಅವಘಡ; 9 ಮಂದಿ ಸಜೀವ ದಹನ



ಹೈದರಾಬಾದ್ (ತೆಲಂಗಾಣ): ಹೈದರಾಬಾದ್‌ನಲ್ಲಿ ದೀಪಾವಳಿ ಹಬ್ಬದಂದೇ ಭಾರಿ ಅಗ್ನಿ ಅವಘಡ ಸಂಭವಿಸಿದ್ದು, ದುರಂತದಲ್ಲಿ 9 ಮಂದಿ ಸಜೀವ ದಹನಗೊಂಡಿದ್ದಾರೆ. ನಾಂಪಲ್ಲಿ ಬಜಾರ್ ಘಾಟ್‌ನಲ್ಲಿ ನಾಲ್ಕು ಅಂತಸ್ತಿನ ರಾಸಾಯನಿಕ ಗೋದಾಮಿನಲ್ಲಿ ಭಾರಿ ಬೆಂಕಿ ಕಾಣಿಸಿಕೊಂಡಿದೆ. 16 ಮಂದಿಯನ್ನು ರಕ್ಷಿಸಿದ್ದು, ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಕಟ್ಟಡದ ನೆಲ ಮಹಡಿಯಲ್ಲಿ ಕಾರ್ ರಿಪೇರಿ ಮಾಡಲಾಗುತ್ತಿತ್ತು. ಈ ವೇಳೆ ಅಲ್ಲೇ ಇದ್ದ ರಾಸಾಯನಿಕ ತುಂಬಿದ್ದ ಡ್ರಮ್‌ಗಳಿಗೆ ಬೆಂಕಿ ತಗುಲಿ ಅವಘಡ ಸಂಭವಿಸಿದೆ. ಕೆಲ ಹೊತ್ತಿನಲ್ಲೇ ಉಳಿದ ಮಹಡಿಗಳಿಗೂ ಬೆಂಕಿ ವ್ಯಾಪಿಸಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಗೋದಾಮಿನಲ್ಲಿದ್ದ ಕಾರು ಹಾಗೂ 2 ಸೈಕಲ್ ಸುಟ್ಟು ಕರಕಲಾಗಿವೆ. ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆ ಪ್ರಗತಿಯಲ್ಲಿದೆ.

ನಿಧನ

ಎಂ.ಕೆ.ವೀರಪ್ಪ



ಮೈಸೂರು,ನ.13–ಮೈಸೂರಿನ ಕುವೆಂಪುನಗರ ನಿವಾಸಿ ಎಂ.ಕೆ. ವೀರಪ್ಪ (78) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಕೆ.ಜಿ.ಕೊಪ್ಪಲಿನ ರುದ್ರಭೂಮಿಯಲ್ಲಿ ಇಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಲ್‌ಹಾಜ್ ಶೇಕ್ ಮೊಯೀದ್ದೀನ್



ಮೈಸೂರಿನ ಸಿದ್ದಿಖಿನಗರ ನಿವಾಸಿ ಅಲ್‌ಹಾಜ್ ಶೇಕ್ ಮೊಯೀದ್ದೀನ್ (80) ಭಾನುವಾರ ನಿಧನರಾದರು. ಮೃತರು ಪುತ್ರ ಏತಿಹಾದ್ ಅರೇಬಿಯನ್ ಹೋಟೆಲ್‌ನ ಮಾಲೀಕ ಅಲ್‌ಹಾಜ್ ಮೊಹಮದ್ ಹುಜೈಫಾ ಸೇರಿದಂತೆ ಅಪಾರ ಬಂಧು ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ನಮಾಜ್-ಇ-ಜನಾಜ್ ನಡೆದ ನಂತರ ಟಿಪ್ಪು ವೃತ್ತದಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ಸೋಮವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ರಾಣಿಯಮ್ಮ



ಮೈಸೂರಿನ ಗಾಯತ್ರಿಪುರಂ ನಿವಾಸಿ ರಾಣಿಯಮ್ಮ (65) ಭಾನುವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಹದೇವಪುರ ರಸ್ತೆಯಲ್ಲಿರುವ ಅವರ ತೋಟದಲ್ಲಿ ಸೋಮವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರೋನಾಲ್ಡ್ ಎಫ್ ಪೇಸ್



ಮೈಸೂರಿನ ಗಾಂಧಿನಗರದ ನಿವಾಸಿ ರೋನಾಲ್ಡ್ ಎಫ್ ಪೇಸ್ (67) ಅ.31ರಂದು ನಿಧನರಾದರು. ಮೃತರು ಪತ್ನಿ, ಮಕ್ಕಳು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಹದೇವಪುರ ರಸ್ತೆಯ ಗಾಂಧಿನಗರದ ಕ್ರಿಶ್ಚಿಯನ್ ರುದ್ರಭೂಮಿಯಲ್ಲಿ ನ.15ರಂದು ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ.

ಅಚಕಲೇರಾ ಪಿ.ಪೊನ್ನಪ್ಪ



ಮೈಸೂರಿನ ಬೋಗಾದಿ (ದಕ್ಷಿಣ) 2ನೇ ಹಂತದ ನಿವಾಸಿ ಅಚಕಲೇರಾ ಪಿ.ಪೊನ್ನಪ್ಪ (72) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪುತ್ರಿ ಮುಕ್ಕಾಟ್ಟೀರ ಹೇಮಾ ವಿಕಾಸ್, ಅಳಿಯ ವಿಕಾಸ್ ತಮ್ಮಯ್ಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಶ್ವಸಂಸ್ಥೆಯಲ್ಲಿ ಇಸ್ರೇಲ್ ವಿರುದ್ಧ ಮತ ಚಲಾಯಿಸಿದ ಭಾರತ: ಅಚ್ಚರಿ ಮೂಡಿಸಿದ ಪ್ರಧಾನಿ ಮೋದಿ ನಡೆ



ನವದೆಹಲಿ: ಪ್ಯಾಲೆಸ್ತೀನ್‌ನಲ್ಲಿ ಇಸ್ರೇಲ್ ವಾಸ ನೆಲೆಗಳನ್ನು ಸ್ಥಾಪಿಸುವುದು ಅಕ್ರಮ ಎಂದು ಸಾರುವ ನಿರ್ಣಯವನ್ನು ಬೆಂಬಲಿಸಿ ವಿಶ್ವಸಂಸ್ಥೆಯಲ್ಲಿ ಭಾರತ ಮತ ಹಾಕಿರುವುದು ರಾಜತಾಂತ್ರಿಕ ವಲಯದಲ್ಲಿ ಭಾರಿ ಅಚ್ಚರಿಗೆ ಕಾರಣವಾಗಿದೆ. ಪೂರ್ವ ಜೆರುಸಲೇಂ ಸೇರಿದಂತೆ ಆಕ್ರಮಿತ ಪ್ಯಾಲೆಸ್ತೀನ್ ಭೂಭಾಗ ಹಾಗೂ ಆಕ್ರಮಿತ ಸಿರಿಯನ್ ಗೋಲನ್‌ನಲ್ಲಿ ಇಸ್ರೇಲ್‌ನ ವಸಾಹತು ಸ್ಥಾಪನೆ ಖಂಡಿಸುವ ನಿರ್ಣಯವನ್ನು ವಿಶ್ವಸಂಸ್ಥೆಯಲ್ಲಿ ಮಂಡಿಸಲಾಗಿತ್ತು. ಭಾರತ ಸೇರಿ 145 ದೇಶಗಳು ನಿರ್ಣಯದ ಪರ ಮತ ಚಲಾವಣೆ ಮಾಡಿದವು. ಅಮೆರಿಕಾ, ಕೆನಡಾ, ಇಸ್ರೇಲ್ ಸೇರಿ 7 ದೇಶಗಳು ವಿರುದ್ಧ ಮತ ಹಾಕಿದರೆ, 18 ರಾಷ್ಟ್ರಗಳು ತಟಸ್ಥವಾಗಿ ಉಳಿದವು. ಹೀಗಾಗಿ ನಿರ್ಣಯ ಅಂಗೀಕಾರವಾಯಿತು. ಗಾಜಾ ಪಟ್ಟಿಯಲ್ಲಿ ತಕ್ಷಣ ದೀರ್ಘಕಾಲಿನ ಹಾಗೂ ಸುಸ್ಥಿರ ಮಾನವೀಯ ಕದನ ವಿರಾಮ ಘೋಷಣೆ ಮಾಡಬೇಕು ಎಂದು ಕೆಲವೇ ವಾರಗಳ ಹಿಂದೆ ವಿಶ್ವಸಂಸ್ಥೆಯಲ್ಲಿ ನಿರ್ಣಯ ಮಂಡಿಸಲಾಗಿತ್ತು. ಯುದ್ಧ ನಿಲ್ಲಿಸುವ ಪರ ಆ ನಿರ್ಣಯ ಇದ್ದ ಕಾರಣ ಭಾರತ ಮತದಾನ ಪ್ರಕ್ರಿಯೆಯಿಂದಲೇ ದೂರ ಉಳಿದಿತ್ತು. ಆದರೆ, ಈಗ ಪ್ಯಾಲೆಸ್ತೀನ್ ಭೂಭಾಗದಲ್ಲಿ ಇಸ್ರೇಲ್ ವಸಾಹತು ಸ್ಥಾಪನೆ ಖಂಡಿಸುವ ನಿರ್ಣಯದ ಪರ ಮತ ಚಲಾವಣೆ ಮಾಡಿರುವುದು, ಅಚ್ಚರಿಗೆ ಕಾರಣವಾಗಿದೆ. ಪ್ಯಾಲೆಸ್ತೀನ್ ಭೂಭಾಗದಲ್ಲಿ ಜಾಗ ಕಸಿಯುವುದು, ಸಂರಕ್ಷಿತ ಜನರ ಜೀವನೋಪಾಯಗಳನ್ನು ಅಸ್ತವ್ಯಸ್ತಗೊಳಿಸುವುದು, ಬಲವಂತವಾಗಿ ನಾಗರಿಕರನ್ನು ಸ್ಥಳಾಂತರಿಸುವುದು, ಜಾಗವನ್ನು ಕಬಳಿಸುವುದನ್ನು ಖಂಡಿಸುವ ಅಂಶಗಳು ಈ ನಿರ್ಣಯದಲ್ಲಿದೆ. ಇಸ್ರೇಲ್ ಹಾಗೂ ಹಮಾಸ್ ನಡುವಿನ ಯುದ್ಧದಿಂದಾಗಿ ಗಾಜಾ ಪಟ್ಟಿನಲ್ಲಿ ಜನ ಜೀವನ ಸಂಕಷ್ಟಕ್ಕೆ ಸಿಲುಕಿದೆ. ಹಾಗಾಗಿ, ಮಾನವೀಯ ನೆಲೆಯಲ್ಲಿ ಕದನ ವಿರಾಮ ಘೋಷಿಸಬೇಕು ಎಂಬುದು ವಿಶ್ವಸಂಸ್ಥೆಯ ಒತ್ತಾಯವಾಗಿದೆ. ವಿಶ್ವದ ಹಲವು ರಾಷ್ಟ್ರಗಳು ಹಾಗೂ ಮಾನವ ಹಕ್ಕು ಸಂಘಟನೆಗಳ ಆಗ್ರಹವಾಗಿದೆ. ಒತ್ತೆಯಾಳುಗಳನ್ನಾಗಿ ಇಟ್ಟುಕೊಂಡಿರುವ ಇಸ್ರೇಲ್ ಪ್ರಜೆಗಳನ್ನು ಸುರಕ್ಷಿತವಾಗಿ ಬಿಡುಗಡೆ ಮಾಡಬೇಕು. ಅಲ್ಲಿವರೆಗೂ ಹಮಾಸ್ ವಿರುದ್ಧದ ಕಾರ್ಯಾಚರಣೆ ಸ್ಥಗಿತಗೊಳಿಸುವುದಿಲ್ಲ ಹಾಗೂ ಕದನ ವಿರಾಮ ಘೋಷಿಸುವ ಪ್ರಶ್ನೆಯೇ ಇಲ್ಲ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಪುನರುಚ್ಚರಿಸಿದ್ದಾರೆ.

ಕಾಂಗ್ರೆಸ್ಸಿಗರು ತಾತ್ಕಾಲಿಕ ಮುಖ್ಯಮಂತ್ರಿ ಗೊಂದಲ ಬಗೆಹರಿಸಿಕೊಳ್ಳಲಿ



ರಘು ಕೌಟಿಲ್ಯ ಟಾಂಗ್

ಮೈಸೂರು,ನ.13–ಕಾಂಗ್ರೆಸ್ಸಿಗರು ತಾತ್ಕಾಲಿಕ ಮುಖ್ಯಮಂತ್ರಿ ಎಂಬ ಗೊಂದಲವನ್ನು ಬಗೆಹರಿಸಿಕೊಳ್ಳಲಿ ಎಂದು ಬಿಜೆಪಿ ಮುಖಂಡರೂ ಆದ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಆರ್. ರಘು ಕೌಟಿಲ್ಯ ಟಾಂಗ್ ನೀಡಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷರಾಗಿ ನಿಯೋಜನೆಗೊಂಡಿರುವ ಬಿ.ವೈ.ವಿಜಯೇಂದ್ರರು ತಾತ್ಕಾಲಿಕ ಅಧ್ಯಕ್ಷರು ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ನೀಡಿದ ಹೇಳಿಕೆಗೆ ರಘು ಕೌಟಿಲ್ಯ ತಿರುಗೇಟು ನೀಡಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಸದ್ಯ ಕಾಂಗ್ರೆಸ್ ಪರಿಸ್ಥಿತಿ ಹರಿದ ಛತ್ರಿಯಂತಾಗಿದ್ದು, ದಿನಕ್ಕೊಬ್ಬರು ಮುಖ್ಯಮಂತ್ರಿ ಆಕಾಂಕ್ಷಿ ಹುಟ್ಟಿಕೊಳ್ಳುವ ಮೂಲಕ ಪೂರ್ಣ ಬಹುಮತದ ಕಾಂಗ್ರೆಸ್ ಸರ್ಕಾರದಲ್ಲಿ ಅಸ್ಥಿರತೆ ತಾಂಡವವಾಡುತ್ತಿದೆ. ಮುಖ್ಯಮಂತ್ರಿ ಸ್ಥಾನದಲ್ಲಿರುವವರಿಗೆ ಅಭದ್ರತೆ ಕಾಡುತ್ತಿದೆ ಎಂದಿದ್ದಾರೆ. ಬಸವ ತತ್ವ ಅನುಸರಿಸಿ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ ಬಿ.ಎಸ್.ಯಡಿಯೂರಪ್ಪ ಸರ್ವ ಸಮಾಜಗಳ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ. ತಂದೆಯ ಆದರ್ಶವನ್ನು ಮೈಗೂಡಿಸಿಕೊಂಡಿರುವ ವಿಜಯೇಂದ್ರ, ಸಂಘ ಸಂಸ್ಕಾರದಲ್ಲಿ ತರಬೇತಿ ಪಡೆದು ಪಕ್ಷ ಸಂಘಟನೆಯಲ್ಲಿ ಹಂತ ಹಂತವಾಗಿ ಬೆಳೆದು ನಾಡಿನ ಜನರ ಹಾಗೂ ಪಕ್ಷದ ಕಾರ್ಯಕರ್ತರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ನಾಡಿನ ಅಭಿವೃದ್ಧಿ ದೃಷ್ಟಿಯಿಂದ ಮತ್ತು ನೈಜ ರಾಜಕಾರಣ ವ್ಯವಸ್ಥೆಯನ್ನು ಸಶಕ್ತಗೊಳಿಸುವ ನಿಟ್ಟಿನಲ್ಲಿ ಬಿ.ವೈ. ವಿಜಯೇಂದ್ರ ಅವರನ್ನು ವರಿಷ್ಠರು ರಾಜ್ಯಾಧ್ಯಕ್ಷರಾಗಿ ನೇಮಿಸಿದ್ದು, ಪಕ್ಷದ ಕಾರ್ಯಕರ್ತರು ಮತ್ತು ಅಭಿಮಾನಿಗಳು ಸಂಭ್ರಮಿಸುತ್ತಿದ್ದಾರೆ. ಇದನ್ನು ಸಹಿಸದ ಕಾಂಗ್ರೆಸ್ಸಿಗರು ಮೈ ಪರಚಿಕೊಳ್ಳುತ್ತಿದ್ದಾರೆ ಎಂದು ರಘು ಕೌಟಿಲ್ಯ ಹೇಳಿದ್ದಾರೆ.



ಬೆಂಗಳೂರಿನ ಧವಳಗಿರಿ ನಿವಾಸದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾಗಿ ನೇಮಕಗೊಂಡಿರುವ ಬಿ.ವೈ.ವಿಜಯೇಂದ್ರ ಅವರನ್ನು ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ಮುಖಂಡರಾದ ವೆಂಕಟೇಶ್ ಹನೂರು, ಬಿ.ಪಿ.ಬೋರೇಗೌಡ. ಲಲಿತಾದ್ರಿಪುರದ ಬಸವರಾಜಪ್ಪ, ಕೋಟೆ ತಾಲೂಕು ಯುವ ಮುಖಂಡ ಗಿರಿಪ್ರಸಾದ್, ಮಾಜಿ ಶಾಸಕ ಎನ್.ಮಹೇಶ್, ಚಾ.ನಗರ ಜಿಲ್ಲಾಧ್ಯಕ್ಷ ನಾರಾಯಣ ಪ್ರಸಾದ್, ಡಾ.ಎಸ್.ದತ್ತೇಶ್‌ಕುಮಾರ್ ಅಭಿನಂದಿಸಿದರು.



ಮೈಸೂರು ನಗರಪಾಲಿಕೆ ವಾರ್ಡ್ ನಂ.19ರ ಜಯಲಕ್ಷ್ಮೀಪುರಂ ರಾಘವೇಂದ್ರಸ್ವಾಮಿ ಮಠದ ಹಿಂಭಾಗ 15 ಲಕ್ಷ ಲೀ. ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರದ ಉದ್ಘಾಟನೆಯನ್ನು ಶಾಸಕ ಕೆ.ಹರೀಶ್‌ಗೌಡ, ನಗರಪಾಲಿಕೆ ಸದಸ್ಯೆ ಶ್ರೀಮತಿ ಭಾಗ್ಯ ಮಾದೇಶ್ ಇತ್ತೀಚೆಗೆ ನೆರವೇರಿಸಿದರು. ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ನಗರಪಾಲಿಕೆ ಮಾಜಿ ಸದಸ್ಯ ಮಹದೇಶ್, ಕಾರ್ಯಪಾಲಕ ಅಭಿಯಂತರ ಅಶ್ವಿನ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರ ರವಿಕುಮಾರ್, ಇಂಜಿನಿಯರ್ ಮುದ್ದುಮಲ್ಲೇಗೌಡ, ಯುವ ಜೆಡಿಎಸ್ ಮುಖಂಡ ಮದನ್ ಮಾದೇಶ್, ವಾಣಿ ವಿಲಾಸ ನೀರು ಸರಬರಾಜು ಸಿಬ್ಬಂದಿ ಹಾಗೂ ಜಯಲಕ್ಷ್ಮೀಪುರಂ ನಿವಾಸಿಗಳಾದ ರಾಮಣ್ಣ, ಬಸವರಾಜು, ಕುಮಾರ್, ಮೋಹನ್‌ಬಾಬು, ಹಾಲಪ್ಪ, ರವೀಂದ್ರ, ಅನಿಲ್, ರಮೇಶ, ದಯಾನಂದ್, ಪಾಪಣ್ಣ, ಕೃಷ್ಣ, ನಿವಾಸ್ (ಪುಟ್ಟು), ಗಣೇಶ್, ನಾಗು, ಶಶಿ, ನೀರಜ್ ಬಾಬು, ಮಂಜು ಉಪಸ್ಥಿತರಿದ್ದರು. 15ನೇ ಹಣಕಾಸು ಯೋಜನೆಯಡಿ ಅಂದಾಜು 2.9 ಕೋಟಿ ವೆಚ್ಚದಲ್ಲಿ ಈ ಟ್ಯಾಂಕ್ ನಿರ್ಮಾಣ ಮಾಡಲಾಗಿದೆ.

ನೇಣು ಬಿಗಿದುಕೊಂಡು ವ್ಯಕ್ತಿ ಆತ್ಮಹತ್ಯೆ

ಮೈಸೂರು, ನ. 13(ಆರ್‌ಕೆ)– ದೊಡ್ಡ ಮೋರಿಗೆ ಅಳವಡಿಸಿದ್ದ ಕಬ್ಬಿಣದ ರಾಡ್‌ಗೆ ನೇಣು ಬಿಗಿದುಕೊಂಡು ವ್ಯಕ್ತಿಯೋರ್ವ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಜಯನಗರದಲ್ಲಿ ಸೋಮವಾರ ಬೆಳಗ್ಗೆ ಸಂಭವಿಸಿದೆ.

ಮೈಸೂರಿನ ಚನ್ನಗಿರಿಕೊಪ್ಪಲು ನಿವಾಸಿ ನಾಗರಾಜು ಅವರ ಮಗ ಪುಟ್ಟರಾಜು (51) ನೇಣಿಗೆ ಶರಣಾದವರು. ಹಲವು ವರ್ಷಗಳಿಂದ ಅನಾರೋಗ್ಯಕ್ಕೆ ತುತ್ತಾಗಿ ಬಳಲುತ್ತಿದ್ದ ಅವರು, ಬಾಧೆ ತಾಳಲಾರದೆ, ಜಯನಗರದ ಇಸ್ಕಾನ್ ಟೆಂಪಲ್ ಸಮೀಪ ದೊಡ್ಡ ಮೋರಿಗೆ ಅಳವಡಿಸಿದ್ದ ಕಬ್ಬಿಣದ ರಾಡ್‌ಗೆ ಹಗ್ಗದಿಂದ ನೇಣು ಬಿಗಿದುಕೊಂಡು ಕೊನೆಯುಸಿರೆಳೆದಿದ್ದಾರೆ. ಸ್ಥಳಕ್ಕೆ ಧಾವಿಸಿದ ಅಶೋಕಪುರಂ ಠಾಣೆ ಪೊಲೀಸರು, ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡು ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೃತದೇಹವನ್ನು ವಾರಸುದಾರರಿಗೆ ಒಪ್ಪಿಸಿದರು.

ನ.20ರಂದು ಜನತಾ ದರ್ಶನ

ಮೈಸೂರು,ನ.13–ಜಿಲ್ಲಾ ಮಟ್ಟದಲ್ಲಿ ಸಾರ್ವಜನಿಕರ ಅಹವಾಲುಗಳಿಗೆ ಸೂಕ್ತ ಪರಿಹಾರ ಒದಗಿಸುವ ಸಂಬಂಧ ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲೂಕಿನಲ್ಲಿ ನ.20ರಂದು ಜನತಾ ದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಕಾರ್ಯಕ್ರಮಕ್ಕೆ ಜಿಲ್ಲಾ ಮಟ್ಟದ ಅಧಿಕಾರಿಗಳು ತಮ್ಮ ಇಲಾಖೆಗೆ ಸಂಬಂಧಿಸಿದ, IPGRS ತಂತ್ರಾಂಶದಲ್ಲಿ ದಾಖಲಾಗಿರುವ ಅರ್ಜಿಗಳ ಮಾಹಿತಿಯೊಂದಿಗೆ ಖುದ್ದು ಹಾಜರಿರುವಂತೆ ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.11.2023 ಮಂಗಳವಾರ, ಮಳೆ ನಕ್ಷತ್ರ: ವಿಶಾಖ, 07.11.2023ರಿಂದ 19.11.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಅನೂರಾಧ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ

■ **ಮೈಸೂರು ಜಿಲ್ಲಾ ಸಹಕಾರ ಯೂನಿಯನ್ :** ಅಖಿಲ ಭಾರತ ಸಹಕಾರ ಸಪ್ತಾಹ, ಧ್ವಜಾರೋಹಣ : ಶಾಸಕ ಜಿ.ಟಿ. ದೇವೇಗೌಡ, ಉದ್ಘಾಟನೆ : ಶಾಸಕ ಜಿ.ಡಿ. ಹರೀಶ್‌ಗೌಡ, ವಿಶೇಷ ಆಹ್ವಾನಿತರು : ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಹೆಚ್.ವಿ. ರಾಜೀವ್, ಸ್ಥಳ : ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಭರತ ಪ್ರಕೃತಿ ಚಿಕಿತ್ಸಾ, ಸಸ್ಯೌಷಧ ಮತ್ತು ಯೋಗ ಶಿಕ್ಷಣ ಸಂಶೋಧನಾ ಸಂಸ್ಥೆ, ಸಾಯನ್ ಹರ್ಬಲ್ ಕೇರ್, ಗೌಂಡಿಯಾ, ಮಹಾರಾಷ್ಟ್ರ:** ಉಚಿತ ಆರೋಗ್ಯ ತಪಾಸಣೆ ಶಿಬಿರ, ಶುದ್ಧ ಸಸ್ಯ ಪೂರಕ ಪ್ರತ್ಯಾಹಾರ ಚಿಕಿತ್ಸೆ, ಸ್ಥಳ: ಸಂಸ್ಥೆಯ ಆವರಣ, ಕೆ.ಜಿ.ಕೊಪ್ಪಲು–ಜಯನಗರ ಜಂಕ್ಷನ್, ಬೆಳಗ್ಗೆ 11.30ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾನ್ ಖೇಡ ವೇದವ್ಯಾಸಚಾರ್ಯ ಅವರಿಂದ ಉಪನಿಷದ್‌ಗಳ ಬಗ್ಗೆ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

■ **ಹೆಚ್.ವಿ. ರಾಜೀವ್ ಸ್ನೇಹ ಬಳಗ :** ಮಕ್ಕಳ ದಿನಾಚರಣೆ ಅಂಗವಾಗಿ ವಿಜೇತ ಮಕ್ಕಳಿಗೆ ಬಹುಮಾನ ವಿತರಣೆ, ಉಪಸ್ಥಿತರು: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಉದ್ಯಮಿ ಯು.ಎಸ್.ಶೇಖರ್, ಮೇಯರ್ ಶಿವಕುಮಾರ್, ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಮಾಜಿ ಮೇಯರ್ ಸುನಂದ ಪಾಲನೇತ್ರ, ಪಾಲಿಕೆ ಸದಸ್ಯರಾದ ಎಂ.ಸಿ.ರಮೇಶ್, ಮಾಜಿ ಪಾಲಿಕೆ ಸದಸ್ಯ ಕೆ.ವಿ.ಮಲ್ಲೇಶ್, ಕಲಾವಿದ ಎಂ.ಕೆ.ಮುತ್ತಪ್ಪ, ಸ್ಥಳ: ಸುಮಸೋಪಾನ ಉದ್ಯಾನವನ, ವಿಶ್ವಮಾನವ ಜೋಡಿ ರಸ್ತೆ, ಸಂಜೆ 5.30ಕ್ಕೆ.

■ **ಗಾನಭಾರತೀ:** ರಾಸವೃಂದ ಕಲಾವಿದರಿಂದ ನರ್ತನ ನಮನ, ಕಲಾವಿದರು : ಪ್ರಣತಿ ಭಾರದ್ವಾಜ್, ಪ್ರಮಶ್ರೀ ಎನ್., ಅನೀಷ ಎಂ.ಎ., ಹರಿಣಿ ಎನ್., ಸಂಜನ ಎಂ.ಎಸ್., ಚಿನ್ಮಯಿ ಭಾರದ್ವಾಜ್, ನಿತ್ಯಶ್ರೀ ಶೆಟ್ಟಿ, ರೋಹಿತ್ ಈಶ್ವರ್, ನೃತ್ಯ ಸಂಯೋಜನೆ : ವಿದುಷಿ ನಂದಿನಿ ಈಶ್ವರ್, ಡಾ. ರೋಹಿತ್ ಈಶ್ವರ್, ಸಹ ನಿರ್ದೇಶನ : ವಿದುಷಿ ನಿತ್ಯಶ್ರೀ ಆರ್. ಮತ್ತು ವಿದುಷಿ ಚಿನ್ಮಯಿ ಭಾರದ್ವಾಜ್, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6.30ಕ್ಕೆ.

■ **ಕುಂಬಾರಕೊಪ್ಪಲು ಅಭ್ಯುದಯ ಸಂಘ :** ದೀಪಾವಳಿ ಹಬ್ಬದ ಪ್ರಯುಕ್ತ ಶ್ರೀ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ, ರಾತ್ರಿ 8 ಗಂಟೆಗೆ ಸಿದ್ದಪ್ಪಾಜಿ ಕೊಳದಿಂದ ಹಾಲರವಿ ಮತ್ತು ಬಾಯಿಬೀಗದ ಉತ್ಸವ ಊರಿನ ಪ್ರಮುಖ ಬೀದಿಗಳ ಮೂಲಕ ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನಕ್ಕೆ ಆಗಮನ.

ಸುತ್ತೂರು ಶ್ರೀ ಕ್ಷೇತ್ರದಲ್ಲಿಂದು, ನಂಜನಗೂಡು ತಾ.

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಕಾರ್ತಿಕಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಸುತ್ತೂರು ಶ್ರೀ ಕ್ಷೇತ್ರ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯ ಶಿಲ್ಪ, ಲೇಖನ ಮತ್ತು ಪ್ರಸ್ತುತಿ–ಟಿ.ಎಸ್. ಗೋಪಾಲ್, 6.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರ ಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 8.30 ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.45 ಕರೆಗೊಂದು ಗೀತೆ, 10.00 ಹೈದರಾಬಾದ್ ಸಹೋದರರು–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ವಿದ್ಯಾಭೂಷಣ, ಎಂ.ಎಸ್.ಲಕ್ಷ್ಮೀಶ, 12.45 ಒಂದು ಕೊಂಡರೆ ಒಂದು ಉಚಿತ–ಪ್ರವೀಣ್‌ಕುಮಾರ್ ಮಾವಿನ ಕಾಡು ಅವರಿಂದ ವಿನೋದ ಭಾಷಣ, 1.20 ಭಾವಗೀತೆಗಳು–ಪಿ.ಎಸ್.ರಂಜನಿ, ರೋಹಿಣಿ ಸುಧಾಮ್, 3.00 ಆರ್. ಪಾರ್ಥಸಾರಥಿ ಮತ್ತು ಸಂಗಡಿಗರು–ನಾಗಸ್ವರ ವಾದನ, 4.00ಕಥಾ ಕಾಲಕ್ಷೇಪ, ಬಲಿ ವಾಮನ, ಪ್ರಸ್ತುತಿ– ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ–ತಿಲಾಪಿಯಾ ಮೀನು ಸಾಕಾಣಿಕೆ ಕುರಿತು ಎಲ್.ಯೋಗೇಶ್ ಅವರೊಂದಿಗೆ ಸಂದರ್ಶನ ಸಂದರ್ಶಕರು–ಎನ್.ಕೇಶವಮೂರ್ತಿ, 9.30 ಎಂ.ವಿ.ವರಾಹಸ್ವಾಮಿ–ಗೋಟುವಾದ್ಯ, 10.00 ಗಮಕ ವ್ಯಾಖ್ಯಾನ–ವಾಚನ ಗಣೇಶ್ ಉಡುಪ, ವ್ಯಾಖ್ಯಾನ–ಜಿ.ಎಸ್.ಮಂಜುನಾಥ್, 10.30 ಸವಿನೆನಪು

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ನಾಳಿನ ಪಂಚಾಂಗ

15.11.2023 ಬುಧವಾರ, ಮಳೆ ನಕ್ಷತ್ರ: ವಿಶಾಖ, 07.11.2023ರಿಂದ 19.11.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ

■ **ನಾಗರಿಕ ವೇದಿಕೆ, ಪೂರ್ಣಪ್ರಜ್ಞಾವಿದ್ಯಾಕೇಂದ್ರ:** ವಿಸ್ತೃತ ಶಾಲಾ ಕೊಠಡಿಯ ಉದ್ಘಾಟನಾ ಸಮಾರಂಭ, ಗಣಪತಿ ಹೋಮ, ವಾಸ್ತುಹೋಮ, ಉದ್ಘಾಟನೆ: ಮೇಯರ್ ಶಿವಕುಮಾರ್, ಅಧ್ಯಕ್ಷತೆ: ವೇದಿಕೆ ಕಾರ್ಯಾಧ್ಯಕ್ಷ ಕೆ.ಆರ್.ಶ್ರೀರಂಗಯ್ಯ, ಮುಖ್ಯ ಅತಿಥಿಗಳು: ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು, ವೇದಿಕೆ ಗೌರವ ಅಧ್ಯಕ್ಷ ಬಿ.ಸಿ.ಪುಟ್ಟಸ್ವಾಮಿ, ಸ್ಥಳ: ವಿಶ್ವಮಾನವ ಜೋಡಿ ರಸ್ತೆ, ಬೆಳಗ್ಗೆ 9.30ಕ್ಕೆ.

■ **ಭರತ ಪ್ರಕೃತಿ ಚಿಕಿತ್ಸಾ, ಸಸ್ಯೌಷಧ ಮತ್ತು ಯೋಗ ಶಿಕ್ಷಣ ಸಂಶೋಧನಾ ಸಂಸ್ಥೆ, ಸಾಯನ್ ಹರ್ಬಲ್ ಕೇರ್, ಗೌಂಡಿಯಾ, ಮಹಾರಾಷ್ಟ್ರ:** ಉಚಿತ ಆರೋಗ್ಯ ತಪಾಸಣೆ ಶಿಬಿರ, ಶುದ್ಧ ಸಸ್ಯ ಪೂರಕ ಪ್ರತ್ಯಾಹಾರ ಚಿಕಿತ್ಸೆ, ಸ್ಥಳ: ಸಂಸ್ಥೆಯ ಆವರಣ, ಕೆ.ಜಿ.ಕೊಪ್ಪಲು–ಜಯನಗರ ಜಂಕ್ಷನ್, ಬೆಳಗ್ಗೆ 11.30ಕ್ಕೆ.

■ **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾನ್ ಖೇಡ ವೇದವ್ಯಾಸಚಾರ್ಯ ಅವರಿಂದ ಉಪನಿಷದ್‌ಗಳ ಬಗ್ಗೆ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

■ **ಕುಂಬಾರಕೊಪ್ಪಲು ಅಭ್ಯುದಯ ಸಂಘ :** ದೀಪಾವಳಿ ಹಬ್ಬದ ಪ್ರಯುಕ್ತ ಶ್ರೀ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ, ಕೊಂಡೋತ್ಸವ ನಂತರ ಕುಸ್ತಿ ಪಂದ್ಯಾವಳಿ, ಸ್ಥಳ: ಕೆಂಪೇಗೌಡ ಕ್ರೀಡಾಂಗಣ.

■ **ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ ಮಾಹಿತಿ ಮತ್ತು ಗ್ರಂಥಾಲಯ ವಿಜ್ಞಾನ ಹಿರಿಯ ವಿದ್ಯಾರ್ಥಿಗಳ ಸಂಘ :** ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ, ವಿಶೇಷ ಉಪನ್ಯಾಸ, ಗ್ರಂಥಗಳಿಂದ ಜ್ಞಾನಾಭಿವೃದ್ಧಿ, ಉಪಸ್ಥಿತರು : ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ. ಕೆ. ಅನಂತರಾಮು, ಮುಖ್ಯ ಅತಿಥಿಗಳು : ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ. ಚಂದ್ರಶೇಖರ್, ಅಧ್ಯಕ್ಷತೆ : ಮೈಸೂರು ವಿಶ್ವವಿದ್ಯಾನಿಲಯ ಮಾಹಿತಿ ಮತ್ತು ಗ್ರಂಥಾಲಯ ವಿಜ್ಞಾನ ವಿಭಾಗದ ಅಧ್ಯಕ್ಷ ಪ್ರೊ. ಎಂ. ಚಂದ್ರಶೇಖರ, ಸ್ಥಳ: ಡಾ.ಎಸ್.ಆರ್. ರಂಗನಾಥನ್ ಸಭಾಂಗಣ, ಮೈಸೂರು ವಿಶ್ವವಿದ್ಯಾನಿಲಯ ಮಾಹಿತಿ ಮತ್ತು ಗ್ರಂಥಾಲಯ ವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮಧ್ಯಾಹ್ನ 3ಕ್ಕೆ.

ಸುತ್ತೂರು ಶ್ರೀ ಕ್ಷೇತ್ರದಲ್ಲಿಂದು, ನಂಜನಗೂಡು ತಾ.

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಕಾರ್ತಿಕಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಸುತ್ತೂರು ಶ್ರೀ ಕ್ಷೇತ್ರ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಗಳಿಕೆ–ಉಳಿಕೆ –ಹೂಡಿಕೆ, ಹಣಕಾಸಿನ ಮಾಹಿತಿಯ ಬಾನುಲಿ ಸರಣಿ, ಪ್ರಸ್ತುತಿ–ಮೂಕನಹಳ್ಳಿ ರಂಗಸ್ವಾಮಿ, 6.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 7.15 ಆರೋಗ್ಯ ವಾಣಿ–ಪ್ರಾಯೋಜಿತ ಕಾರ್ಯಕ್ರಮ, 9.00ವೃತ್ತಿ ಮಾರ್ಗದರ್ಶನ, ವಿಷಯ–ಡಿಮೆನ್ಷಿಯಾ ಅಂದರೆ ಮರೆವಿನ ಕಾಯಿಲೆ, ಲಕ್ಷಣಗಳು ಮತ್ತು ಚಿಕಿತ್ಸೆ ತಜ್ಞರು–ಡಾ.ಅಭಿಜಿತ್ ಎಚ್.ಆರ್. ನಡೆಸಿಕೊಡುತ್ತಾರೆ ಬೇದ್ರೆ ಮಂಜುನಾಥ್, 10.00 ಪಂಡಿತ್ ಹರಿಪ್ರಸಾದ್ ಚೌರಾಸಿಯಾ–ಬಾನ್ಸುರಿವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಮಧು ಬಾಲಕೃಷ್ಣ, ಎಂ.ಎಸ್.ಶೀಲಾ, 12.45 ಕನಕ ಗೀತ ಗಾಂಭೀರ್ಯ–ಬಾನುಲಿ ಸರಣಿ. ರಚನೆ–ಡಾ.ಶ್ರೀಧರ ಹೆಗಡೆ ಭದ್ರನ್, ಪ್ರಸ್ತುತಿ–ದಿವಾಕರ ಹೆಗಡೆ, 1.20 ಭಾವಗೀತೆಗಳು, 1.30 ಮುಂಬೈನಲ್ಲಿ ನಡೆಯಲಿರುವ ಐ.ಸಿ.ಸಿ. ವಿಶ್ವಕಪ್ ಕ್ರಿಕೆಟ್ ಮೊದಲ ಸೆಮಿಫೈನಲ್ ಪಂದ್ಯದ ವೀಕ್ಷಕ ವಿವರಣೆ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 14 ಮಂಗಳವಾರ 2023

ಸಂಪುಟ: 44 | ಸಂಚಿಕೆ: 208 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.cor..

ಶುಭಾಶಯಗಳು



ನಾಡಿನ ಸಮಸ್ತರಿಗೂ ದೀಪಾವಳಿ ಹಬ್ಬದ ಶುಭಾಶಯಗಳು

ಬಿಡುವು

ದೀಪಾವಳಿ ಹಬ್ಬದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 15.11.2023ರ ಬುಧವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ಕೆಬಿಜೆಯವರ ಛೂಮಂತ್ರ.. ಛೂಮಂತ್ರ..



ಕರ್ನಾಟಕ ಬಿಜೆಪಿ ರಾಜಕೀಯ ದಿಗಂತದಲ್ಲಿ ಹಿರಿಯ ರಾಜಕಾರಣಿ ಮಗನ ಉದಯ

ಬಿ.ವೈ.ವಿಜಯೇಂದ್ರ ಈಗ ರಾಜ್ಯ ಬಿಜೆಪಿ ಅಧ್ಯಕ್ಷ

■ ಪುಟ–4

ಬರುವ ಲೋಕಸಭಾ ಚುನಾವಣೆಯಲ್ಲೇ ಮಹಿಳೆಯರಿಗೆ ಶೇ.33 ಸ್ಥಾನ ಕಲ್ಪಿಸುವ ಮೂಲಕ ಕಾಂಗ್ರೆಸ್ ಮೆಗಾ ಗೆಲುವಿನ ಮಂತ್ರ!



● ಒಟ್ಟು 28 ಕ್ಷೇತ್ರಗಳಲ್ಲಿ 8 ರಿಂದ 9 ಕ್ಷೇತ್ರಗಳಲ್ಲಿ ಮಹಿಳೆಯರ ಕಣಕ್ಕಿಳಿಸಲು ನಿರ್ಧಾರ ● ಈಗಾಗಲೇ ಪ್ರಭಾವಿ ಕುಟುಂಬದ ಮಹಿಳೆಯರ ಅಭ್ಯರ್ಥಿಯಾಗಿ ಆಯ್ಕೆ ಮಾಡಲು ಕಸರತ್ತು ● ಪ್ರಧಾನಿ ಮೋದಿ ಮಹಿಳಾ ಮೀಸಲಾತಿ ತಂದರೂ ನಾವೇ ಮೊದಲು ಆಚರಣೆ ಮಾಡಿದ ಹೆಗ್ಗಳಿಕೆ ತಂತ್ರ



ಬೆಂಗಳೂರು, ನ.13(ಕೆಎಂಶಿ)– ಮುಂಬರುವ ಲೋಕಸಭಾ ಚುನಾವಣೆಗೆ ಕರ್ನಾಟಕ ಕಾಂಗ್ರೆಸ್ ಮಹಿಳೆಯರಿಗೆ ಶೇಕಡಾ 33ರಷ್ಟು ಸ್ಥಾನಗಳನ್ನು ನೀಡಿ ಮಹಿಳಾ ಮತದಾರರನ್ನು ಬುಟ್ಟಿಗೆ ಹಾಕಿಕೊಳ್ಳಲು ಮುಂದಾಗಿದೆ.

ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಪೈಕಿ 8 ರಿಂದ 9 ಕ್ಷೇತ್ರಗಳನ್ನು ಮಹಿಳೆಯರಿಗೆ ಮೀಸಲಿರಿಸಲು ನಿರ್ಧರಿಸಿರುವ ಪಕ್ಷ, ಅಭ್ಯರ್ಥಿಗಳ ಆಯ್ಕೆಗೆ ಈಗಿನಿಂದಲೇ ಕಸರತ್ತು ನಡೆಸಿದೆ.

ಬೆಳಗಾವಿ, ಬಾಗಲಕೋಟೆ, ಉತ್ತರ ಕನ್ನಡ, ಶಿವಮೊಗ್ಗ, ಬೆಂಗಳೂರು ಉತ್ತರ, ಧಾರವಾಡ ಸೇರಿದಂತೆ 9 ಕ್ಷೇತ್ರಗಳನ್ನು ಮಹಿಳೆಯರಿಗೆ ಮೀಸಲಿಡಲು ನಿರ್ಧರಿಸಿದೆ. ಚುನಾವಣೆಯಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿಕೂಟ ಮಾಡಿಕೊಳ್ಳುವುದರ ಜೊತೆಗೆ ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಅವರನ್ನು ಪಕ್ಷದ ರಾಜ್ಯಾಧ್ಯಕ್ಷರನ್ನಾಗಿ ಮಾಡಿರುವುದು ಕಾಂಗ್ರೆಸ್ ವೇಗಕ್ಕೆ ಹಿನ್ನಡೆ ತಂದಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಕೇವಲ ಒಂದೇ ಒಂದು ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದ ಕಾಂಗ್ರೆಸ್ ಈ ಬಾರಿ ಕನಿಷ್ಠ 20 ಸ್ಥಾನಗಳಲ್ಲಿ ಗೆಲ್ಲುವ ಗುರಿ ಹೊಂದಿದೆ. ಆದರೆ, ಬಿಜೆಪಿ–ಜೆಡಿಎಸ್ ಮೈತ್ರಿ ಮತ್ತು ವೀರಶೈವ–ಲಿಂಗಾಯತ ಸಮುದಾಯಕ್ಕೆ ರಾಜ್ಯಾಧ್ಯಕ್ಷ ಸ್ಥಾನ ನೀಡಿರುವುದರಿಂದ ಸಹಜವಾಗಿ ಕಾಂಗ್ರೆಸ್ ಗೆಲುವಿನ ಪರ್ಯಾಯ ಮಾರ್ಗಗಳನ್ನು ಹುಡುಕುತ್ತಿದೆ. ಈ ನಿಟ್ಟಿನಲ್ಲಿ ಮಹಿಳೆಯರಿಗೆ ಶೇ.33ರಷ್ಟು ಸ್ಥಾನ ನೀಡಿ ● 9ನೇ ಪುಟಕ್ಕೆ



ಭವಿಷ್ಯವೂ ಪ್ರಜ್ವಲಿಸಲಿ...

ದೀಪಾವಳಿ ಹಿನ್ನೆಲೆಯಲ್ಲಿ ಸೋಮವಾರ ರಾತ್ರಿ ಮೈಸೂರಲ್ಲಿ ತಾಯಿ, ಪುಟ್ಟ ಮಗುವಿಗೆ ತಾನೇ ಸುರುಸುರು ಬತ್ತಿ ಹೊತ್ತಿಸಿ ಕೊಡುವ ಮೂಲಕ ಸುರಕ್ಷಿತ ದೀಪಾವಳಿ ಪಾಠ ಮಾಡಿದರು.

ನಕ್ಕರೆ ಅದೇ ಸ್ವರ್ಗ

ಗಂಡ : "ಎರಡು ಕಣ್ಣುಗಳಿವೆ ನಿನಗೆ. ಜೊತೆಗೆ ಎರಡು ಗಾಜುಗಳು. ಅಕ್ಕಿಯಲ್ಲಿ ಕಲ್ಲು ತೆಗೆಯೋಕೆ ಬರೋಲ್ವಾ?"

ಮಡದಿ : "ನಿಮಗೆ 30 ಹಲ್ಲುಗಳಿವೆ. ಜೊತೆಗೆ ಎರಡು ಹಲ್ಲುಗಳನ್ನು ಕಟ್ಟಿಸಿಕೊಂಡಿದ್ದೀರಿ. ಕಲ್ಲುಗಳನ್ನು ಅಗಿಯೋಕೆ ಆಗಲ್ವಾ!?"

ಮೈಸೂರು ಮಿತ್ರ

ಮಂಗಳವಾರ, 14 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ತನಗೆ ತೋರಿದ್ದೇ ಸರಿಯಾದ ದಾರಿ ಇರಬಹುದು. ಆದರೆ ಅದು ತನ್ನ ಹೊರತು ಇನ್ನೂ ಹತ್ತು ಜನಕ್ಕೆ ಸರಿಯಾಗಿ ಕಂಡಿರಬೇಕು.–ವಿ.ಎಂ. ಇನಾಂದಾರ್

ವೇದ ಸುಳ್ಳಾದರೂ { ದುಡ್ಡೇ ದೊಡ್ಡಪ್ಪ,
ಗಾದೆ ಸುಳ್ಳಾಗದು { ವಿದ್ಯೆ ಅದರಪ್ಪ

ನಿಮ್ಮ ಪತ್ರಗಳು

ವಿಜಯೇಂದ್ರಗೆ ಅಧ್ಯಕ್ಷ ಸ್ಥಾನ ಸೂಕ್ತ ಆಯ್ಕೆ

ಮಾನ್ಯರೆ,

ಯಡಿಯೂರಪ್ಪ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಿ ಬೊಮ್ಮಾಯಿ ಅವರನ್ನು ಅಧಿಕಾರಕ್ಕೆ ತಂದು ಕೂರಿಸಿದ ಬಿಜೆಪಿ ವರಿಷ್ಠರು ರಾಜ್ಯದಲ್ಲಿ ಹೊಸ ಗೇಮ್ ಪ್ಲಾನ್ ನೊಂದಿಗೆ ಅಧಿಕಾರ ಹಿಡಿದು, ಹಿರಿಯ ನಾಯಕರನ್ನು ಪಕ್ಕಕ್ಕೆ ಸರಿಸಿ ತಮ್ಮ ಹಿಡಿತದಲ್ಲಿ ಪಕ್ಷ ಇರಬೇಕೆಂದು ಬಯಸಿದಂತೆ ಇತ್ತು. ಆದರೆ ಅದು ನಡೆಯಲಿಲ್ಲ. ಬಹುಶಃ ಯಡಿಯೂರಪ್ಪನವರೇ ಸಿಎಂ ಆಗಿದ್ದರೆ ಅಧಿಕಾರಕ್ಕೆ ಪಕ್ಷ ಬರುತ್ತಿತ್ತೋ ಏನೋ. ಸದ್ಯ ಅದು ಮುಗಿದ ಅಧ್ಯಾಯ. ಆದರೂ ಒಬ್ಬ ಸಮರ್ಥ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲಾಗದಿರುವುದು ಒಂದು ರಾಷ್ಟ್ರೀಯ ಪಕ್ಷದ ಬಲಹೀನತೆಯೇ ಸರಿ.

ಶಿಕಾರಿಪುರದ ಶಾಸಕ ಬಿ.ವೈ.ವಿಜಯೇಂದ್ರಗೆ ಬಿಜೆಪಿ ವರಿಷ್ಠರು ಅಧ್ಯಕ್ಷ ಹುದ್ದೆ ನೀಡಿದ್ದಾರೆ. ತಂದೆ ನಾಮಬಲದೊಂದಿಗೆ ಇವರಿಗೆ ಸಮುದಾಯದ ಬೆಂಬಲವು ಇದೆ. ಸಂಘಟನೆಯ ಚತುರತೆಯು ಇವರಿಗಿದೆ. ಹಾಗಾಗಿಯೇ ಇವರಿಗೆ ಈ ಹುದ್ದೆ ದೊರೆತಿದೆ ಎನ್ನಬಹುದು. ವಯಸ್ಸಿನಲ್ಲಿ ಕಿರಿಯರಿಗೆ ಮಣೆ ಹಾಕಿರುವ ಕಾರಣ ಹಿರಿಯರ ಮುನಿಸು ಮಾರಕವಾಗಬಹುದು. ಜಾತಿ ಧರ್ಮದಂತಹ ಸೂಕ್ಷ್ಮ ವಿಚಾರಗಳಿಗೆ ಕೈ ಹಾಕದೆ ಅಭಿವೃದ್ಧಿ ಪರ ಆಲೋಚನೆಯೊಂದಿಗೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟಿಸಬೇಕಿದೆ ಒಟ್ಟಾರೆ ಅಧ್ಯಕ್ಷರ ಆಯ್ಕೆ ಸೂಕ್ತವಾಗಿದೆ.

–ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ ಜಿಲ್ಲೆ

ಹದಿನೈದು ವರ್ಷ ಹಳೆಯದಾದ ಸರ್ಕಾರಿ ಬಸ್ಸುಗಳನ್ನು ನಿಲ್ಲಿಸಲಿ

ಮಾನ್ಯರೆ,

ಕೇಂದ್ರ ಸರ್ಕಾರದ ಆದೇಶದಂತೆ ಸಾರ್ವಜನಿಕರ ಬಳಿ ಇರುವ ಹದಿನೈದು ವರ್ಷದ ಹಿಂದಿನ ವಾಹನಗಳನ್ನು ಬಳಕೆ ಮಾಡದಂತೆ ಸೂಚಿಸಿದ ಆದೇಶವು ಸಾರ್ವಜನಿಕರಿಗಷ್ಟೆ ಸೀಮಿತವಾಗದೆ ಸರ್ಕಾರಗಳು ಇದನ್ನು ಚಾಚೂ ತಪ್ಪದೇ ಪಾಲಿಸಬೇಕು. ಕರ್ನಾಟಕ ರಾಜ್ಯದಲ್ಲಿಂದು ಶಕ್ತಿ ಯೋಜನೆಯ ಅಡಿಯಲ್ಲಿ ಹೆಚ್ಚಿನ ಬಸ್ಸುಗಳನ್ನು ಕಲ್ಪಿಸುವಾಗ ಹದಿನೈದು ವರ್ಷಗಳ ಹಿಂದಿನ ಕೆಎಸ್ಆರ್‌ಟಿಸಿ ಬಸ್‌ಗಳ ಬಳಕೆಗೆ ಸಚಿವರ ಆದೇಶ ಇಲ್ಲದಿದ್ದರೂ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅಧಿಕಾರಿಗಳು ಸಾರ್ವಜನಿಕರ ಬಳಕೆಗೆ ನೀಡುತ್ತಿರುವುದು ಸರಿಯೇ?

ಇಂತಹ ಹಳೆಯ ಬಸ್ಸಿನಲ್ಲಿ ಅನೇಕ ತೊಂದರೆಗಳಿದ್ದು, ಬಸ್ಸಿನ ಸೀಟಿನಲ್ಲಿ ನಟ್ಟು ಬೋಲ್ಟ್‌ಗಳಿಲ್ಲದೆ, ಗೇರು ಬಾಕ್ಸ್‌ಗಳು ವಿಪರೀತ ಶಬ್ದಗಳೊಂದಿಗೆ ಮತ್ತು ಕಿಟಕಿಗಳು ಚಲನೆಯಾಗದೇ ಜಾಮ್ ಆಗಿರುತ್ತವೆ. ಇನ್ನಿತರ ತೊಂದರೆಗಳಿದ್ದರೂ ಡಿಪೋ ಅಧಿಕಾರಿಗಳು ಯಾವುದನ್ನೂ ಪರಿಶೀಲಿಸದೆ ಸರ್ಕಾರದ ಆಡಳಿತವನ್ನು ಮೆಚ್ಚಿಸಲು ರಾಜ್ಯಾದ್ಯಂತ ಬಸ್‌ಗಳನ್ನು ಓಡಿಸುತ್ತಿರುವುದು ವಿಷಾದನೀಯ. ಕೆಲವು ಸಮಯದಲ್ಲಿ ಪ್ರಯಾಣಿಸುವಾಗ ಬಸ್ಸುಗಳು ಕೆಟ್ಟು ರಸ್ತೆಗಳಲ್ಲಿ ನಿಲ್ಲುವುದರಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಸರ್ಕಾರಿ ಕಚೇರಿಗಳು ಮತ್ತು ಆಸ್ಪತ್ರೆಗೆ ತೆರಳುವಂತಹವರು ತೀವ್ರ ತೊಂದರೆಗೀಡಾಗುತ್ತಿದ್ದಾರೆ. ಆದ್ದರಿಂದ ಹದಿನೈದು ವರ್ಷ ಮೀರಿದ ಬಸ್ಸುಗಳನ್ನು ಸಾರ್ವಜನಿಕ ಬಳಕೆಗೆ ಬಳಸುವುದನ್ನು ಸರ್ಕಾರ ನಿಲ್ಲಿಸಬೇಕಿದೆ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಮೈಸೂರು ನಗರ ವಿಶ್ವಸ್ಥ ಮಂಡಳಿಯನ್ನು ಅಸ್ವಸ್ಥ ಮಾಡಿದ ಮುಡಾ ಅಧಿಕಾರಿಗಳು!

ಮಾನ್ಯರೆ,

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ), ಕೆಲವು ಅಧಿಕಾರಿಗಳು ಮತ್ತು ನೌಕರರು ಬ್ರ್ಯಾಂಕ್‌ನೊಂದಿಗೆ ಶಾಮೀಲಾಗಿ, ಬ್ಯಾಂಕ್ ಸೀಲ್ ಮತ್ತು ಚಲನ್‌ಗಳನ್ನು ದುರುಪಯೋಗಪಡಿಸಿಕೊಂಡು, ಸಾರ್ವಜನಿಕರಿಗೆ ಭಾರಿ ವಂಚನೆಯಾಗಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ.

ಹಿಂದೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವನ್ನು ನಗರ ವಿಶ್ವಸ್ಥ ಮಂಡಳಿ ಎಂದು ಕರೆಯಲಾಗುತ್ತಿತ್ತು. ಆದರೆ, ಈಗ ನಗರಾಭಿವೃದ್ಧಿ ಅಸ್ವಸ್ಥ ಪ್ರಾಧಿಕಾರ ಎನ್ನುವಂತಾಗಿದೆ. ಈಗಾಗಲೇ ಅಕ್ರಮ ಹಾದಿಯಲ್ಲಿ ಮಂಜೂರಾಗಿರುವ ಒಂದು ಸಾವಿರ ನಿವೇಶನಗಳನ್ನು ಪ್ರಾಧಿಕಾರ ಸರ್ಕಾರ ಆದೇಶದಂತೆ ರದ್ದುಮಾಡಿ ಆದೇಶ ಹೊರಡಿಸಿದೆ. ಕೆಲವು ಮುಡಾ ಅಧಿಕಾರಿಗಳು ಹೇಳುವಂತೆ, ಇದಕ್ಕಿಂತಲೂ ಪ್ರಾಧಿಕಾರದಲ್ಲಿ ನಡೆದಿರುವ ದೊಡ್ಡ ಪ್ರಮಾಣದ ಹಗರಣವೆಂದರೆ, ಬದಲಿ ನಿವೇಶನಗಳ ಮಂಜೂರಾತಿ. ಇದರಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರ ನಡೆದಿದೆ ಎಂದು ಹೇಳಲಾಗುತ್ತಿದೆ. ರಾಜೀವ್‌ನಗರದಲ್ಲಿ ಮಂಜೂರಾದ ನಿವೇಶನಕ್ಕೆ ಬದಲಾಗಿ ವಿಜಯನಗರದಲ್ಲಿ ಬದಲಿ ನಿವೇಶನ ನೀಡುವುದು, ರಾಜೀವ್‌ನಗರದ ನಿವೇಶನದ ಬೆಲೆಗಿಂತ, ನಾಲ್ಕು ಪಟ್ಟು ಹೆಚ್ಚು ಬೆಲೆ ವಿಜಯನಗರದಲ್ಲಿದೆ. ಹೀಗೆ ಬದಲಿ ನಿವೇಶನಗಳನ್ನು ಹಣ ಪಡೆದು ಬೇಕಾಬಿಟ್ಟಿ ಮಂಜೂರು ಮಾಡಲಾಗಿದೆ.

ವಿಜಯನಗರದ ಮೊದಲ ಹಾಗೂ ಎರಡನೇ ಹಂತದ ಪ್ರಮುಖ ರಸ್ತೆಗಳಲ್ಲಿ ಅಳತೆ, ಮೌಲ್ಯವನ್ನು ಗಾಳಿಗೆ ತೂರಿ ಬದಲಿ ನಿವೇಶನ ಮಂಜೂರು ಮಾಡಲಾಗಿದೆ. ಮತ್ತೊಂದು ಅದ್ಭುತವೆಂದರೆ ಹೀಗೆ ಬದಲಿ ನಿವೇಶನ ಪಡೆದ ಪ್ರಭಾವಿಗಳು ಮೂಲ ನಿವೇಶನವನ್ನೂ ಕಬಳಿಸಿರುವ ಸಾಧ್ಯತೆ ಹೆಚ್ಚಿದೆ ಎಂದು ಮುಡಾ ಆವರಣದಲ್ಲಿ ಸಿಬ್ಬಂದಿಯೇ ಮಾತನಾಡಿಕೊಳ್ಳುತ್ತಿದ್ದಾರೆ. ಮೈಸೂರು ಜಿಲ್ಲಾಧಿಕಾರಿ ಡಾ. ರಾಜೇಂದ್ರ ದಕ್ಷರಾಗಿದ್ದು, ಇದರ ಬಗ್ಗೆ ಸಮಗ್ರ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿದರೆ ಮೈಸೂರು ಜನತೆ ಅವರಿಗೆ ಚಿರಋಣಿಯಾಗಿರುತ್ತಾರೆ!

ಈ ಬಗ್ಗೆ ಸರ್ಕಾರವೂ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಲಿ.

–ಬೂಕನಕೆರೆ ವಿಜೇಂದ್ರ, ಲೇಖಕರು, ಕುವೆಂಪುನಗರ, ಮೈಸೂರು

ಹಗಲಿನಲ್ಲಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡಲು ಮನವಿ

ಮಾನ್ಯರೆ,

ಮೈಸೂರು ತಾಲೂಕು ವರುಣ ಹೋಬಳಿ ಮೇಗಳಾಪುರ ವೃತ್ತಕ್ಕೆ ಸಂಬಂಧಿಸಿದಂತೆ ಕುಪ್ಪೇಗಾಲ ಗ್ರಾಮದ ಪಂಪ್‌ಸೆಟ್‌ಗಳಿಗೆ ಒಂದು ವಾರ ಪೂರ್ತಿ ರಾತ್ರಿ 1 ಗಂಟೆಯಿಂದ ಬೆಳಗಿನ ಜಾವ 6 ಗಂಟೆಯವರೆಗೆ ವಿದ್ಯುತ್ ಸರಬರಾಜು ಮಾಡುವುದಾಗಿ ಇಲಾಖೆಯವರು ತಿಳಿಸಿದ್ದಾರೆ. ಆದರೆ, ಈ ಸಮಯದಲ್ಲಿ ಕಾಡುಪ್ರಾಣಿಗಳ ಕಾಟ ಇರುವುದರಿಂದ ರೈತರು ಈ ಸಮಯದಲ್ಲಿ ಜಮೀನುಗಳಿಗೆ ಹೋಗಲು ಅನಾನುಕೂಲವಾಗಿ ವಿದ್ಯುತ್ ಸರಬರಾಜಾದರೂ ರೈತರಿಗೆ ಅನುಕೂಲ ಇಲ್ಲದಂತಾಗಿದೆ. ಅಲ್ಲದೆ ಕೆಟ್ಟು ಹೋದ ಪಂಪ್‌ಸೆಟ್‌ಗಳನ್ನು ವಾರ ಪೂರ್ತಿ ರಿಪೇರಿ ಮಾಡಲು ಸಾಧ್ಯವಾಗದೇ ಬೆಳೆಗಳು ನೀರಿನಲ್ಲದೆ ಒಣಗಿ ನಷ್ಟ ಉಂಟಾಗುತ್ತದೆ. ಆದುದರಿಂದ ಸಂಬಂಧಪಟ್ಟವರು ವಿದ್ಯುತ್ ಸರಬರಾಜನ್ನು ರಾತ್ರಿ ವೇಳೆ ನೀಡದೆ ಹಗಲು ನೀಡಿ ರೈತರು ಬೆಳೆ ಬೆಳೆಯಲು ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಎಸ್.ಸಿದ್ದೇಗೌಡ, ಕುಪ್ಪೇಗಾಲ, ಮೈಸೂರು ತಾ.



ಕೆಬಿಜಿಯವರ

ಛೂಮಂತ್ರ... ಛೂಮಂತ್ರ... ಛೂಮಂತ್ರ...

ಕರ್ನಾಟಕ ಬಿಜೆಪಿ ರಾಜಕೀಯ ದಿಗಂತದಲ್ಲಿ ಹಿರಿಯ ರಾಜಕಾರಣಿ ಮಗನ ಉದಯ

ಬಿ.ವೈ.ವಿಜಯೇಂದ್ರ ಈಗ ರಾಜ್ಯ ಬಿಜೆಪಿ ಅಧ್ಯಕ್ಷ

ಕರ್ನಾಟಕದಲ್ಲಿ ಬಿಜೆಪಿ ಹೆಚ್ಚಾಗಿ ರಾಜೀ ಕಸರತ್ತುಗಳನ್ನು ಆಪರೇಷನ್ ಕಮಲದಂತಹ ಪೂರ್ವ ನಿಯೋಜಿತ ಹುನ್ನಾರಗಳನ್ನು ಮಾಡಿಕೊಂಡು ಅಧಿಕಾರ ಗದ್ದುಗೆಯ ರುಚಿಯನ್ನು ಕಂಡುಕೊಂಡಿತು. ಬಿ.ಎಸ್. ಯಡಿಯೂರಪ್ಪನವರು ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ನಂತರ ಬಸವರಾಜ ಬೊಮ್ಮಾಯಿಯವರ ನೇತೃತ್ವವಿದ್ದ ಸರ್ಕಾರದಲ್ಲಿದ್ದುಕೊಂಡು 2023ರ ವಿಧಾನ ಸಭಾ ಚುನಾವಣೆಯಲ್ಲಿ ಪಕ್ಷ ದಯನೀಯ ಸೋಲು ಕಂಡಿತು.

ಕಾಂಗ್ರೆಸ್ ಪಕ್ಷ 135 ಸ್ಥಾನಗಳನ್ನು ಗೆದ್ದು ಸ್ಪಷ್ಟ ಬಹುಮತ ಪಡೆದರೆ, ಬಿಜೆಪಿ ಕರುಣಾಜನಕ 66 ಸ್ಥಾನಗಳಲ್ಲಿ ಮಾತ್ರ ಗೆದ್ದಿತು. ಈ ಸೋಲು ಎಷ್ಟರ ಮಟ್ಟಿಗೆ ಎಂದರೆ ತನ್ನ ಮತದಾರರ ನಂಬಿಕೆ ಹೇಗೆ ಕುಸಿಯಿತು ಎಂಬುದು ಕೂಡ ಬಿಜೆಪಿ ಅರಿವಿಗೆ ಬರಲಿಲ್ಲ.

ಖಡಾಖಂಡಿತವಾಗಿ, ಬಿಜೆಪಿ ಆಳ್ವಿಕೆಯ ಬಲಿಪಶುಗಳು ಅದರ ಭಾರಿ ಭ್ರಷ್ಟಾಚಾರವನ್ನು ಮರೆಯದೆ ತಮ್ಮ ಮತಗಳನ್ನು ಬಿಜೆಪಿಗೆ ಹಾಕದೇ ಅಧಿಕಾರದಿಂದ ಹೊರಗುಳಿಸಿದರು. ಬಿಜೆಪಿಗೆ ಅದರ ರಾಜಕೀಯ ಅಸ್ತ್ರ ಆಪರೇಷನ್ ಕಮಲವನ್ನು ನಡೆಸಲು ಅಥವಾ ಕಾಂಗ್ರೆಸ್ ಪಕ್ಷವನ್ನು ಬೇರೆ ಮಾರ್ಗ ಹಿಡಿದು ಅಧಿಕಾರದಿಂದ ವಂಚಿತಗೊಳಿಸಲು ಸಾಧ್ಯವೇ ಆಗಲಿಲ್ಲ.

ರಾಜ್ಯ ಬಿಜೆಪಿಗೆ ಮತದಾರರ ನಂಬಿಕೆಯನ್ನು ಉಳಿಸಿಕೊಂಡು ರಾಜ್ಯದಲ್ಲಿ ಪಕ್ಷವನ್ನು ಸಂಘಟಿಸುವ ದಾರಿ ಕಾಣದೆ, ಕಿತ್ತು ತಿನ್ನುತ್ತಿರುವ ಆಂತರಿಕ ಭಿನ್ನಮತವನ್ನು ಶಮನಗೊಳಿಸುವುದು ಸಾಧ್ಯವಾಗದೇ, ಅತಂತ್ರ ಸ್ಥಿತಿ ತಲುಪಿತು.

ಆಶ್ಚರ್ಯಕರ ವಿಷಯವೆಂದರೆ, ರಾಜ್ಯದಲ್ಲಿ ಅವಮಾನಕರ ಸೋಲನ್ನು ಅನುಭವಿಸಿದ ನಂತರವು ದೆಹಲಿಯ ಬಿಜೆಪಿ ಹೈಕಮಾಂಡ್ ಏನು ನಡೆದಿಲ್ಲವೆಂಬಂತೆ ಕೈಚೆಲ್ಲಿ ಕುಳಿತದ್ದು. ಒಂದೋ ಅದು ಅಸಹಾಯಕವಾಗಿತ್ತು ಅಥವಾ ಕಳೆದುಕೊಂಡ ರಾಜಕೀಯ ನೆಲೆಯನ್ನು ಹಿಂಪಡೆಯುವಲ್ಲಿ ಸೋತಿತ್ತು. ಎಷ್ಟರ ಮಟ್ಟಿಗೆ ಎಂದರೆ ಬಿಜೆಪಿ ಒಬ್ಬ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಕೂಡ ಆಗಲಿಲ್ಲ. ಪಕ್ಷ ಕರ್ನಾಟಕ ರಾಜ್ಯಾಧ್ಯಕ್ಷರನ್ನು ಬದಲಾಯಿಸುವ ನಿಟ್ಟಿನಲ್ಲೂ ಕ್ರಮ ಕೈಗೊಳ್ಳಲಿಲ್ಲ. ರಾಜಕೀಯದಲ್ಲಿ ಈ ರೀತಿಯ ನಡೆ ಪಕ್ಷದ ಬೆಳವಣಿಗೆಗೆ ಅಪಾಯಕಾರಿ. ಆದರೆ ಬಿಜೆಪಿ ಹೈಕಮಾಂಡ್‌ನ ಈ ನಡೆಯಿಂದ ರಾಜ್ಯ ಬಿಜೆಪಿಯಲ್ಲಿ ಇನ್ನೂ ಹೆಚ್ಚು ಅರಾಜಕತೆ ನಿರ್ಮಾಣವಾಯಿತು ಎಂದರೆ ತಪ್ಪಾಗಲಾರದು.

ಈ ವಿಚಾರವಾಗಿ ಇನ್ನೂ ಹೆಚ್ಚಿನ ನಿರ್ಲಕ್ಷ್ಯ ತೋರಿದರೆ ಪಕ್ಷಕ್ಕೆ ಭಾರಿ ಧಕ್ಕೆಯಾಗಬಹುದು ಎಂಬ ಅಂಶ ಕಡೆಗೂ ಬಿಜೆಪಿಗೆ ಅರಿವಾಗಿರುವುದು ಸಂತೋಷ. ಪ್ರಾಯಶಃ ಇದೇ ಕಾರಣಕ್ಕೆ ಬಿಜೆಪಿ ಹೈಕಮಾಂಡ್ ಲಿಂಗಾಯತ ಸಮುದಾಯಕ್ಕೆ ಸೇರಿದ ಯುವ ರಾಜಕಾರಣಿ ಹಾಗೂ ಬಿ.ಎಸ್. ಯಡಿಯೂರಪ್ಪನವರ ಸುಪುತ್ರರಾದ **ಬಿ.ವೈ. ವಿಜಯೇಂದ್ರ**ರನ್ನು ಕರ್ನಾಟಕದ ರಾಜ್ಯಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ.

ನಾನು ಬಿ.ವೈ. ವಿಜಯೇಂದ್ರರನ್ನು 2018ರಲ್ಲಿ ಭೇಟಿಯಾಗಿ ಮಾತನಾಡಿದ್ದೆ. ಅವರು ಆಗ ಜಿಲ್ಲೆಯ ವರುಣ ವಿಧಾನಸಭಾ ಕ್ಷೇತ್ರದಿಂದ ಚುನಾವಣಾ ಕಣಕ್ಕಿಳಿಯಲು ಮುಂದಾಗಿದ್ದರು. ಅದೊಂದೇ ಬಾರಿ ನಾನು ಅವರ ಚುನಾವಣಾ ಭಾಷಣಗಳನ್ನು ಕೇಳಿದ್ದು ಹಾಗೂ ಅವರೊಡನೆ ಮಾತನಾಡಿದ್ದು.

ವರುಣ ಕ್ಷೇತ್ರದಿಂದ ಕಣಕ್ಕಿಳಿದ ಅಂದಿನ ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯನವರ ಪುತ್ರರಾದ ಡಾ. ಯತೀಂದ್ರ ಸಿದ್ದರಾಮಯ್ಯನವರಿಗೆ ಗೆಲುವು ಬಹಳ ಸುಲಭ ಎಂದೇ ಎಲ್ಲರೂ ಭಾವಿಸಿದ್ದರು. ಬಿಜೆಪಿಗೆ ಸೂಕ್ತ ಅಭ್ಯರ್ಥಿಯನ್ನು ಅವರ ವಿರುದ್ಧ ಕಣಕ್ಕಿಳಿಸಲು ಆಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಅಂದಿನ ಬಿಜೆಪಿ ರಾಜ್ಯಾಧ್ಯಕ್ಷರಾಗಿದ್ದ ಬಿ.ಎಸ್. ಯಡಿಯೂರಪ್ಪನವರ ಪುತ್ರ ಬಿ.ವೈ. ವಿಜಯೇಂದ್ರರನ್ನು ಕಣಕ್ಕಿಳಿಸಿ ಸಿದ್ದರಾಮಯ್ಯನವರ ಪುತ್ರ ಡಾ. ಯತೀಂದ್ರರನ್ನು ಮಣಿಸಬೇಕು ಎಂದು ಎಣಿಸಲಾಗಿತ್ತು.

ಆದರೆ ವಿಜಯೇಂದ್ರರ ಹೆಸರನ್ನು ಅಧಿಕೃತವಾಗಿ ಘೋಷಿಸಲಾಗಿರಲಿಲ್ಲ. ಹಾಗಿದ್ದರೂ ವಿಜಯೇಂದ್ರ ವರುಣ ಕ್ಷೇತ್ರ ವ್ಯಾಪ್ತಿಯಲ್ಲಿ ಒಂದು ದೊಡ್ಡ ಬಂಗಲೆಯನ್ನು ಬಾಡಿಗೆಗೆ ಪಡೆದು ಚುನಾವಣಾ ಪ್ರಚಾರ ಪ್ರಾರಂಭಿಸಿದ್ದರು. ಕಾರ್ಯಕರ್ತರು ಪ್ರಚಾರ ರಣಕಹಳೆ ಮೊಳಗಿಸಲು ತುದಿಗಾಲಲ್ಲಿ ನಿಂತಿದ್ದರು.

ಈ ಅವಧಿಯಲ್ಲಿ ಒಬ್ಬ ಪತ್ರಕರ್ತನಾಗಿ ನಾನು ವಿಜಯೇಂದ್ರ ಮತ್ತು ಸ್ಥಳೀಯ ಬಿಜೆಪಿ ಮುಖಂಡರೊಂದಿಗೆ ಪ್ರಚಾರವನ್ನು ವರದಿ ಮಾಡಲು ವರುಣದ ಕೆಲವು ಹಳ್ಳಿಗಳಿಗೆ ಹೋಗಿದ್ದೆ. ಇನ್ನೇನು ವಿಜಯೇಂದ್ರರೇ ಅಭ್ಯರ್ಥಿಯಾಗಿ ಘೋಷಣೆ ಆಗುತ್ತದೆ ಎಂಬ ಮಾತುಗಳು ದಟ್ಟವಾಗಿ ಹಬ್ಬಿದ್ದವು.

ಯಾವುದೇ ದೇಶದ ರಾಜಕೀಯವನ್ನು ಗಮನಿಸಿದರೆ, ಅದು ರಾಜಪ್ರಭುತ್ವವಿರಬಹುದು, ಸರ್ವಾಧಿಕಾರವಿರಬಹುದು ಅಥವಾ ಪ್ರಜಾಪ್ರಭುತ್ವವೇ ಇರಬಹುದು, ಅಲ್ಲಿ ಅರಮನೆಯಲ್ಲಿ ಅಥವಾ ಸಂಸತ್ತಿನಲ್ಲಿ ಅಥವಾ ಪಕ್ಷದಲ್ಲಿ ಒಂದಲ್ಲ ಒಂದು ಅನಿರೀಕ್ಷಿತ ಬೆಳವಣಿಗೆ ಇದ್ದೇ ಇರುತ್ತದೆ. ಇಲ್ಲೂ ಕೂಡ ಆದದ್ದು ಅದೇ. ವಿಜಯೇಂದ್ರ ಅವರ ತಂದೆ ಬಿ.ಎಸ್. ಯಡಿಯೂರಪ್ಪನವರು ನಂಜನಗೂಡಿನಲ್ಲಿ ಮಗನ ಹೆಸರನ್ನು ವರುಣ ಕ್ಷೇತ್ರದ ಅಭ್ಯರ್ಥಿ ಎಂದು ಅಧಿಕೃತವಾಗಿ ಘೋಷಿಸಲು ಯೋಜಿತವಾಗಿದ್ದ ಒಂದು ದೊಡ್ಡ ಸಮಾವೇಶದಲ್ಲಿ ತಮ್ಮ ಪುತ್ರ ವರುಣದಿಂದ ಸ್ಪರ್ಧಿಸುವುದಿಲ್ಲ ಎಂದು ಅನಿರೀಕ್ಷಿತವಾಗಿ ಎಲ್ಲರಿಗೂ ಆಶ್ಚರ್ಯವಾಗುವಂತೆ ಘೋಷಿಸಿಬಿಟ್ಟರು. ಆ ಕ್ಷಣವೇ ಡಾ. ಯತೀಂದ್ರ ಸಿದ್ದರಾಮಯ್ಯನವರ ಗೆಲುವು ನಿಶ್ಚಿತವಾಯಿತು ಎನ್ನುವುದರಲ್ಲಿ ಸಂಶಯವಿರಲಿಲ್ಲ.

ಈಗ 2018ರಿಂದ 2023ರ ಮಧ್ಯದ ಐದು ವರ್ಷಗಳಲ್ಲಿ ಬಿ.ವೈ. ವಿಜಯೇಂದ್ರ ಬಿಜೆಪಿಯಲ್ಲಿ ಹಲವಾರು ಅವತಾರಗಳನ್ನು ತಾಳಿದ್ದಾರೆ. ಅವರು ಬಿಜೆಪಿ ಯುವ ಮೋರ್ಚಾದ ಉಪಾಧ್ಯಕ್ಷರಾಗಿದ್ದರು. ಬಿಜೆಪಿಯ ಸೈದ್ಧಾಂತಿಕ ಮಾತೃ ಸಂಸ್ಥೆ **ರಾಷ್ಟ್ರೀಯ ಸ್ವಯಂ ಸೇವಕ ಸಂಘದ** (ಆರ್‌ಎಸ್‌ಎಸ್) ಹಲವಾರು ಸ್ಥಾನಗಳನ್ನು ಅಲಂಕರಿಸಿದ್ದಾರೆ. ಈ ವರ್ಷ ಮೇ ತಿಂಗಳಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಶಾಸಕರಾಗಿರುವುದು ಎಲ್ಲಕ್ಕಿಂತಲೂ ಮುಖ್ಯ.

ವಿಜಯೇಂದ್ರ, ಕಾನೂನು ಪದವೀಧರರು ಹಾಗೂ ವಕೀಲರಾಗಿ ಕೆಲವು ಕಾಲ ಸೇವೆ ಸಲ್ಲಿಸಿದ್ದಾರೆ. ಅನೇಕ ರಾಜಕಾರಣಿಗಳಿಗೆ ಹೋಲಿಸಿದರೆ ಅವರು ವಯಸ್ಸಿಗೆ, ಅನುಭವಕ್ಕೆ ತಕ್ಕಂತೆ ರಾಜಕೀಯದಲ್ಲಿ ಮಾಗಿದ್ದಾರೆ. ಅಳತೆ ತಪ್ಪದಂತೆ ಎಚ್ಚರದಿಂದ ಯೋಚಿಸಿ ನಂತರ ಮಾತನಾಡುತ್ತಾರೆ. ಅವರ ಮುಂದಾಳತ್ವದಲ್ಲಿ ನಡೆದ ಅನೇಕ ಉಪ ಚುನಾವಣೆಗಳಲ್ಲಿ ಬಿಜೆಪಿಗೆ ಸಂದ ಗೆಲುವು ಚುನಾವಣಾ ರಣಕಣದಲ್ಲಿ ಅವರ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿ.

ಪ್ರಾಯಶಃ, ಅವರಲ್ಲಿರುವ ಈ ಎಲ್ಲಾ ಗುಣಗಳನ್ನು ಪರಿಗಣಿಸಿ ಬಿಜೆಪಿ ಹೈಕಮಾಂಡ್ ಸ್ವಲ್ಪ ತಡವಾದರೂ ಸೂಕ್ತ ಸ್ಥಾನಕ್ಕೆ ಸೂಕ್ತ ವ್ಯಕ್ತಿಯನ್ನೇ ರಾಜ್ಯಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದಂತೆ ಕಾಣುತ್ತದೆ. ಬಿ.ವೈ.ವಿಜಯೇಂದ್ರರವರು ಹರಿದು ಹಂಚಿ ಹೋಗಿ ಬಹುತೇಕ ಕ್ಷೀಣಿಸುತ್ತಿರುವ ಬಿಜೆಪಿಗೆ ಹೊಸ ಚೈತನ್ಯವನ್ನು, ಹುರುಪನ್ನು ತುಂಬುತ್ತಾರೆ ಎಂಬುದರಲ್ಲಿ ಎರಡು ಮಾತಿಲ್ಲ. ಮುಂಬರುವ 2024ರ ಲೋಕಸಭಾ ಚುನಾವಣೆಯಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲಿಸಿ ದೆಹಲಿಯತ್ತ ತಾವು ವಿಜಯಯಾತ್ರೆ ಮಾಡುತ್ತಾರೆ ಎಂಬುದು ಖಂಡಿತ.

[ಇಂಗ್ಲೀಷ್ ಲೇಖನದ ಕನ್ನಡಾನುವಾದ: ಡಿ.ಜೆ.ಶುಭ]

email: voice @starofmysore.com



ಬಿ.ವೈ.ವಿಜಯೇಂದ್ರ, ಶಾಸಕರು ಹಾಗೂ ರಾಜ್ಯ ಬಿಜೆಪಿ ನೂತನ ಅಧ್ಯಕ್ಷರು

> "ಬಿ.ವೈ.ವಿಜಯೇಂದ್ರರವರು ಹರಿದು ಹಂಚಿ ಹೋಗಿ ಬಹುತೇಕ ಕ್ಷೀಣಿಸುತ್ತಿರುವ ಬಿಜೆಪಿಗೆ ಹೊಸ ಚೈತನ್ಯವನ್ನು, ಹುರುಪನ್ನು ತುಂಬುತ್ತಾರೆ ಎಂಬುದರಲ್ಲಿ ಎರಡು ಮಾತಿಲ್ಲ. ಮುಂಬರುವ 2024ರ ಲೋಕಸಭಾ ಚುನಾವಣೆಯಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲಿಸಿ ದೆಹಲಿಯತ್ತ ತಾವು ವಿಜಯ ಯಾತ್ರೆ ಮಾಡುತ್ತಾರೆ ಎಂಬುದು ಖಂಡಿತ.

ಎಂಸಿಡಿಸಿಸಿ ಬ್ಯಾಂಕ್ ಹಾಲಿ ಆಡಳಿತ ಮಂಡಳಿ ಅವಧಿ ನ.21ಕ್ಕೆ ಅಂತ್ಯ

ಬ್ಯಾಂಕ್ ಆಡಳಿತ ಹಿಡಿಯಲು ಕಾಂಗ್ರೆಸ್ ತಂತ್ರ; ಚುನಾವಣೆ ವಿಳಂಬ ಆರೋಪ

ಮೈಸೂರು, ನ.13(ಎಸ್‌ಬಿಡಿ)– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ(ಎಂಸಿಡಿಸಿಸಿ) ಬ್ಯಾಂಕ್ ಆಡಳಿತ ಮಂಡಳಿ ಅಧಿಕಾರಾವಧಿ ನ.21ಕ್ಕೆ ಪೂರ್ಣವಾಗಲಿದ್ದು, ಸಹಕಾರ ಕ್ಷೇತ್ರದ ಅಖಾಡದಲ್ಲಿ ಕುತೂಹಲ ಹೆಚ್ಚಿದೆ.

ಎಂಸಿಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿಯ ಒಟ್ಟು 17 ನಿರ್ದೇಶಕ ಸ್ಥಾನಕ್ಕೆ 2018ರ ನ.12ರಂದು ನಡೆದ ಚುನಾವಣೆಯಲ್ಲಿ ಜಿ.ಡಿ.ಹರೀಶ್‌ಗೌಡರ ಬಣ ಜಯಭೇರಿ ಭಾರಿಸಿತ್ತು. ಹತ್ತು ದಿನದ ನಂತರ(ನ.22) ಜಿ.ಡಿ.ಹರೀಶ್‌ಗೌಡರು(ಹಾಲಿ ಹುಣಸೂರು ಶಾಸಕ) ಅಧ್ಯಕ್ಷರಾಗಿ ಹಾಗೂ ಬಿ.ಎನ್.ಸದಾನಂದ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಈ ಆಡಳಿತ ಮಂಡಳಿ ಅಧಿಕಾರಾವಧಿ ನ.22ಕ್ಕೆ ಕೊನೆಗೊಳ್ಳಲಿದೆ.

ಈ ನಡುವೆ ಜೆಡಿಎಸ್ ಬೆಂಬಲಿತರನ್ನು ದೂರವಿಟ್ಟು ಎಂಸಿಡಿಸಿಸಿ ಬ್ಯಾಂಕ್ ಅಧಿಕಾರಗಾದಿ ಹಿಡಿಯುವ ನಿಟ್ಟಿನಲ್ಲಿ ಕಾಂಗ್ರೆಸ್ ತಂತ್ರಗಾರಿಕೆ ರೂಪಿಸಿದ್ದು, ಈ ನಿಟ್ಟಿನಲ್ಲಿ ಚುನಾವಣೆ ವಿಳಂಬ ಮಾಡುವ ಪ್ರಯತ್ನ ನಡೆಸಿದೆ ಎನ್ನಲಾಗಿದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ನಿಯಮಾವಳಿಗಳು 1960ರ ನಿಯಮ 13 (ಡಿ) (1), (2)ರ ಅನ್ವಯ ಮತದಾರರ ಪಟ್ಟಿ ತಯಾರಿಕಾ ಕಾರ್ಯ ನಡೆಯದ ಕಾರಣ ನೀಡಿ, ಚುನಾವಣಾ ಅಧಿಸೂಚನೆಯನ್ನು ಹಿಂಪಡೆಯಲಾಗಿದೆ ಎಂದು ಹೇಳಲಾಗುತ್ತಿದೆ. ಇನ್ನು ತ್ವರಿತವಾಗಿ ಚುನಾವಣೆ ನಡೆಸಲು ನಿರ್ದೇಶನ ನೀಡುವಂತೆ ಕೋರಿ ಪ್ರಸಕ್ತ ಆಡಳಿತ ಮಂಡಳಿ ನ್ಯಾಯಾಲಯದ ಮೆಟ್ಟಿಲೇರಿದ್ದು, ನ್ಯಾಯಾಲಯ ನ.15ಕ್ಕೆ ವಿಚಾರಣೆ ಮುಂದೂಡಿದೆ. ಈ ಎಲ್ಲಾ ಬೆಳವಣಿಗೆಯಿಂದಾಗಿ ಎಂಸಿಡಿಸಿಸಿ ಸಹಕಾರ ಕ್ಷೇತ್ರದ ಗಮನ ಸೆಳೆದಿದೆ.

ಹಿರಿಯ ಶಾಸಕ ಜಿ.ಟಿ.ದೇವೇಗೌಡರ ಪುತ್ರ, ಹುಣಸೂರು ಶಾಸಕರೂ ಆದ ಜಿ.ಡಿ.ಹರೀಶ್ ಗೌಡರ ನೇತೃತ್ವದ ಆಡಳಿತ ಮಂಡಳಿ ಐದು ವರ್ಷ ಪೂರೈಸುತ್ತಿದೆ. ಬ್ಯಾಂಕ್ ವ್ಯಾಪ್ತಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಗೃಹ ನಿರ್ಮಾಣ ಸಹಕಾರ ಸಂಘಗಳು, ಪಟ್ಟಣ ಸಹಕಾರ ಬ್ಯಾಂಕ್‌ಗಳು, ಪತ್ತಿನ ಸಹಕಾರ ಸಂಘಗಳು, ಬಳಕೆದಾರರ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು ಹಾಗೂ ಇತರ ಸಹಕಾರಿ ಸಂಘಗಳಲ್ಲಿ ಜೆಡಿಎಸ್ ಬೆಂಬಲಿತರ ಪ್ರಾಬಲ್ಯವಿದೆ. ಜಿ.ಡಿ.ಹರೀಶ್ ಗೌಡರಿಗೆ ಇಂದಿಗೂ ಎಲ್ಲರ ಸಹಕಾರವಿದೆ. ಇವರ ಹಿಡಿತ ತಪ್ಪಿಸಿ ಎಂಸಿಡಿಸಿಸಿ ಬ್ಯಾಂಕ್‌ನಲ್ಲಿ ಕಾಂಗ್ರೆಸ್ ಬೆಂಬಲಿತರ ಮೂಲಕ ಪಾರುಪತ್ಯ ಸಾಧಿಸಬೇಕೆಂಬ ನಿಟ್ಟಿನಲ್ಲಿ ತಂತ್ರಗಾರಿಕೆ ನಡೆದಿದೆ ಎನ್ನಲಾಗಿದೆ.

ಬ್ಯಾಂಕ್‌ನ ಆಡಳಿತ ಮಂಡಳಿ ಸಲ್ಲಿಸಿರುವ ಅರ್ಜಿ ವಿಚಾರಣೆ ನ.15ರಂದು ನಡೆಯಲಿದ್ದು, ಸದ್ಯ ಎಲ್ಲರ ಚಿತ್ತ ನ್ಯಾಯಾಲಯದತ್ತ ಇದೆ. ಚುನಾವಣೆ ನಡೆಸಲು ನಿರ್ದೇಶನ ಸಿಗಲಿದೆಯೋ? ಹಾಲಿ ಆಡಳಿತ ಮಂಡಳಿ ಮುಂದುವರಿಕೆಗೆ ಅವಕಾಶ ಸಿಗುತ್ತದೆಯೋ? ಅಥವಾ ಚುನಾವಣೆವರೆಗೆ ಆಡಳಿತಾಧಿಕಾರಿ ನೇಮಕಕ್ಕೆ ಸೂಚನೆ ದೊರಕುವುದೋ? ಕಾದು ನೋಡಬೇಕಿದೆ.





ನ.16ರಂದು ಸಾರಿಗೆ ಅದಾಲತ್

ಮೈಸೂರು, ನ.13– ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಕೊಠಡಿ ಸಂ.8ರಲ್ಲಿ ನವೆಂಬರ್ 16ರಂದು ಬೆಳಗ್ಗೆ 11.30ಕ್ಕೆ ಸಾರಿಗೆ ಆದಾಲತ್ ನಡೆಸಲಾಗುವುದು. ಸಾರ್ವಜನಿಕರು ಸಾರಿಗೆ ಕಚೇರಿಗೆ ಸಂಬಂಧಿಸಿದ ಅಹವಾಲುಗಳು ಇದ್ದಲ್ಲಿ, ದಾಖಲಾತಿಗಳೊಂದಿಗೆ ಖುದ್ದು ಹಾಜರಾಗಬಹುದು ಎಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕಾರ್ಯದರ್ಶಿ ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೀಪಗಳ ಬೆಳಗಿ ಸುರಕ್ಷಿತ ದೀಪಾವಳಿ ಆಚರಣೆ ಸೂಕ್ತ

ಕಾಂಗ್ರೆಸ್ ಮುಖಂಡ ಶುಶ್ರುತ್‌ಗೌಡ ಅಭಿಮತ



ಮೈಸೂರು, ನ. 13– ಹೊಯ್ಸಳ ಟ್ರಸ್ಟ್ ವತಿಯಿಂದ ಟೌನ್ ಹಾಲ್‌ನಲ್ಲಿ ಪೌರಕಾರ್ಮಿಕರಿಗೆ ಹಣತೆ ಹಾಗೂ ಸಿಹಿ ವಿತರಿಸಿ ದೀಪಾವಳಿ ಆಚರಿಸಲಾಯಿತು.

ದೀಪಗಳನ್ನು ಬೆಳಗಿಸುವ ಮೂಲಕ ದೀಪಾವಳಿ ಹಬ್ಬವನ್ನು ಮಾಲಿನ್ಯ ರಹಿತವಾಗಿ ಆಚರಿಸೋಣ ಎಂದು ಕಾಂಗ್ರೆಸ್ ಮುಖಂಡ ಡಾ. ಶುಶ್ರುತ ಗೌಡ ಮನವಿ ಮಾಡಿದರು. ಪಟಾಕಿ ಸಿಡಿಸುವುದರಿಂದ ವಾಯು ಮಾಲಿನ್ಯ ಮತ್ತು ಶಬ್ದ ಮಾಲಿನ್ಯ ಉಂಟಾಗುತ್ತದೆ. ಪಟಾಕಿಯಿಂದ ಉಂಟಾಗುವ ತ್ಯಾಜ್ಯವನ್ನು ವಿಲೇವಾರಿ ಮಾಡುವುದು ಪೌರಕಾರ್ಮಿಕರಿಗೆ ದೊಡ್ಡ ಸವಾಲು. ಪಟಾಕಿ ಸಿಡಿಸುವ ಬದಲು ರಂಗೋಲಿ ಹಾಕಿ ದೀಪ ಬೆಳಗುವ ಮೂಲಕ ದೀಪಾವಳಿ ಆಚರಿಸಿದಲ್ಲಿ ಪ್ರಾಣಿ ಸಂಕುಲ ಮತ್ತು ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ಹಾನಿ ಇರುವುದಿಲ್ಲ. ಯುವಪೀಳಿಗೆಯವರು ಹಸಿರು ದೀಪಾವಳಿ ಆಚರಿಸುವ ಪಣ ತೊಡಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಕೆಪಿಸಿಸಿ ಸದಸ್ಯರಾದ ನಜರ್‌ಬಾದ್ ನಟರಾಜ್, ಉದ್ಯಮಿ ರಾಜೇಶ್ ಪಲ್ಲನಿ, ರವಿಚಂದ್ರ, ರಾಕೇಶ್, ಲೋಕೇಶ್, ಮಂಜುಗೌಡ, ಸ್ಥಳೀಯ ಆರೋಗ್ಯ ಅಧಿಕಾರಿ ಧನಂಜಯ್ ಇನ್ನಿತರರು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

Promotional Feature

'ಸಮಸ್ತ ಶಿಕ್ಷಕರಿಗೆ ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಷಯಗಳು'



ಸದನ ಪಟು, ವಾಗ್ಮಿ, ಹುಟ್ಟು ಹೋರಾಟಗಾರ ಕೆ.ಟಿ.ಶ್ರೀಕಂಠೇಗೌಡ

* ಶಿಕ್ಷಕರು, ಪದವೀಧರರು ಹಾಗೂ ರೈತಪರ ಹೋರಾಟಗಾರರು
* ಸದನದ ಹೊರಗೆ ಹಾಗೂ ಒಳಗೆ ಗಟ್ಟಿ ಧ್ವನಿಯ ಕ್ರಿಯಾಶೀಲ ವ್ಯಕ್ತಿತ್ವದ ಮಾತುಗಾರ
* ಪಕ್ಷಾತೀತವಾಗಿ ಎಲ್ಲರೂ ಒಪ್ಪಿದ 'ಅತ್ಯುತ್ತಮ ಶಾಸಕ' ಪ್ರಶಸ್ತಿ ಪುರಸ್ಕೃತ

'ಚಿಂತರಕ ಛಾವಡಿ' ಎಂದೇ ಕರೆಯಲ್ಪಡುವ ಮೇಲ್ಮನೆಯಲ್ಲಿ ಅಪಾರ ಜ್ಞಾನ ಹಾಗೂ ವಿದ್ವತ್ ವುಳ್ಳ ಬೆರಳಣಿಕೆ ಶಾಸಕರ ಪೈಕಿ ಒಬ್ಬರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರು, ಜನಸಾಮಾನ್ಯರ ಹಾಗೂ ಶಾಸಕರುಗಳ ಗಮನ ಸೆಳೆದ ಕಾರಣ ಕ್ಕಾಗಿ ಉತ್ತಮ ಸಂಸದೀಯ ಪಟು ಎಂಬ ಹೆಗ್ಗಳಿಕೆಗೆ ಪಾತ್ರರಾಗಿ ಸನ್ಮಾನ್ಯ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದಲ್ಲಿ 'ಅತ್ಯುತ್ತಮ ಶಾಸಕ' ಪ್ರಶಸ್ತಿಗೆ ಆಯ್ಕೆ ಮಾಡಿ ಪ್ರಸ್ತುತ ಸನ್ಮಾನ್ಯ ಸಿದ್ದರಾಮಯ್ಯ ಸರ್ಕಾರದಲ್ಲಿ ಪ್ರಶಸ್ತಿಗೆ ಭಾಜನರಾದದ್ದು ಕೆ.ಟಿ.ಶ್ರೀಕಂಠೇಗೌಡರ ಹೆಗ್ಗಳಿಕೆ. ಪಕ್ಷವನ್ನು ಪ್ರತಿನಿಧಿಸುವ ಸರ್ಕಾರ ತನ್ನ ಪಕ್ಷದ ಶಾಸಕರಿಗೆ ಈ ರೀತಿಯ ಪ್ರಶಸ್ತಿಗಳನ್ನು ಕೊಡುವುದು ವಾಡಿಕೆ. ಆದರೆ ಪ್ರತಿಪಕ್ಷದ ಶಾಸಕರಿಗೆ ಈ ರೀತಿ 'ಅತ್ಯುತ್ತಮ ಶಾಸಕ' ಎಂದು ಪ್ರಶಸ್ತಿ ನೀಡುವುದು ಬಹುತೇಕ ವಿರಳ.

ತಮ್ಮ ಕಂಚಿನ ಕಂಠದಿಂದ ವಿಧಾನಪರಿಷತ್‌ನಲ್ಲಿ ವಿವಿಧ ವಿಷಯಗಳು, ಜ್ವಲಂತ ಸಮಸ್ಯೆಗಳ ಕುರಿತಂತೆ ತಳಸ್ಪರ್ಶಿ ಅಧ್ಯಯನದೊಂದಿಗೆ ನಿಖರವಾಗಿ ಹಾಗೂ ನಿರರ್ಗಳವಾಗಿ ಮಾತನಾಡುವ ಕಲೆಯನ್ನು ಸಿದ್ಧಿಸಿಕೊಂಡಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ನಿತ್ಯಸಚಿವ ಕೆ.ವಿ.ಶಂಕರಗೌಡ, ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣ, ಬಿ.ಎಸ್.ಯಡಿಯೂರಪ್ಪ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಎಸ್.ಡಿ. ಜಯರಾಂ, ರಾಜಕೀಯ ಮುತ್ಸದ್ದಿ ಹೆಚ್.ಡಿ. ಚೌಡಯ್ಯ, ಗಾಂಧಿವಾದಿ ಜಿ.ಮಾದೇಗೌಡರಂತಹ ಘಟಾನುಘಟಿ ನಾಯಕರನ್ನು ಬಲ್ಲವರಾಗಿ ಅವರ ಆದರ್ಶಗಳನ್ನು ಅನುಸರಿಸಿ ಎರಡು ಬಾರಿ ಕರ್ನಾಟಕ ವಿಧಾನ ಪರಿಷತ್ತಿಗೆ ಆಯ್ಕೆಗೊಂಡು ಜನಸಾಮಾನ್ಯರ, ಶಿಕ್ಷಕರ, ಪದವೀಧರರ, ರೈತರ ಹೀಗೆ ಸಮಸ್ತರ ಸಮಸ್ಯೆಗಳಿಗೆ ಶ್ರೀಕಂಠೇಗೌಡರು ದನಿಯಾಗಿದ್ದಾರೆ. ಉತ್ತಮ ಭಾಷಾ ಜ್ಞಾನ ದೊಂದಿಗೆ ತಮ್ಮ ಮಾತಿನಿಂದಲೇ ಮೋಡಿ ಮಾಡುವ ಶ್ರೀಕಂಠೇಗೌಡರು ಜನ ಸಾಮಾನ್ಯರ ಪಾಲಿನ ಪ್ರೀತಿಯ 'ಕೆಟಿಎಸ್' ಆಗಿದ್ದಾರೆ.



ಎರಡು ದಶಕಗಳಿಗೂ ಮೀರಿ ಶಿಕ್ಷಕರಾಗಿ ಸೇವೆ

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕೊಪ್ಪ ಗ್ರಾಮದ ಶ್ರೀಕಂಠೇಗೌಡರು ತಮ್ಮ ಆಸಕ್ತಿಯ ರಾಜಕಾರಣ ಕ್ಷೇತ್ರಕ್ಕೆ ಪೂರಕವಾಗಿ ಮೈಸೂರು ವಿಶ್ವವಿದ್ಯಾಲಯದಿಂದ ರಾಜ್ಯಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಅಧ್ಯಾಪಕ ಹುದ್ದೆಗೆ ಪಾದಾರ್ಪಣೆ ಮಾಡಿದರು. ಮದ್ದೂರಿನ ಹೆಚ್.ಕೆ.ವೀರಣ್ಣಗೌಡ ಪ್ರಥಮ ದರ್ಜೆ ಕಾಲೇಜಿನಲ್ಲಿ 4 ವರ್ಷಗಳ ಕಾಲ, ಮಂಡ್ಯದ ಮಹಿಳಾ ಸರ್ಕಾರಿ ಕಾಲೇಜಿನಲ್ಲಿ 4 ವರ್ಷಗಳ ಕಾಲ ಉಪನ್ಯಾಸಕರಾಗಿ, ಕೊಪ್ಪದ ಸರ್ವೋದಯ ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಹಾಗೂ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ತದನಂತರ ಬೆಕ್ಕಳಲೆಯ ಗಾಂಧಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಬರೋಬ್ಬರಿ 24 ವರ್ಷಗಳ ಸುದೀರ್ಘ ಅವಧಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ.



ದಕ್ಷತೆಗೆ ದಕ್ಕಿದ ಅತ್ಯುತ್ತಮ ಶಾಸಕ ಪ್ರಶಸ್ತಿ



2022ನೇ ಸಾಲಿನ ಕರ್ನಾಟಕ ವಿಧಾನ ಪರಿಷತ್ತಿನ 'ಅತ್ಯುತ್ತಮ ಶಾಸಕ' ಪ್ರಶಸ್ತಿಗೆ ಕೆ.ಟಿ.ಶ್ರೀಕಂಠೇಗೌಡರು ಪಾತ್ರರಾಗಿದ್ದಾರೆ. ವಿಧಾನಪರಿಷತ್ತಿನ ಸಭಾಪತಿಗಳಾದ ಶ್ರೀ ಬಸವರಾಜ ಎಸ್.ಹೊರಟ್ಟಿ ಅವರ ಅಧ್ಯಕ್ಷತೆಯಲ್ಲಿ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಕರ್ನಾಟಕ ವಿಧಾನ ಪರಿಷತ್ತಿನ 'ಅತ್ಯುತ್ತಮ ಶಾಸಕ' ಪ್ರಶಸ್ತಿಯನ್ನು ಕೆ.ಟಿ.ಶ್ರೀಕಂಠೇ ಗೌಡರಿಗೆ ನೀಡಿ ಸನ್ಮಾನಿಸಿರುವುದು ಅವರ ಜೀವನದ ಅವಿಸ್ಮರಣೀಯ ಕ್ಷಣವಾಗಿದೆ. ಅತ್ಯುತ್ತಮ ಶಾಸಕ ಪ್ರಶಸ್ತಿಗೆ ಭಾಜನರಾದ ಶ್ರೀಕಂಠೇಗೌಡರಿಗೆ ಮಂಡ್ಯ ಜಿಲ್ಲೆಯ ಪರವಾಗಿ ಮಂಡ್ಯ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆದಿಚುಂಚನಗಿರಿ ಪೀಠಾಧಿಪತಿ ಶ್ರೀ ಶ್ರೀ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರ ಸಮ್ಮುಖದಲ್ಲಿ ಅಭಿನಂದನೆ ಸಲ್ಲಿಸಿದರೆ, ಪಕ್ಕದ ಮೈಸೂರಿನಲ್ಲಿ ಸುತ್ತೂರು ಶ್ರೀಕ್ಷೇತ್ರದ ಪೀಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ಶಿವರಾತ್ರೀಶ್ವರ ದೇಶೀಕೇಂದ್ರ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ಮಾಜಿ ಮುಖ್ಯಮಂತ್ರಿ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಅವರಿಂದ ಸನ್ಮಾನಿಸಿ ಅಭಿನಂದಿಸಲಾಯಿತು. ಅಂತೆಯೇ ಹಾಸನದಲ್ಲೂ ಕೂಡ ಶಿಕ್ಷಕರು, ಉಪನ್ಯಾಸಕರು, ಪ್ರಾಂಶುಪಾಲರು ಹಾಗೂ ಶಿಕ್ಷಕ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಆತ್ಮೀಯವಾಗಿ ಸನ್ಮಾನಿಸಲಾಯಿತು. ಹೀಗೆ ನಾಡಿನೆಲ್ಲೆಡೆ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿರುವ ಶ್ರೀಕಂಠೇಗೌಡರು, ಸ್ವತ: ಶಿಕ್ಷಕರಾಗಿ, ಶಿಕ್ಷಕ ಕ್ಷೇತ್ರವನ್ನು ಪ್ರತಿನಿಧಿಸಲು ಸರ್ವರೀತಿಯಲ್ಲೂ ಸಜ್ಜಾಗುತ್ತಿದ್ದಾರೆ.

ದೇವೇಗೌಡರನ್ನು ಆಕರ್ಷಿಸಿದ ಕೆಟಿಎಸ್ ವ್ಯಕ್ತಿತ್ವ

ರಾಜಕಾರಣದಲ್ಲಿ ಅಭಿರುಚಿ ಹೊಂದಿ ತಮ್ಮ ಪ್ರಖರ ಚಿಂತನೆ ಹಾಗೂ ವಾಗ್ವಿಲಾಸದ ಮೂಲಕ ನೊಂದವರ ದನಿಯಾಗಿ, ರೈತಪರ ಹೋರಾಟಗಾರರಾಗಿರುವ ದೇಶದ ಹೆಮ್ಮೆಯ ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ.ದೇವೇಗೌಡರ ಗಮನಸೆಳೆಯುವಲ್ಲಿ ಯಶಸ್ವಿಯಾದರು. ಕಾಲೇಜಿನ ಪ್ರಾಚಾರ್ಯರಾಗಿದ್ದುಕೊಂಡೇ ರೈತ ಚಳವಳಿ, ಕಾವೇರಿ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗಿಯಾಗಿ, ಜಿಲ್ಲೆಯ, ನಾಡಿನ ರೈತರ ಮನಸ್ಸನ್ನು ಗೆದ್ದಿದ್ದಾರೆ. ಮೈಷುಗರ್ ಉಳಿವಿಗಾಗಿ ಸರ್ಕಾರದ ಗಮನ ಸೆಳೆಯುವ ನಿಟ್ಟಿನಲ್ಲಿ ಸದನದಲ್ಲಿ ಸಮರ್ಥವಾಗಿ ವಿಚಾರ ಮಂಡಿಸಿದ್ದಾರೆ. ಇದು ಅವರ ಜನಪರ, ರೈತಪರ ಕಾಳಜಿಗೆ ಸಾಕ್ಷಿಯಾಗಿದೆ. ಕಾವೇರಿ ನದಿ ನೀರಿನ ಬಿಕ್ಕಟ್ಟಿಗೆ ಪರಿಹಾರವಾಗಿ ಮೇಕೆದಾಟು ಯೋಜನೆ ಕುರಿತಾಗಿ ಸದನಕ್ಕೆ ಗೌಡರು ಒದಗಿಸಿದ ಮಾಹಿತಿ ಹಾಗೂ ಮಂಡ್ಯದ ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಸರ್ಕಾರಿ ಸ್ವಾಮ್ಯದಲ್ಲಿಯೇ ಉಳಿಸುವ ನಿಟ್ಟಿನಲ್ಲಿ ಸದನದ ಒಳಗೆ ಹಾಗೂ ಹೊರಗೆ ನಡೆಸಿದ ಹೋರಾಟ ಶ್ಲಾಘನೀಯ.



"ಐ ಆ್ಯಮ್ ಎ ಟೀಚರ್: ಆ್ಯಸ್ ಎ ಟೀಚರ್, ಪ್ಲೀಸ್... ಓಟ್ ಟು ಟೀಚರ್"

ಕೆ.ಟಿ.ಶ್ರೀಕಂಠೇಗೌಡರು ಸ್ವತ: ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿ, ಪ್ರಾಂಶುಪಾಲರ ಸಂಘದ ರಾಜ್ಯಾಧ್ಯಕ್ಷರಾಗಿ ಎರಡು ದಶಕಗಳಿಗೂ ಮೀರಿ ಸೇವೆ ಸಲ್ಲಿಸಿದವರಾಗಿದ್ದಾರೆ. ನಾಡಿನ ಶಿಕ್ಷಕರ ಹಾಗೂ ಶಿಕ್ಷಕ ಸಂಘಟನೆಗಳ ಒತ್ತಾಸೆಯ ಮೇರೆಗೆ ಶಿಕ್ಷಕರ ಸಮಸ್ಯೆಗಳ ಪರವಾಗಿ ಸದನದ ಒಳಗೆ ಹಾಗೂ ಹೊರಗೆ ನಿರಂತರ ಹೋರಾಟ ನಡೆಸಿ ಶಿಕ್ಷಕರ ದನಿಯಾಗಿ ಕೆಲಸ ಮಾಡಿರುವ ಕೆ.ಟಿ.ಶ್ರೀಕಂಠೇಗೌಡರನ್ನು ತಮ್ಮ ಪ್ರತಿನಿಧಿಯಾಗಿ ಆಯ್ಕೆ ಮಾಡುವುದು ಸಮಸ್ತ ಶಿಕ್ಷಕ ಸಂಕುಲದ ಅಪೇಕ್ಷೆಯಾಗಿದೆ.



ಶಿಕ್ಷಣ ಹಾಗೂ ಸಂಘ, ಸಂಸ್ಥೆಗಳಲ್ಲಿ ಅನನ್ಯ ಸೇವೆ

ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿ, ಸಿಂಡಿಕೇಟ್ ಸದಸ್ಯರಾಗಿ, ಡಾ.ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವ ವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ, ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘದ ರಾಜ್ಯಾಧ್ಯಕ್ಷರಾಗಿ, ಗೌರವಾಧ್ಯಕ್ಷರಾಗಿ, ಮಂಡ್ಯದ ಕರ್ನಾಟಕ ಸಂಘದ ಪ್ರಧಾನ ಪೋಷಕರಾಗಿ ಹೀಗೆ ಹತ್ತಾರು ಸಂಘ-ಸಂಸ್ಥೆಗಳ ಸದಸ್ಯರಾಗಿ, ಪದಾಧಿಕಾರಿಗಳಾಗಿ ಅನುಪಮ ಸೇವೆ ಮಾಡಿದ್ದಾರೆ.

ಶಿಕ್ಷಕರು-ಉಪನ್ಯಾಸಕರ ಸಮಸ್ಯೆಗಳ ವಿರುದ್ಧ ಹೋರಾಟ

ಖಾಸಗಿ, ಅನುದಾನಿತ, ಸರ್ಕಾರಿ ಶಾಲಾ-ಕಾಲೇಜುಗಳ ಅಧ್ಯಾಪಕರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಶ್ರೀಕಂಠೇಗೌಡರು ಸದಾ ಮುಂದಿದ್ದಾರೆ. ಕಳೆದ ಸಾಲಿನಲ್ಲಿ 18 ದಿವಸಗಳ ಕಾಲ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ರಾಜ್ಯದ ಶಿಕ್ಷಕರ, ಉಪನ್ಯಾಸಕರ ಅಹೋರಾತ್ರಿಯ ಹರತಾಳದಲ್ಲಿ ಪಾಲ್ಗೊಂಡು ಶಿಕ್ಷಕರಿಗೆ, ಮುಖ್ಯ ಶಿಕ್ಷಕರಿಗೆ, ಉಪನ್ಯಾಸಕರಿಗೆ ಮತ್ತು ಪ್ರಾಂಶುಪಾಲರಿಗೆ ಎರಡು ಇನ್ಕ್ರಿಮೆಂಟ್‌ಗಳನ್ನು ಕೊಡಿಸುವಲ್ಲಿ ಯಶಸ್ಸು ಕಂಡಿದ್ದನ್ನು ಸಮಸ್ತ ಶಿಕ್ಷಕ ಸಂಕುಲ ಮರೆಯಲಾರದು. ರಾಜ್ಯದ ಪ್ರೌಢಶಾಲಾ ಬಡ್ತಿ ಸಹ ಶಿಕ್ಷಕರಿಗೆ ವಿಶೇಷ ಭತ್ಯೆಯನ್ನು ಇನ್ಕ್ರಿಮೆಂಟ್‌ಗಳಾಗಿ ಆದೇಶ ಮಾಡಿಸಿಕೊಟ್ಟಿದ್ದನ್ನು ಶಿಕ್ಷಕ ವರ್ಗ ಸದಾ ಸ್ಮರಿಸುತ್ತದೆ. ಸ್ವತಃ ಶಿಕ್ಷಕರಾಗಿ ಕೆ.ಟಿ.ಶ್ರೀಕಂಠೇಗೌಡರು ಸದಾಕಾಲ ಶಿಕ್ಷಕರ ಪರ ಕೆಲಸ ಮಾಡುವ ಕಾಳಜಿ, ಪ್ರಶ್ನಾತೀತ, ಊಹಾತೀತ. ಗೌಡರು ವಾಗ್ಮಿ, ಹೋರಾಟಗಾರ ಜೊತೆಗೆ ಪರಿಸರ ಪ್ರೇಮಿಯೂ ಹೌದು. ನಿಸರ್ಗದ ಬಗ್ಗೆ ಅಪಾರವಾದ ಕಾಳಜಿ ಹೊಂದಿರುವ ಅವರು 24 ಸಾವಿರ ಮರಗಿಡಗಳನ್ನು ನೆಟ್ಟು ಪೋಷಿಸಿದ್ದಾರೆ. ಮಂಡ್ಯದ ಶಿವನಂಜಪ್ಪ ಉದ್ಯಾನವನವನ್ನು ದೇವರ ಕಾಡು ಮಾದರಿಯಲ್ಲಿ ಪರಿವರ್ತಿಸಿದ್ದಾರೆ. ಹೀಗೆ ಶ್ರೀಕಂಠೇಗೌಡರ ಸಾಧನೆಗಳು, ಜನೋಪಯೋಗಿ ಕೆಲಸ ಕಾರ್ಯಗಳ ಪಟ್ಟಿ ಹನುಮಂತನ ಬಾಲದಂತೆ ಬೆಳೆಯುತ್ತಲೇ ಇರುತ್ತದೆ.

ಸ್ನೇಹಪರ ವ್ಯಕ್ತಿತ್ವದ ಗೌಡರು

ಕೆ.ಟಿ.ಶ್ರೀಕಂಠೇಗೌಡರು ವಿಧಾನಪರಿಷತ್ ಸದಸ್ಯರಾಗಿದ್ದ ಸಮಯದಲ್ಲಿ ಎಷ್ಟು ಹೊತ್ತಲ್ಲಿಯೇ ಆಗಲಿ, ಎಷ್ಟು ಜನರಿಂದಲೇ ಆಗಲಿ ಬರುವ ಮೊಬೈಲ್ ಕರೆಗಳಿಗೆ ಸದಾ ಸ್ಪಂದಿಸುವ, ತಕ್ಷಣ ಫೋನ್ ತೆಗೆದು "ಯಾರು ಬ್ರದರ್?, ಹೇಳು ಬ್ರದರ್!, ಹೇಳಿ ಸಾರ್!, ಹೇಳಿ ಮೇಡಂ!, ಹೇಳಿ ಪ್ರೊಫೆಸರ್" ಎಂದು ಗೌರವಯುತವಾಗಿ ಮಾತನಾಡಿ ನೊಂದ ಮನಸ್ಸುಗಳಿಗೆ ಸಾಂತ್ವನ ನೀಡುವ, ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಪ್ರಾಮಾಣಿಕ ಪ್ರಯತ್ನ ನಡೆಸುವ ನಾಡಿನ ಬೆರಳೆಣಿಕೆಯ ನಾಯಕರ ಸಾಲಿನಲ್ಲಿ ಮುಂಚೂಣಿಯಲ್ಲಿ ನಿಲ್ಲಬಲ್ಲವರಾಗಿದ್ದಾರೆ.

ನ.27, ಕೊಡಗಿನ ಸುಗ್ಗಿಯ ಹಬ್ಬ 'ಪುತ್ತರಿ'

ಪಾಡಿ ಇಗ್ಗುತ್ತಪ್ಪ ದೇವಾಲಯದಲ್ಲಿ ದಿನಾಂಕ ನಿಗದಿ



ನಾಪೋಕ್ಲು, ನ.13– ಕೊಡಗಿನ ಸುಗ್ಗಿಯ ಹಬ್ಬ 'ಪುತ್ತರಿ'ಯನ್ನು ನ.27 ರಂದು ಆಚರಿಸಲು ಸಮೀಪದ ಕಕ್ಕಬ್ಬೆಯ ಪಾಡಿ ಇಗ್ಗುತ್ತಪ್ಪ ದೇವಾಲಯದಲ್ಲಿ ಸೋಮವಾರ ದಿನ ನಿಗದಿಪಡಿಸಲಾಯಿತು.

ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದ ಆವರಣದಲ್ಲಿ ನಾಡಿನ ಹದಿಮೂರು ತಕ್ಕಮುಖ್ಯಸ್ಥರು, ಊರಿನ ಗಣ್ಯರು ಸಂಪ್ರದಾಯದಂತೆ ದೇವಾಲಯದ ಅಮ್ಮಂಗೇರಿ ಜ್ಯೋತಿಷ್ಯರಾದ ಶಶಿಕುಮಾರ್, ಕಣಿಯರ ನಾಣಯ್ಯ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಹುತ್ತರಿ ದಿನ ಮತ್ತು ಆಚರಣೆಯ ಸಮಯವನ್ನು ನಿಗದಿಪಡಿಸಿದರು. ರೋಹಿಣಿ ನಕ್ಷತ್ರದ ಹುಣ್ಣಿಮೆಯ ದಿನವಾದ ನ.27 ರಂದು ರಾತ್ರಿ 7.20 ಗಂಟೆಗೆ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ ನೆರೆ ಕಟ್ಟುವುದು, 8.20 ಗಂಟೆಗೆ ಕದಿರು ತೆಗೆಯುವುದು ಮತ್ತು 9.20 ಗಂಟೆಗೆ ಪ್ರಸಾದ ಸ್ವೀಕಾರ ಮಾಡಲು ನಿರ್ಧರಿಸಲಾಯಿತು. ಸಂಪ್ರದಾಯದಂತೆ ಪಾಡಿ ಇಗ್ಗುತ್ತಪ್ಪ ದೇವಾಲಯದಲ್ಲಿ ಪ್ರಥಮವಾಗಿ ಪುತ್ತರಿ ಆಚರಣೆ ಬಳಿಕ ನಾಡಿನೆಲ್ಲೆಡೆ ರಾತ್ರಿ 7.45 ಕ್ಕೆ ನೆರೆ ಕಟ್ಟುವುದು, 8.45 ಕ್ಕೆ ಕದಿರು ತೆಗೆಯುವುದು ಮತ್ತು 9.45 ಕ್ಕೆ ಪ್ರಸಾದ ಸ್ವೀಕರಿಸುವ ಮೂಲಕ ನಾಡಿನಾದ್ಯಂತ ಸಂಭ್ರಮದ ಹುತ್ತರಿ ಆಚರಣೆ ಮಾಡುವ ಬಗ್ಗೆ ತೀರ್ಮಾನಿಸಲಾಯಿತು.

ಪುತ್ತರಿಗೆ ಮುನ್ನಾ ದಿನವಾದ ನ.26 ರಂದು ಪಾಡಿ ಇಗ್ಗುತ್ತಪ್ಪ ದೇವಾಲಯದಲ್ಲಿ ವಾರ್ಷಿಕ ಕಲಾಡ್ಚ ಹಬ್ಬವನ್ನು ಆಚರಿಸಲು ದಿನ ನಿಗದಿಪಡಿಸಲಾಯಿತು.

ಈ ಸಂದರ್ಭ ತಕ್ಕ ಮುಖ್ಯಸ್ಥರಾಗಿರುವ ಕಲ್ಯಾಟಂಡ ಮುತ್ತಪ್ಪ, ನಂಬುಡಮಂಡ ಸುಬ್ರಮಣಿ, ಕುಂಡ್ಯೋಳಂಡ ರಮೇಶ್ ಮುದ್ದಯ್ಯ, ಮೇಚಂಡ ಜಯ ಜೋಯಪ್ಪ, ಪರದಂಡ ವಿಠಲ, ಬಡಕಡ ಸುರೇಶ್, ಕುಂಡ್ಯೋಳಂಡ ವಿಶು ಪೂವಯ್ಯ, ಕೇಟೋಳಿರ ರಘು ಕುಟ್ಟಪ್ಪ, ಕೇಟೋಳಿರ ರಾಜಪ್ಪ ಕುಟ್ಟಪ್ಪ, ಪೇರಿಯಂಡ ಪೂವಯ್ಯ, ಕುಟ್ಟಂಚೆಟ್ಟೀರ ಶ್ಯಾಂ, ಕೇಲೇಟಿರ ಮಧು, ಕುಲ್ಲೇಟಿರ ನಂದಾ ನಾಚಪ್ಪ, ಪತ್ತೆಗಾರ ಪ್ರಿನ್ಸ್ ತಮ್ಮಯ್ಯ, ಕಣಿಯರ ಪ್ರಕಾಶ, ಜೀವನ ಇನ್ನಿತರರು ಉಪಸ್ಥಿತರಿದ್ದರು.

ನ.16 ರಿಂದ ಬಾಳುಗೋಡುವಿನಲ್ಲಿ 'ಕೊಡವ ನಮ್ಮೆ'



ಮಡಿಕೇರಿ, ನ.13– ಕೊಡವ ಸಮಾಜಗಳ ಒಕ್ಕೂಟದ ವತಿಯಿಂದ ನ.16, 17, 18 ಮತ್ತು 19ರಂದು ಬಾಳುಗೋಡುವಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಸಾಂಸ್ಕೃತಿಕ ಕೇಂದ್ರದಲ್ಲಿ ಕೊಡವ ನಮ್ಮೆ ನಡೆಯಲಿದೆ ಎಂದು ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಹೇಳಿದ್ದಾರೆ.

ಬಾಳುಗೋಡುವಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಸಾಂಸ್ಕೃತಿಕ ಕೇಂದ್ರದಲ್ಲಿ ಆಯೋಜಿತ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಕೊಡವ ನಮ್ಮೆಯ ಪ್ರಯುಕ್ತ ನ.16ರಂದು ವಿವಿಧ ಕೊಡವ ಸಮಾಜಗಳ ನಡುವೆ ಹಾಕಿ ಪಂದ್ಯಾವಳಿಗೆ ಚಾಲನೆ ದೊರೆಯಲಿದ್ದು, ಅಂದು ಬೆಳಗ್ಗೆ 9 ಗಂಟೆಗೆ ಹಾಕಿ ನಮ್ಮೆಯನ್ನು ತಾವು ಉದ್ಘಾಟಿಸಲಿದ್ದು, ನ.16ರ ಮೊದಲನೇ ದಿನ 4 ಪಂದ್ಯಾಟಗಳು ಮತ್ತು ನ17ರ ಎರಡನೇ ದಿನ 4 ಪಂದ್ಯಾಟಗಳು ಜರುಗಲಿವೆ ಎಂದು ಹೇಳಿದರು.

ನ.18ರಂದು ಬೆಳಗ್ಗೆ 9.30 ಗಂಟೆಗೆ ಮೊದಲ ಸೆಮಿಫೈನಲ್ ಪಂದ್ಯಾಟ ನಡೆಯಲಿದೆ. 11 ಗಂಟೆಗೆ ಕೊಡವ ಸಮಾಜದ ವತಿಯಿಂದ ನಿರ್ಮಿಸಲಾದ ಯುದ್ಧ ಸ್ಮಾರಕಕ್ಕೆ ಗೌರವ ಅರ್ಪಣೆ ನಡೆಯಲಿದೆ ಎಂದು ವಿವರಿಸಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಮೇಜರ್ ಜನರಲ್ ಬಾಚಮಂಡ ಕಾರ್ಯಪ್ಪ ಅವರು ಆಗಮಿಸಲಿದ್ದು, ಬಳಿಕ ಸಭಾ ಕಾರ್ಯಕ್ರಮ ಜರುಗಲಿದೆ. ಮಧ್ಯಾಹ್ನ 2 ಗಂಟೆಗೆ 2ನೇ ಸೆಮಿಫೈನಲ್ ಪಂದ್ಯಾಟ ನಡೆಯಲಿದೆ. ಮಧ್ಯಾಹ್ನ 1 ಗಂಟೆಯಿಂದ ಪುರುಷರು, ಮಹಿಳೆಯರಿಗೆ ಹಗ್ಗ ಜಗ್ಗಾಟ, ಭಾರದ ಗುಂಡು ಎಸೆಯುವುದು, ತೆಂಗಿನ ಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ ನಡೆಯಲಿದೆ ಎಂದು ಮಾಹಿತಿ ನೀಡಿದರು.

ನ.19ರ ಭಾನುವಾರ ಬೆಳಗ್ಗೆ 9 ಗಂಟೆಗೆ ಮಂದ್ ಮೆರೆಯುವ ಕಾರ್ಯಕ್ರಮವಿದ್ದು, 10 ಗಂಟೆಯಿಂದ 5 ವೇದಿಕೆಗಳಲ್ಲಿ ವಿವಿಧ ಕೊಡವ ಸಮಾಜಗಳ ವತಿಯಿಂದ ಕೊಡವ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 2 ಗಂಟೆಯಿಂದ ಹಾಕಿ ಫೈನಲ್ಸ್ ಪಂದ್ಯಾಟ ನಡೆಯಲಿದ್ದು, ಪಂದ್ಯಾಟದ ವಿರಾಮದ ವೇಳೆಯಲ್ಲಿ ಪುರುಷರು ಮತ್ತು ಮಹಿಳೆಯರ ಹಗ್ಗ ಜಗ್ಗಾಟದ ಫೈನಲ್ಸ್ ನಡೆಯಲಿದೆ. ಇದಾದ ಬಳಿಕ ಹಾಕಿ ಫೈನಲ್ಸ್ ಪಂದ್ಯಾಟ ಮುಂದುವರೆಯ ಲಿದೆ ಎಂದು ಮಾಹಿತಿ ನೀಡಿದರು.

ಕೊಡವ ನಮ್ಮೆಯ ಸಮಾರೋಪ ಸಮಾರಂಭ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ, ಸಂಸದ ಪ್ರತಾಪ್ ಸಿಂಹ, ಮಡಿಕೇರಿ ಶಾಸಕ ಡಾ.ಮಂಥರ್ ಗೌಡ, ವಿಧಾನಪರಿಷತ್ ಸದಸ್ಯ ಸುಜಾಕುಶಾಲಪ್ಪ ಪಾಲ್ಗೊಳ್ಳಲಿದ್ದಾರೆ ಎಂದು ವಿಷ್ಣು ಕಾರ್ಯಪ್ಪ ಅವರು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕೊಡವ ಸಮಾಜಗಳ ಒಕ್ಕೂಟದ ಕಾರ್ಯದರ್ಶಿ ವಾಟೇರಿರ ಶಂಕರಿ ಪೊನ್ನಪ್ಪ, ಊಟೋಪಚಾರ ಸಮಿತಿ ಅಧ್ಯಕ್ಷ ಮನು ಕುಮಾರ್, ಆಟೋಟ ಸಮಿತಿ ಅಧ್ಯಕ್ಷ ತಂಬುಕುತ್ತಿರ ಮಧು ಮಂದಣ್ಣ, ಸಂಚಾಲಕ ಕಂಬಿರಂಡ ಕಿಟ್ಟು ಕಾಳಪ್ಪ, ಪಂದ್ಯಾಟದ ತಾಂತ್ರಿಕ ಸಮಿತಿ ನಿರ್ದೇಶಕ ಅಚ್ಚಕಾಳಿರ ಪಳಂಗಪ್ಪ, ಸದಸ್ಯ ಪಟ್ಟಡ ಮನು ರಾಮಚಂದ್ರ, ಸಾಂಸ್ಕೃತಿಕ ಸಮಿತಿ ಸಂಚಾಲಕ ಬೊಳ್ಳಿಯಂಗಡ ದಾದು ಪೂವಯ್ಯ ಉಪಸ್ಥಿತರಿದ್ದರು.

ಶ್ರೀ ಚಾಮುಂಡೇಶ್ವರಿ (ಐದ್ರೋಡಮ್ಮ) ವಾರ್ಷಿಕ ಉತ್ಸವ



ಸಿದ್ದಾಪುರ, ನ.13– ಅರೆಕಾಡು ಗ್ರಾಮ ಸಮೀಪವಿರುವ ಶ್ರೀ ಚಾಮುಂಡೇಶ್ವರಿ (ಐದ್ರೋಡಮ್ಮ) ದೇವಿಯ ವಾರ್ಷಿಕ ಉತ್ಸವವು ಶ್ರದ್ಧಾ ಭಕ್ತಿಯಿಂದ ನೆರವೇರಿತು.

ದೀಪಾವಳಿ, ಅಮಾವಾಸ್ಯೆ ಅಂಗವಾಗಿ ವಿವಿಧ ಧಾರ್ಮಿಕ ಪೂಜಾ ವಿಧಿ ವಿಧಾನಗಳು ನಡೆದವು. ಜಿಲ್ಲೆಯ ನಾನಾ ಭಾಗಗಳಿಂದ ಆಗಮಿಸಿದ ಅಪಾರ ಸಂಖ್ಯೆಯ ಭಕ್ತರು ಹರಕೆಗಳನ್ನು ಹೊತ್ತು ದೇವಾಲಯಕ್ಕೆ ಆಗಮಿಸಿ ಅನ್ನಸಂತರ್ಪಣೆ ಕಾರ್ಯದಲ್ಲಿ ಪಾಲ್ಗೊಂಡರು. ದೇವಾಲಯ ಸಮಿತಿಯ ಅಧ್ಯಕ್ಷ ರವಿಕುಮಾರ್, ಪ್ರಮುಖರಾದ ಜಯಣ್ಣ, ಅಳಗು, ಚಂದ್ರ, ಆನಂದ, ರಘು, ವಿಜಯ್‌ಕುಮಾರ್, ಪ್ರಭುಶೇಖರ್, ಗುರುರಾಜ್, ರಮೇಶ್ ಚೆನ್ನಗಯ್ಯ, ಗಣೇಶ, ಶಿವಕುಮಾರ್, ಅಜಯ್, ಸಿದ್ದು, ಭಗವತಿ, ರವೀಂದ್ರ, ಸುರೇಶ್, ಬಾಲಕೃಷ್ಣ, ತಿರುಮಲ, ರಾಜನ್ ಸೇರಿದಂತೆ ಇತರರು ಹಾಜರಿದ್ದರು.

282.55 ಎಕರೆ ರಕ್ಷಿತಾರಣ್ಯ ಒತ್ತುವರಿ ಕುರಿತು ವರದಿ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಆದೇಶ

ವಿರಾಜಪೇಟೆ, ನ.13– ಮಡಿಕೇರಿ ನಗರದ ಪೂರ್ವ ಭಾಗದಲ್ಲಿರುವ ಮಡಿಕೇರಿ 'ಈಸ್ಟ್ ರಿಸರ್ವ್ ಫಾರೆಸ್ಟ್' ಸರ್ವೆ ಸಂಖ್ಯೆ 289 ರಲ್ಲಿ 282.55 ಎಕರೆ ರಕ್ಷಿತಾರಣ್ಯದೊಳಗೆ ಅತಿಕ್ರಮಣಗೊಂಡಿರುವ ಸವಿವರವಾದ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ ಎಂದು ಕಾವೇರಿಸೇನೆ ಜಿಲ್ಲಾ ಕಾರ್ಯದರ್ಶಿ ಕೋಲತಂಡ ರಘುಮಾಚಯ್ಯ ಹೇಳಿದರು.

ವಿರಾಜಪೇಟೆ ಪ್ರೆಸ್‌ಕ್ಲಬ್‌ನಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 07.02.1922 ರಂದು ಸರ್ಕಾರದ ಅಧಿಕೃತ ಪ್ರಕಟಣೆ ಅನ್ವಯ ಘೋಷಿತ ರಕ್ಷಿತಾರಣ್ಯವನ್ನು ಪ್ರಭಾವಿ ವ್ಯಕ್ತಿ ಒತ್ತುವರಿ ಮಾಡಿಕೊಂಡಿದ್ದು, ಅದನ್ನು ತೆರವುಗೊಳಿಸುವಂತೆ ಕಾವೇರಿ ಸೇನೆ ವತಿಯಿಂದ ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಜಾಗೊಂಡಿದ್ದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿದ್ದು, ಈ ಅರ್ಜಿಯನ್ನು ಮಾನ್ಯ ಮಾಡಿರುವ ಸುಪ್ರೀಂಕೋರ್ಟ್ ಈ ಆದೇಶ ನೀಡಿದೆ ಎಂದು ತಿಳಿಸಿದರು. ಗೋಷ್ಠಿಯಲ್ಲಿ ಕಾವೇರಿಸೇನೆ ನಿರ್ದೇಶಕ ಚಂಬಂಡ ವಿಜು ಬಿದ್ದಪ್ಪ ಉಪಸ್ಥಿತರಿದ್ದರು.

ಸಿಂಧುತ್ವ ಪ್ರಮಾಣ ಪತ್ರ ಕಡ್ಡಾಯ ಆದೇಶ ಹಿಂಪಡೆಯಲು ಪ್ರತಿಭಟನೆ



ಮಂಡ್ಯ, ನ.13– ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ– 2022ರ ಆಯ್ಕೆ ಪ್ರಕ್ರಿಯೆಯಲ್ಲಿ ಸಿಂಧುತ್ವ ಪ್ರಮಾಣ ಪತ್ರ ಕಡ್ಡಾಯ ಮಾಡಿರುವುದನ್ನು ಹಿಂಪಡೆಯುವಂತೆ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ ಮಂಡ್ಯದಲ್ಲಿ ಪ್ರತಿಭಟನೆ ನಡೆಸಿತು.

ನಗರದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಎದುರು ಜಮಾಯಿಸಿದ ಪ್ರಾಂತ ರೈತ ಸಂಘದ ಕಾರ್ಯಕರ್ತರು, ಸಂಘಟನೆಯ ಭರತ್‌ರಾಜ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಇಲಾಖೆಯ ಉಪ ನಿರ್ದೇಶಕರಿಗೆ ಮನವಿ ಸಲ್ಲಿಸಿದರು.

ಸಾಮಾನ್ಯ ವರ್ಗದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಸಿಂಧುತ್ವ ಪ್ರಮಾಣ ಪತ್ರ ಕಡ್ಡಾಯ ಮಾಡಿರುವ ಕ್ರಮ ಸರಿಯಲ್ಲ. ಸಾಮಾನ್ಯ ವರ್ಗದಲ್ಲಿ ಆಯ್ಕೆಯಾದ ಇತರೆ ಓಬಿಸಿ ಅಭ್ಯರ್ಥಿಗಳಿಗೆ ಸಿಂಧುತ್ವ ಪ್ರಮಾಣ ಪತ್ರ ಅಗತ್ಯವಿಲ್ಲದಿದ್ದರೂ ನಿಯಮ ರೂಪಿಸಿರುವುದರಿಂದ ಅಭ್ಯರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂದರು.

ರಾಜ್ಯದ ಹಲವು ಜಿಲ್ಲೆಗಳಲ್ಲಿ ಸಿಂಧುತ್ವ ಪ್ರಮಾಣ ಪತ್ರ ಪಡೆಯದೇ ನೇಮಕಾತಿ ಆದೇಶ ಪ್ರತಿ ನೀಡಿರುವುದು ಕಂಡು ಬಂದಿದೆ. ಸರ್ಕಾರಿ ನೌಕರಿ ಪಡೆಯಲು ಹಲವು ವರ್ಷಗಳ ಕಾಲ ಉನ್ನತ ವಿದ್ಯಾಭ್ಯಾಸ ನಡೆಸಿ ಉತ್ತಮ ಫಲಿತಾಂಶ ಪಡೆದರೂ, ಸಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಗಳಿಸಲು ವರ್ಷಗಟ್ಟಲೆ ಅಭ್ಯಾಸ ಹಾಗೂ ಪೂರ್ವ ತಯಾರಿ ನಡೆಸಿ, ಸಾಲ ಮಾಡಿ ಅಂತಿಮವಾಗಿ ಆಯ್ಕೆಯಾದರೂ ಅಭ್ಯರ್ಥಿಗಳಿಗೆ ಸಿಂಧುತ್ವ ಪ್ರಮಾಣ ಪತ್ರ ಕೇಳುತ್ತಿರುವುದು ಸಂವಿಧಾನ ವಿರೋಧಿ ಮತ್ತು ಕಾನೂನುಬಾಹಿರ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಡ್ಡಾಯ ರಜೆ ಮೇಲೆ ತೆರಳುವಂತೆ ಮುಖ್ಯಾಧಿಕಾರಿಗೆ ಆದೇಶ



ಕೆ.ಆರ್.ಪೇಟೆ, ನ.13– ಜನಸಾಮಾನ್ಯರ ಕೆಲಸಗಳನ್ನು ಸಮರ್ಪಕವಾಗಿ ಮಾಡದೇ ಇ–ಸ್ವತ್ತು ಕಡತಗಳಿಗೆ ಸಹಿ ಮಾಡದೇ ಜನರಿಗೆ ಸ್ಪಂದಿಸದ ಆರೋಪ ಹೊತ್ತಿರುವ ಪುರಸಭೆ ಮುಖ್ಯಾಧಿಕಾರಿ ಜಗರೆಡ್ಡಿಗೆ ಕಡ್ಡಾಯ ರಜೆ ಮೇಲೆ ತೆರಳುವಂತೆ ಶಾಸಕ ಹೆಚ್.ಟಿ.ಮಂಜು ಆದೇಶಿಸಿದರು.

ಸೋಮವಾರ ಪಟ್ಟಣದ ಪುರಸಭೆಯ ಯೋಜನಾ ಭವನದಲ್ಲಿ ಆಡಳಿತಾಧಿಕಾರಿ ಹಾಗೂ ಪಾಂಡವಪುರ ಎಸಿ ನಂದೀಶ್ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಪಟ್ಟಣದ ಸಮಸ್ಯೆಗಳ ನಿವಾರಣೆಗೆ ಸದಸ್ಯರು ಪಕ್ಷಾತೀತವಾಗಿ ಕೈಜೋಡಿಸಿ ಕೆಲಸ ಮಾಡಬೇಕು. ಕಳೆದ ಮೂರು ತಿಂಗಳ ಹಿಂದೆಯಷ್ಟೇ ಪುರಸಭೆಗೆ ಮುಖ್ಯಾಧಿಕಾರಿಯಾಗಿ ಬಂದಿರುವ ಜಗರೆಡ್ಡಿ ಜನಸಾಮಾನ್ಯರು ಹಾಗೂ ಪುರಸಭೆಯ ಸದಸ್ಯರೊಂದಿಗೆ ಉದ್ಧಟತನದಿಂದ ವರ್ತಿಸುತ್ತಾರೆ. ಚುನಾಯಿತ ಜನಪ್ರತಿನಿಧಿಗಳೊಂದಿಗೆ ಸೌಜನ್ಯಯುತವಾಗಿ ನಡೆದುಕೊಳ್ಳದ ಪುರಸಭೆ ಅಧಿಕಾರಿ ಏಕೆ ಬೇಕೆಂದು ಪ್ರಶ್ನಿಸಿದರು. ಜನಸಾಮಾನ್ಯರ ಖಾತೆ ಬದಲಾವಣೆ, ಇ–ಸ್ವತ್ತು, ಕಟ್ಟಡ ಪರವಾನಗಿ ಸೇರಿದಂತೆ ಒಂದೇ ಒಂದು ಸಾರ್ವಜನಿಕರ ಕೆಲಸ ಮಾಡಿಕೊಡುತ್ತಿಲ್ಲ. ಸಣ್ಣಪುಟ್ಟ ಕಾರಣಗಳನ್ನೇ ಮುಂದಿಟ್ಟುಕೊಂಡು ಕಡತಗಳಿಗೆ ಆದೇಶ ಮಾಡದೇ ಜನರನ್ನು ಅಲೆಸುವ ಅಧಿಕಾರಿಗಳಿಗೆ ತಕ್ಕಪಾಠ ಕಲಿಸಬೇಕು. ಜೊತೆಗೆ ಕೆ.ಆರ್.ಪೇಟೆ ಪಟ್ಟಣದ ಸಮಗ್ರ ಅಭಿವೃದ್ಧಿಗೆ ಎಲ್ಲಾ ರೀತಿಯಲ್ಲೂ ಪಕ್ಷಾತೀತವಾಗಿ ಎಲ್ಲರೂ ಕೈಜೋಡಿಸಿದರೆ ಪಟ್ಟಣದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದು ಹೇಳಿದರು.

ಸಭೆಯಲ್ಲಿ ಸ್ಥಾಯಿಸಮಿತಿ ಅಧ್ಯಕ್ಷ ಹೆಚ್.ಆರ್.ಲೋಕೇಶ್, ಹಿರಿಯ ಸದಸ್ಯರಾದ ಕೆ.ಸಿ.ಮಂಜುನಾಥ್, ಬಸ್ ಸಂತೋಷ್ ಕುಮಾರ್, ಪ್ರೇಮ್‌ಕುಮಾರ್, ರವೀಂದ್ರ ಬಾಬು, ತಿಮ್ಮೇಗೌಡ, ಗಿರಿಶ್, ಪ್ರವೀಣ್, ಇಂದ್ರಾಣಿ, ಸೌಭಾಗ್ಯ, ಪಂಕಜಾ, ಪ್ರಮೋದ್ ಸೇರಿದಂತೆ ಅಧಿಕಾರಿ ವರ್ಗ ಹಾಜರಿದ್ದರು.

ಗಾಂಜಾ ನಶೆಯಲ್ಲಿ ಜೆಸಿಬಿ ಚಲಾಯಿಸಿದವನಿಗೆ ಧರ್ಮದೇಟು

ಬೆಳ್ಳೂರು, ನ.13– ಗಾಂಜಾ ನಶೆಯಲ್ಲಿ ಜೆಸಿಬಿ ಚಾಲನೆ ಮಾಡಿ ಅಂಗಡಿ, ಮುಂಗಟ್ಟುಗಳನ್ನು ಧ್ವಂಸಗೊಳಿಸಿ ಮೂವರನ್ನು ಗಾಯಗೊಳಿಸಿದ ವ್ಯಕ್ತಿಯನ್ನು ಸಾರ್ವಜನಿಕರು ಹಿಡಿದು ಧರ್ಮದೇಟು ನೀಡಿ ಪೊಲೀಸರಿಗೆ ಒಪ್ಪಿಸಿದ ಘಟನೆ ಪಟ್ಟಣದಲ್ಲಿ ಸೋಮವಾರ ಸಂಜೆ ಸಂಭವಿಸಿದೆ.

ನಾಗಮಂಗಲ ತಾಲೂಕಿನ ಬೆಳ್ಳೂರು ಪಟ್ಟಣದಲ್ಲಿ ಬಿಹಾರ ಮೂಲದ ರಾಜ್‌ಕುಮಾರ್ ಎಂಬಾತ ಗಾಂಜಾ ನಶೆಯಲ್ಲಿ ಜೆಸಿಬಿ ಚಲಾಯಿಸಿದ್ದು, ಈ ವೇಳೆ ಪಾನಿಪೂರಿ ಗಾಡಿ, ಗೋಬಿ ಮಂಚೂರಿ ಗಾಡಿ ಸೇರಿದಂತೆ ಬೀದಿಬದಿ ವ್ಯಾಪಾರಿಗಳ ವಸ್ತುಗಳು ಧ್ವಂಸಗೊಂಡು ಬಾಲಕಿ ಸೇರಿದಂತೆ ಮೂವರಿಗೆ ಗಾಯಗಳಾಗಿವೆ. ತುಮಕೂರು ಜಿಲ್ಲೆಯ ಕುಣಿಗಲ್ ಕಡೆಯಿಂದ ನಾಗಮಂಗಲಕ್ಕೆ ಜೆಸಿಬಿಯಲ್ಲಿ ಬಂದಿದ್ದ ರಾಜ್‌ಕುಮಾರ್ ಮೊದಲು ನಾಗಮಂಗಲದ ನೆಲ್ಲಿಗೆರೆ ಬಳಿ ಅಡ್ಡಾದಿಡ್ಡಿ ಚಾಲನೆ ಮಾಡಿದ್ದಾನೆ. ಬಳಿಕ ಬೆಳ್ಳೂರು ಪಟ್ಟಣದ ಸಂತೆಗೆ ಜೆಸಿಬಿ ನುಗ್ಗಿಸಿದ ರಾಜ್‌ಕುಮಾರ್, ಸಂತೆಯಲ್ಲಿ ಮನಸೋ ಇಚ್ಛೆ ಜೆಸಿಬಿ ಓಡಿಸಿದ್ದಾನೆ. ಬೆಳ್ಳೂರು ಪಟ್ಟಣದ ಬೀದಿಗಳಲ್ಲಿ ಯದ್ವಾ ತದ್ವಾ ಜೆಸಿಬಿ ಚಾಲನೆ ಮಾಡಿದ ಚಾಲಕನ ಹುಚ್ಚಾಟಕ್ಕೆ ಬೆಳ್ಳೂರು ಜನ ಬೆಚ್ಚಿ ಬಿದ್ದಿದ್ದಾರೆ.

ಈ ವೇಳೆ ಚಾಲಕನನ್ನು ಹಿಡಿದು ಜೆಸಿಬಿ ನಿಲ್ಲಿಸಲು ಮುಂದಾದ ಜನರು ಬಳಿಕ ಆತನಿಗೆ ಧರ್ಮದೇಟು ನೀಡಿದ್ದಾರೆ. ಬಳಿಕ ಸ್ಥಳಕ್ಕೆ ಬೆಳ್ಳೂರು ಪೊಲೀಸರು ಆಗಮಿಸಿ, ಆತನನ್ನು ವಶಕ್ಕೆ ಪಡೆದು ವೈದ್ಯಕೀಯ ತಪಾಸಣೆಗೆ ಬಿಜಿಎಸ್ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಈ ಸಂಬಂಧ ಬೆಳ್ಳೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪರಿಸರಸ್ನೇಹಿ ದೀಪಾವಳಿ ಆಚರಿಸಿ





ಭಾರತೀನಗರ, ನ.13– ಪರಿಸರಕ್ಕೆ ಕುತ್ತು ತರುವ, ಅಪಾಯವನ್ನುಂಟು ಮಾಡುವ ಪಟಾಕಿ ಸಿಡಿಸುವುದನ್ನು ಬಿಟ್ಟು ಪರಿಸರ ಸ್ನೇಹಿ ದೀಪಾವಳಿ ಆಚರಿಸುವಂತೆ ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಜನತೆಯಲ್ಲಿ ಮನವಿ ಮಾಡಿದ್ದಾರೆ. ಉತ್ತಮ ಆರೋಗ್ಯಕ್ಕಾಗಿ ನಾವು ಪಟಾಕಿ ಸಿಡಿಸುವುದಕ್ಕಿಂತ ದೀಪಗಳನ್ನು ಹಚ್ಚಿ ಪರಿಸರ ಸ್ನೇಹಿ ದೀಪಾವಳಿ ಆಚರಿಸುವುದು ಒಳ್ಳೆಯದು. ಈಗಾಗಲೇ ಪಟಾಕಿ ಸಿಡಿಸಿ ಅನೇಕ ಸಮಸ್ಯೆಗೆ ಸಿಲುಕಿ ನರಳುತ್ತಿರುವ ಮಕ್ಕಳನ್ನು ನೋಡಿದ್ದೇವೆ. ಮಾತ್ರವಲ್ಲ ಪಟಾಕಿ ಮದ್ದಿನಿಂದ ವಾತಾವರಣದಲ್ಲಿ ಇಂಗಾಲದ ಡೈ ಆಕ್ಸೈಡ್ ಪ್ರಮಾಣ ಹೆಚ್ಚಾಗುತ್ತಿದೆ. ಆದ್ದರಿಂದ ಪ್ರತಿ ಮನೆಯಲ್ಲೂ ಪಟಾಕಿ ಸಿಡಿಸುವುದನ್ನು ನಿಲ್ಲಿಸಬೇಕು ಎಂದು ಮನವಿ ಮಾಡಿದರು.

ಡಿಸೆಂಬರ್‌ನಿಂದ ಹೆಚ್ಚುವರಿ 5 ಕೆಜಿ ಅಕ್ಕಿ ನೀಡಲು ಒತ್ತಾಯ

ಮಂಡ್ಯ, ನ.13– ರಾಜ್ಯ ಸರ್ಕಾರ ಐದು ಗ್ಯಾರಂಟಿಗಳ ಪೈಕಿ ಅನ್ನಭಾಗ್ಯ ಯೋಜನೆಯಡಿ ಈಗಾಗಲೇ ಕೊಡುತ್ತಿರುವ 5 ಕೆಜಿ ಅಕ್ಕಿ ಜೊತೆಗೆ ಹೆಚ್ಚುವರಿ 5 ಕೆಜಿ ಅಕ್ಕಿ ಸೇರಿಸಿ 10 ಕೆಜಿ ಅಕ್ಕಿ ಕೊಡುವುದಾಗಿ ಘೋಷಿಸಿತು. ಆದರೆ ಅಕ್ಕಿ ದೊರೆಯುತ್ತಿಲ್ಲವೆಂದು ಹೇಳಿ ಕುಟುಂಬದ ಪ್ರತಿ ಸದಸ್ಯನಿಗೂ ಅಕ್ಕಿ ಬದಲಿಗೆ ಹಣ ಕೊಡುವುದಾಗಿ ಹೇಳಿತ್ತು. ಹಣ ಸಮರ್ಪಕವಾಗಿ ಬಿಡುಗಡೆಯಾಗದ ಕಾರಣ ಸರ್ಕಾರ ಡಿಸೆಂಬರ್‌ನಿಂದ 10 ಕೆಜಿ ಅಕ್ಕಿ ಕೊಡಲು ಮುಂದಾಗಬೇಕು ಎಂದು ಪಡಿತರ ವಿತರಕರ ಸಂಘದ ರಾಜ್ಯಾಧ್ಯಕ್ಷ ಕೃಷ್ಣಪ್ಪ (ಕೆಕೆ) ಒತ್ತಾಯಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಕೇಂದ್ರ ಸರ್ಕಾರ 5 ಕೆಜಿ ಅಕ್ಕಿ ಕೊಡುತ್ತಿದ್ದು, ಸರ್ಕಾರ ಮುಂದಿನ ತಿಂಗಳಿನಿಂದ ಈ ಯೋಜನೆಗೆ ಮತ್ತೆ ಐದು ಕೆಜಿ ಅಕ್ಕಿ ಸೇರಿಸಿ ನುಡಿದಂತೆ ಹತ್ತು ಕೆಜಿ ಅಕ್ಕಿ ಕೊಡುವ ನಿರ್ಧಾರ ಮಾಡಬೇಕು. 2013ರಲ್ಲಿ ಸಿದ್ದರಾಮಯ್ಯ ಅವರು ಸಿಎಂ ಆಗಿದ್ದಾಗ ಈ ಯೋಜನೆ ಜನಪ್ರಿಯಗೊಂಡಿತ್ತು. ಮತ್ತೆ ಈ ಯೋಜನೆಯನ್ನು ಸಮರ್ಪಕವಾಗಿ ಮುನ್ನಡೆಸಿಕೊಂಡು ಹೋಗಬೇಕೆಂದರು.

ಪಡಿತರ ಅಂಗಡಿಗಳಿಗೆ ಸಮರ್ಪಕವಾಗಿ ಅಕ್ಕಿ ಬಿಡುಗಡೆಯಾಗುತ್ತಿಲ್ಲ. ಈ ಹಿಂದೆ ಅಕ್ಕಿ ಜೊತೆಗೆ ಗೋಧಿ, ಸಕ್ಕರೆ, ಅಡುಗೆ ಎಣ್ಣೆ, ಉಪ್ಪು ಸೇರಿದಂತೆ ಹಲವು ವಸ್ತುಗಳು ಸಿಗುತ್ತಿದ್ದವು. ಇದೀಗ ಅವೆಲ್ಲ ದೊರೆಯುತ್ತಿಲ್ಲ. ಅಕ್ಕಿಯಾದರೂ ಸಮರ್ಪಕವಾಗಿ ಸಿಕ್ಕರೆ ಜನರಿಗೆ ಅನುಕೂಲವಾಗುತ್ತದೆ ಈ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು.

ಪಡಿತರ ವಿತರಕರಿಗೆ ಯಾವುದೇ ಉದ್ಯೋಗ ಭದ್ರತೆ ಇಲ್ಲ. ಕ್ವಿಂಟಾಲ್‌ಗೆ ಸಿಗುವ 124 ರೂ. ಕಮಿಷನ್ ನಂಬಿಕೊಂಡು ಜೀವನ ಮಾಡುತ್ತಿದ್ದು, ಅಕ್ಕಪಕ್ಕದ ರಾಜ್ಯಗಳಲ್ಲಿ ಕ್ವಿಂಟಾಲ್‌ಗೆ 250 ರೂ.ಗೂ ಅಧಿಕ ಹಣ ಕೊಡಲಾಗುತ್ತಿದೆ. ನಮ್ಮ ರಾಜ್ಯ ಸರ್ಕಾರ ಅಕ್ಕಪಕ್ಕದ ರಾಜ್ಯದಂತೆ ಕ್ವಿಂಟಾಲ್‌ಗೆ 250 ರೂ. ನೀಡಬೇಕು. ಜೊತೆಗೆ ಅನ್ನಭಾಗ್ಯ ಆಹಾರ ಪದಾರ್ಥ ಸಾಗಿಸುವ ಲಾರಿಗಳಿಗೆ ಜಿಪಿಎಸ್ ಅಳವಡಿಕೆ ಮಾಡಬೇಕು. ಇದರಿಂದ ಅಕ್ರಮ ಪಡಿತರ ಮಾರಾಟಕ್ಕೆ ಕಡಿವಾಣ ಹಾಕಬಹುದು ಎಂದು ಸಲಹೆ ನೀಡಿದರು.

ಶಾರ್ಟ್ ಸರ್ಕ್ಯೂಟ್: ಮನೆ ಭಸ್ಮ

ಕೊಳ್ಳೇಗಾಲ, ನ.13– ಶಾರ್ಟ್ ಸರ್ಕ್ಯೂಟ್ ಸಂಭವಿಸಿ ಮನೆ ಸಂಪೂರ್ಣ ಭಸ್ಮವಾಗಿರುವ ಘಟನೆ ಸೋಮವಾರ ತಾಲೂಕಿನ ಹೊಸ ಅಣಗಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಸುಶೀಲ ಎಂಬುವರ ಮನೆ ಸುಟ್ಟು ಹೋಗಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ಸೋಮವಾರ ಮುಂಜಾನೆ ಶಾರ್ಟ್ ಸರ್ಕ್ಯೂಟ್ ನಿಂದಾಗಿ ಮನೆಗೆ ಬೆಂಕಿ ತಗುಲಿದೆ. ಈ ವೇಳೆ ಮನೆಯಲ್ಲಿ ಮಲಗಿದ್ದ ಸುಶೀಲ ಅವರು ಎಚ್ಚರಗೊಂಡು ತಕ್ಷಣ ಅಡುಗೆ ಮನೆಯಲ್ಲಿದ್ದ ಸಿಲಿಂಡರ್ ಅನ್ನು ಮನೆಯಿಂದಾಚೆಗೆ ತೆಗೆದುಕೊಂಡು ಹೋಗಿದ್ದಾರೆ. ಇದರಿಂದ ಸಂಭವಿಸಬಹುದಾದ ಭಾರಿ ಅನಾಹುತ ತಪ್ಪಿದಂತಾಗಿದೆ. ಆದರೆ ಮನೆಯಲ್ಲಿದ್ದ ಆಹಾರ ಪದಾರ್ಥಗಳು ಸೇರಿದಂತೆ ಗೃಹೋಪಯೋಗಿ ವಸ್ತುಗಳು ಸುಟ್ಟು ಭಸ್ಮವಾಗಿದೆ. ಮನೆ ಕಳೆದುಕೊಂಡು ಸಂಕಷ್ಟಕ್ಕೀಡಾಗಿರುವ ಮಹಿಳೆ ಸುಶೀಲ ಅವರಿಗೆ ಸರ್ಕಾರದಿಂದ ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.

ನಾಲ್ವರು ಜೂಜುಕೋರರ ಬಂಧನ

ಕೊಳ್ಳೇಗಾಲ, ನ13– ಪಟ್ಟಣದ ಕೆಂಪನಪಾಳ್ಯ ಗ್ರಾಮದ ತೋಟವೊಂದರ ಸಮೀಪ ಸಾರ್ವಜನಿಕ ರಸ್ತೆಯಲ್ಲಿ ಜೂಜಾಟವಾಡುತ್ತಿದ್ದ ನಾಲ್ವರು ಜೂಜು ಕೋರರನ್ನು ಕೊಳ್ಳೇಗಾಲ ಪಟ್ಟಣ ಪೊಲೀಸರು ಬಂಧಿಸಿದ್ದಾರೆ. ಕೆಂಪನಪಾಳ್ಯ ಗ್ರಾಮದ ಅಶೋಕ್(32), ಡಿ.ಶ್ರೀನಿವಾಸ್(30), ಸಿದ್ದರಾಜು (26), ಉಮೇಶ್(36) ಬಂಧಿತರು. ಜೂಜಾಟವಾಡುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸಿ, ಅವರಿಂದ ಪಣಕ್ಕಿಟ್ಟಿದ್ದ 3020 ರೂ. ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಕೊಳ್ಳೇಗಾಲ ಪಟ್ಟಣ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಜಾಮೀನಿನ ಮೇಲೆ ಆರೋಪಿಗಳನ್ನು ಬಿಡುಗಡೆ ಮಾಡಿದ್ದಾರೆ.

ಮ.ಬೆಟ್ಟದಲ್ಲಿ ವಿಜೃಂಭಣೆಯ ಹಾಲರವಿ ಉತ್ಸವ

ವಿವಿಧೆಡೆಯಿಂದ ಆಗಮಿಸಿದ ಲಕ್ಷಾಂತರ ಭಕ್ತರಿಂದ ಮಾದಪ್ಪನ ದರ್ಶನ





ಹನೂರು, ನ.13– ತಾಲೂಕಿನ ಪ್ರಸಿದ್ಧ ಯಾತ್ರಾ ಸ್ಥಳ ಶ್ರೀಮಲೆ ಮಹದೇಶ್ವರಬೆಟ್ಟದಲ್ಲಿ ಸೋಮವಾರ ಹಾಲರವಿ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಬೇಡಗಂಪಣ ಸಮುದಾಯದ 101 ಕಳಸ ಹೊತ್ತ ಹೆಣ್ಣು ಮಕ್ಕಳು ತಂಬಡಿಗೇರಿ ಬೀದಿಯಿಂದ ದೇವಸ್ಥಾನದವರೆಗೆ ವಾದ್ಯಮೇಳಗಳೊಂದಿಗೆ ಸಾಗಿ ಹಾಲರವಿಯನ್ನು ಸಮರ್ಪಿಸಿದರು. ಈ ವೇಳೆ ಭಕ್ತರ ಜೈಕಾರ ಮುಗಿಲು ಮುಟ್ಟಿತ್ತು. ವಾದ್ಯಮೇಳಗಳ ಸದ್ದಿಗೆ ಯುವಕರು ಹೆಜ್ಜೆ ಹಾಕಿ ಗಮನ ಸೆಳೆದರು. ಬಳಿಕ ಮಹದೇಶ್ವರಸ್ವಾಮಿಗೆ ಅಭಿಷೇಕ ಮಾಡಲಾಯಿತು. ಈ ವೇಳೆ ಸಾಲೂರು ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ ಸೇರಿದಂತೆ ಇತರರು ಹಾಜರಿದ್ದರು.

ವಿಶೇಷ ಪೂಜೆ: ಶನಿವಾರ ರಾತ್ರಿಯಿಂದ ಭಾನುವಾರ ಮುಂಜಾನೆವರೆಗೂ ದೇವಸ್ಥಾನ ಮುಂಭಾಗ, ರಂಗಮಂದಿರ ಸೇರಿದಂತೆ ವಿವಿಧೆಡೆ ಬಿಡಾರ ಹೂಡಿದ್ದ ಭಕ್ತರು ಮಾದಪ್ಪನನ್ನು ಸ್ಮರಿಸಿದರು. ಶನಿವಾರ ರಾತ್ರಿ ಎಣ್ಣೆಮಜ್ಜನ ಸೇವೆ, ಹುಲಿವಾಹನ ಉತ್ಸವ, ಬಸವ ವಾಹನ, ರುದ್ರಾಕ್ಷಿ ಮಂಟಪೋತ್ಸವ ಮತ್ತಿತರ ಧಾರ್ಮಿಕ ಕಾರ್ಯಕ್ರಮಗಳು ಸಂಭ್ರಮದಿಂದ ನಡೆದವು. ರಾತ್ರಿ ಇಡೀ ಸರತಿಯಲ್ಲಿ ನಿಂತ ಭಕ್ತರು ಮಾದಪ್ಪನ ದರ್ಶನ ಪಡೆದರು.

ದೀಪಾವಳಿ ಹಬ್ಬದ ಪ್ರಯುಕ್ತ ನಡೆಯುವ 4 ದಿನಗಳ ಈ ಜಾತ್ರೆಗೆ ಭಕ್ತರ ದಂಡೇ ಹರಿದು ಬರುತ್ತಿದ್ದು, ಕರ್ನಾಟಕ ಮಾತ್ರವಲ್ಲದೇ ತಮಿಳುನಾಡಿನಿಂದಲೂ ಲಕ್ಷಾಂತರ ಭಕ್ತರು ಬೆಟ್ಟಕ್ಕೆ ಆಗಮಿಸಿ ಸ್ವಾಮಿಗೆ ಪೂಜೆ ಸಲ್ಲಿಸಿ ಮುಡಿಸೇವೆ, ಹರಕೆ, ಕಾಣಿಕೆ ಸಲ್ಲಿಸುತ್ತಿದ್ದಾರೆ. ದೀಪಾವಳಿ ಜಾತ್ರೆ ಹಿನ್ನೆಲೆಯಲ್ಲಿ ದೇವಸ್ಥಾನ ಹಾಗೂ ಗೋಪುರ ಸೇರಿದಂತೆ ಸುತ್ತಮುತ್ತ ವಿಶೇಷ ದೀಪಾಲಂಕಾರ ವ್ಯವಸ್ಥೆ ಮಾಡಲಾಗಿದೆ.

ಬಸ್ ನಿಲ್ದಾಣದಲ್ಲಿ ಜನಜಂಗುಳಿ: ಮಹದೇಶ್ವರ ಬೆಟ್ಟದಲ್ಲಿ ದೀಪಾವಳಿ ಪ್ರಯುಕ್ತ ನಡೆಯುವ ಜಾತ್ರಾ ಮಹೋತ್ಸವಕ್ಕೆ ತೆರಳಲು ಕೊಳ್ಳೇಗಾಲ, ಚಾಮರಾಜನಗರ, ಹನೂರು ಪಟ್ಟಣದ ಬಸ್ ನಿಲ್ದಾಣದಲ್ಲಿ ಬಸ್ ಹತ್ತಲು ಮಾದಪ್ಪನ ಭಕ್ತರು ಮುಗಿ ಬೀಳುತ್ತಿದ್ದಾರೆ. ಅಲ್ಲದೇ ಜಾತ್ರೆ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಮಹದೇಶ್ವರ ಬೆಟ್ಟಕ್ಕೆ ಜನರು ಆಗಮಿಸುತ್ತಿದ್ದಾರೆ. ಮೈಸೂರು, ಚಾಮರಾಜನಗರ ಜಿಲ್ಲೆಯ ವಿವಿಧ ಗ್ರಾಮಗಳಿಂದ ಕಾಲ್ನಡಿಗೆಯಲ್ಲೇ ಭಕ್ತರು ಒಂದು ವಾರಕ್ಕೂ ಮುನ್ನವೇ ಪ್ರಯಾಣ ಬೆಳೆಸಿದ್ದಾರೆ.

420 ಸಾರಿಗೆ ಬಸ್ ಸೇವೆ: ದೀಪಾವಳಿ ಅಮಾವಾಸ್ಯೆ ಹಿನ್ನೆಲೆ ಮಹದೇಶ್ವರ ಬೆಟ್ಟಕ್ಕೆ ಚಾಮರಾಜನಗರ ಸೇರಿದಂತೆ ವಿವಿಧೆಡೆಯಿಂದ ಸಾರಿಗೆ ಬಸ್ ನಿಯೋಜಿಸಲಾಗಿದೆ. ಚಾಮರಾಜನಗರದಿಂದ 120, ಮೈಸೂರು 150, ರಾಮನಗರ 30, ಮಂಡ್ಯ 60, ತುಮಕೂರು 60 ಸೇರಿದಂತೆ ಒಟ್ಟು 420 ಬಸ್‌ಗಳು ಪ್ರಯಾಣಿಕರಿಗೆ ಸೇವೆ ಒದಗಿಸಲಾಗುತ್ತಿದೆ.

ಮೂವರು ಅಧಿಕಾರಿಗಳ ವಜಾಕ್ಕೆ ಆಗ್ರಹಿಸಿ ಪ್ರತಿಭಟನೆ



ಚಾಮರಾಜನಗರ, ನ.13– ಹನೂರು ತಾಲೂಕಿನ ರೈತ ಸಂಪರ್ಕ ಕೇಂದ್ರದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಲೆಕ್ಕ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಚೇತನ್ ಕುಮಾರ್ ಸೇರಿದಂತೆ ಮೂವರು ಅಧಿಕಾರಿಗಳನ್ನು ಸೇವೆಯಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಮಿತಿ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಎದುರು ಸಮಿತಿ ಜಿಲ್ಲಾ ಸಂಚಾಲಕ ಸಿ.ರಾಜಣ್ಣ ಯರಿಯೂರು ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ಹನೂರು ರೈತ ಸಂಪರ್ಕ ಕೇಂದ್ರ ಲೆಕ್ಕ ಸಹಾಯಕ ಚೇತನ್‌ಕುಮಾರ್, ಕೊಳ್ಳೇಗಾಲ ತಾಲೂಕು ಜಂಟಿ ಕೃಷಿ ನಿರ್ದೇಶಕರಾದ ಸುಂದ್ರಮ್ಮ, ಜಂಟಿ ಕೃಷಿ ನಿರ್ದೇಶಕ ಅಬೀಬ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ಮೂವರು ಅಧಿಕಾರಿಗಳನ್ನು ಸೇವೆಯಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿ ಮುಖ್ಯ ಲೆಕ್ಕಾಧಿಕಾರಿ ಬಸವರಾಜು, ಆಡಳಿತ ಶಿರಸ್ತೇದಾರ ರಂಗರಾಜ್ ಅವರ ಮೂಲಕ ಜಿಲ್ಲಾಧಿಕಾರಿಗಳಿಗೆ, ಕೃಷಿ ಸಚಿವರಿಗೆ ಮನವಿ ಸಲ್ಲಿಸಲಾಯಿತು.

ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಸಿ.ರಾಜಣ್ಣ ಯರಿಯೂರು ಮಾತನಾಡಿ, ಚೇತನ್‌ಕುಮಾರ್ ಕೆಲಸ ಮಾಡಿರುವ ಕಡೆಗಳಲ್ಲಿ ಅವ್ಯವಹಾರಗಳನ್ನು ನಡೆಸಿದ್ದು, ಇದರ ಬಗ್ಗೆ ಸೂಕ್ತ ತನಿಖೆ ನಡೆಸಿ ಕ್ರಮಕೈಗೊಳ್ಳುವಂತೆ ಜಿಲ್ಲಾ ಮತ್ತು ತಾಲೂಕು ಜಂಟಿ ಕೃಷಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಕೂಡ ಯಾವುದೇ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನಾ ಸಂಚಾಲಕ ಶಿವಕುಮಾರ್, ನಂಜುಂಡಸ್ವಾಮಿ, ದೊರೆಸ್ವಾಮಿ, ಜಿಲ್ಲಾ ಖಜಾಂಚಿ ಧರಣೇಂದ್ರ, ಜನಶಕ್ತಿ ಜಿಲ್ಲಾಧ್ಯಕ್ಷ ರಾಮಸಮುದ್ರ ಸುರೇಶ್, ಕಾಡಹಳ್ಳಿ ನಾಗರಾಜು, ಷರೀಫ್ ಇದ್ದರು.

ನಾಳೆ ಹಿಂಡಿ ಮಾರಮ್ಮ ಕೊಂಡೋತ್ಸವ

ಯಳಂದೂರು, ನ.13– ತಾಲೂಕಿನ ಅಗರ–ಮಾಂಬಳ್ಳಿ ಗ್ರಾಮದ ಹಿಂಡಿ ಮಾರಮ್ಮನ ಕೊಂಡೋತ್ಸವ ನ.15 ರಂದು ನಡೆಯಲಿದೆ. 4 ದಿನಗಳ ಕಾಲ ನಡೆಯುವ ಹಿಂಡಿ ಮಾರಮ್ಮನ ಜಾತ್ರೆಗೆ ಸೋಮವಾರ ವಿಧ್ಯುಕ್ತ ಚಾಲನೆ ನೀಡಲಾಯಿತು. ಸೋಮವಾರ ಉತ್ಸವ ಮೂರ್ತಿ ಮೆರವಣಿಗೆ ಮಾಡಲಾಯಿತು. ಮಂಗಳವಾರ ಕೇಲು ಉತ್ಸವ, ಸೌದೆಯನ್ನು ಸಾಂಪ್ರದಾಯಿಕವಾಗಿ ತರಲಾಗುವುದು. ಬುಧವಾರ ಕೊಂಡೋತ್ಸವ ನಡೆಯಲಿದ್ದು, ಗುರುವಾರ ಗ್ರಾಮದಲ್ಲಿ ಉತ್ಸವ ಮೂರ್ತಿ ಮೆರವಣಿಗೆ ನಡೆಸುವ ಮೂಲಕ ಜಾತ್ರೆಗೆ ತೆರೆ ಬೀಳಲಿದೆ.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು, ಮಾಜಿ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಶೀರ್ವಾದ ಪಡೆದ ಬಿ.ವೈ.ವಿಜಯೇಂದ್ರ

● ಪಕ್ಷದ ಜಿಲ್ಲಾ ಅಧ್ಯಕ್ಷರೊಂದಿಗೆ ಸಂವಾದ ನಡೆಸಿ ಪಕ್ಷ ಸಂಘಟನೆಗೆ ಮುನ್ನುಡಿ... ● ಗೊಂದಲಗಳಿಲ್ಲದಂತೆ ಜೆಡಿಎಸ್ ಜೊತೆಗೂಡಿ ಅಧಿಕ ಸ್ಥಾನ ಗೆಲ್ಲುವಂತೆ ಗೌಡರು ಆಶೀರ್ವಾದ







ಬೆಂಗಳೂರು, ನ.13(ಕೆಎಂಶಿ)–ಪಕ್ಷ ಸಂಘಟನೆ ಹಾಗೂ ಲೋಕಸಭಾ ಚುನಾವಣೆ ಸಿದ್ಧತೆ ಕುರಿತಂತೆ ಬಿಜೆಪಿಯ ನೂತನ ರಾಜ್ಯಾಧ್ಯಕ್ಷರಾದ ಬಿ.ವೈ. ವಿಜಯೇಂದ್ರ, ಜಿಲ್ಲಾ ಅಧ್ಯಕ್ಷರ ಜೊತೆ ಸಂವಾದ ನಡೆಸುವ ಮೂಲಕ ತಮ್ಮ ಕಾರ್ಯ ಆರಂಭಿಸಿದ್ದಾರೆ.

ನವೆಂಬರ್ 15ರಂದು ಪಕ್ಷದ ಅಧ್ಯಕ್ಷರಾಗಿ ಅಧಿಕೃತವಾಗಿ ಅಧಿಕಾರ ಸ್ವೀಕಾರಕ್ಕೂ ಮುನ್ನ ಜಿಲ್ಲಾ ಘಟಕಗಳಲ್ಲಿರುವ ಸಮಸ್ಯೆ ಅರಿತುಕೊಳ್ಳುವ ಜೊತೆಗೆ ಹಿರಿಯ ನಾಯಕರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಲು ಮುಂದಾಗಿದ್ದಾರೆ. ಜೆಡಿಎಸ್‌ನ ರಾಷ್ಟ್ರೀಯ ಅಧ್ಯಕ್ಷ ಹಾಗೂ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು, ಕೇಂದ್ರ ಮಾಜಿ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ, ಆಶೀರ್ವಾದ ಮತ್ತು ಬೆಂಬಲ ಪಡೆದುಕೊಂಡರು.

ತಂದೆ ಯಡಿಯೂರಪ್ಪ ಅವರ ಸಲಹೆಯಂತೆ ಈ ನಾಯಕರನ್ನು ಭೇಟಿ ಮಾಡಿ, ಕಿರಿಯನಿಗೆ ಆಶೀರ್ವಾದ ಮತ್ತು ಮಾರ್ಗದರ್ಶನ ನೀಡಿ ಎಂದು ಮನವಿ ಮಾಡಿಕೊಂಡಿದ್ದಾರೆ. ಹಿರಿಯರ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯೇಂದ್ರ, ತಂದೆ ಯಡಿಯೂರಪ್ಪ ರೀತಿಯಲ್ಲೇ ಪಕ್ಷ ಸಂಘಟಿಸಿ ಅಧಿಕಾರಕ್ಕೆ ಬನ್ನಿ ಎಂದು ಆಶೀರ್ವದಿಸಿದ್ದಾರೆ ಎಂದು ತಿಳಿಸಿದರು. ದೊಡ್ಡ ರಾಷ್ಟ್ರೀಯ ಪಕ್ಷದಲ್ಲಿ ಇಷ್ಟು ಚಿಕ್ಕ ವಯಸ್ಸಿಗೆ ದೊಡ್ಡ ಜವಾಬ್ದಾರಿ ಕೊಟ್ಟ ಬಗ್ಗೆ ಹೆಮ್ಮೆ ಪಟ್ಟಿದ್ದಾರೆ.

ತಂದೆಯವರು ಕಾಲಿಗೆ ಚಕ್ರ ಕಟ್ಟಿಕೊಂಡು ರಾಜ್ಯಾದ್ಯಂತ ಪ್ರವಾಸ ಮಾಡಿ ಸಂಘಟನೆಗೆ ಶಕ್ತಿ ತುಂಬಿದ ಮಾದರಿಯಲ್ಲಿ ನೀನು ಕೂಡ ಯಶಸ್ವಿಯಾಗು ಎಂದು ಹರಸಿದ್ದಾರೆ. ಅಷ್ಟೇ ಅಲ್ಲ, ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಒಗ್ಗಟ್ಟಾಗಿ ಸಮಸ್ಯೆಗಳು ಇದ್ದರೆ ಪರಿಹರಿಸಿಕೊಂಡು ಯಾವುದೇ ಗೊಂದಲಕ್ಕೆ ಅವಕಾಶ ಮಾಡಿಕೊಡದೆ ಹೆಚ್ಚು ಸ್ಥಾನ ಗೆಲ್ಲುವಂತೆ ಗೌಡರು ಆಶೀರ್ವದಿಸಿದ್ದಾರೆ. ಇದು ದೇಶದ ಭವಿಷ್ಯ ನಿರ್ಮಾಣದ ಚುನಾವಣೆ, ಯುವಕರು ಹೆಚ್ಚು–ಹೆಚ್ಚಾಗಿ ಮುಂದೆ ಬರಬೇಕೆಂದು ಕಿವಿ ಮಾತು ಹೇಳಿದ್ದಾರೆ. ದೇವೇಗೌಡರ ಭೇಟಿಯಿಂದ ಸಂತೋಷವಾಗಿದೆ. ರಾಜ್ಯ ಮತ್ತು ರಾಷ್ಟ್ರದ ಆಗು–ಹೋಗುಗಳ ಬಗ್ಗೆ ಈಗಲೂ ಅವರ ಚಿಂತನೆ ನಮಗೆ ಪ್ರೇರಕವಾಗಿದೆ.

ರಾಜ್ಯದಲ್ಲಿ ಹೋರಾಟ ಎಂಬ ಮಾತು ಬಂದಾಗ ದೇವೇಗೌಡರು ಹಾಗೂ ಯಡಿಯೂರಪ್ಪ ಅವರ ನೆನಪಾಗುತ್ತದೆ ಎಂದರು. ಹಿರಿಯ ನಾಯಕರ ಭೇಟಿ ನಂತರ ವಿಜಯೇಂದ್ರ, ಪಕ್ಷದ ಕೆಲವು ಜಿಲ್ಲಾಧ್ಯಕ್ಷರು ಹಾಗೂ ಕಾರ್ಯಕರ್ತರನ್ನೂ ಮಾತನಾಡಿಸಿ ವಿಶ್ವಾಸಕ್ಕೆ ತೆಗೆದುಕೊಂಡರು. ಅಷ್ಟೇ ಅಲ್ಲ, ತಾವು ಅಧ್ಯಕ್ಷರಾಗಿ ಪದಗ್ರಹಣ ಮಾಡುವ ಸಮಾರಂಭಕ್ಕೆ ಎಲ್ಲರಿಗೂ ಆಹ್ವಾನ ನೀಡಿದರು ಹಾಗೂ ಲೋಕಸಭಾ ಚುನಾವಣೆಗೆ ಸಿದ್ಧರಾಗುವಂತೆ ಕರೆ ನೀಡಿದರು.

ಅಮಾವಾಸ್ಯೆಯಂದು ದುರಂತ

ಮಂಗಳೂರಲ್ಲಿ ಕಟ್ಟಡದ ಮೇಲಿನಿಂದ ಜಿಗಿದು ಎಂಬಿಬಿಎಸ್ ವಿದ್ಯಾರ್ಥಿನಿ ಆತ್ಮಹತ್ಯೆ

ಮಂಗಳೂರು: ನಗರದ ಖಾಸಗಿ ವೈದ್ಯಕೀಯ ಕಾಲೇಜಿನ 20 ವರ್ಷದ ಎಂಬಿಬಿಎಸ್ ವಿದ್ಯಾರ್ಥಿನಿ ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೃತರನ್ನು ಪ್ರಕೃತಿ ಶೆಟ್ಟಿ (20) ಎಂದು ಗುರುತಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಅನುಪಮ್ ಅಗರ್ವಾಲ್ ಸುದ್ದಿಗಾರರಿಗೆ ತಿಳಿಸಿದರು.

ಬೆಳಗಿನ ಜಾವ 3 ಗಂಟೆ ಸುಮಾರಿಗೆ ಹಾಸ್ಟೆಲ್ ಕಟ್ಟಡದ ಆರನೇ ಮಹಡಿಯಿಂದ ಹಾರಿ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಆಕೆಯ ಹಾಸ್ಟೆಲ್ ಕೊಠಡಿಯಿಂದ ಪೊಲೀಸರು ಡೆತ್ ನೋಟ್ ವಶಪಡಿಸಿಕೊಂಡಿದ್ದು, ಅದರಲ್ಲಿ ಆಕೆ ತನ್ನ ಜೀವನದಲ್ಲಿ ಹತಾಶಳಾಗಿರುವುದಾಗಿ ತಿಳಿಸಿದ್ದಾಳೆ. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಆಯುಕ್ತರು ತಿಳಿಸಿದ್ದಾರೆ

ಚನ್ನಪಟ್ಟಣದಲ್ಲಿ ಬೈಕ್‌ಗೆ ಬಸ್ ಡಿಕ್ಕಿ: ತಂದೆ–ಮಗ ಸಾವು

ರಾಮನಗರ: ಜಿಲ್ಲೆಯಲ್ಲಿ ಬಸ್ಸೊಂದು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸ್ಥಳದಲ್ಲೇ ಸಾವಿಗೀಡಾಗಿರುವ ಘಟನೆ ಸೋಮವಾರ ಬೆಳಗ್ಗೆ ನಡೆದಿದೆ. ಚನ್ನಪಟ್ಟಣ ಸಮೀಪದ ತಿಟ್ಟಮಾರನಹಳ್ಳಿ ಗ್ರಾಮದಲ್ಲಿ ಘಟನೆ ನಡೆದಿದೆ. ಮೃತರನ್ನು ಸಿದ್ದಪ್ಪ (65) ಮತ್ತು ಅರುಣ್ (23) ಎಂದು ಗುರುತಿಸಲಾಗಿದೆ. ಇವರು ತಂದೆ–ಮಗ. ಮೂಲಗಳ ಪ್ರಕಾರ, ಚನ್ನಪಟ್ಟಣಕ್ಕೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮವಾಗಿ ಬೈಕ್ ಸವಾರರು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಚನ್ನಪಟ್ಟಣ ತಾಲೂಕು ಆಸ್ಪತ್ರೆಗೆ ರವಾನಿಸಲಾಗಿದೆ. ಘಟನಾ ಸ್ಥಳಕ್ಕೆ ಚನ್ನಪಟ್ಟಣ ಸಂಚಾರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬೆಂಗಳೂರಲ್ಲಿ 3 ಬೈಕ್‌ಗಳಿಗೆ ಡಿಕ್ಕಿ ಹೊಡೆದ ಕಾರು; ಸವಾರರಿಗೆ ತೀವ್ರ ಗಾಯ

ಬೆಂಗಳೂರು: ಸಿಲಿಕಾನ್ ಸಿಟಿ ಬೆಂಗಳೂರಿನ ಹುಳಿಮಾವು ಬಳಿ ಸೋಮವಾರ ಕಾರೊಂದು ಮೂರು ಬೈಕ್‌ಗಳಿಗೆ ಡಿಕ್ಕಿ ಹೊಡೆದ ನಂತರ ನಾಲ್ವರು ಗಾಯಗೊಂಡಿದ್ದಾರೆ. ಈ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. 17 ಸೆಕೆಂಡ್‌ಗಳ ವಿಡಿಯೋದಲ್ಲಿ ಜನನಿಬಿಡ ರಸ್ತೆಯಲ್ಲಿ ನಿಧಾನ ಗತಿಯಲ್ಲಿ ವಾಹನಗಳು ಸಂಚರಿಸುತ್ತಿರುವಾಗ ಇದ್ದಕ್ಕಿದ್ದಂತೆ ಹಿಂದಿನಿಂದ ಬಂದ ಕಾರು, ಮೂರು ಬೈಕ್‌ಗಳಿಗೆ ಡಿಕ್ಕಿ ಹೊಡೆದಿದ್ದು, ಸವಾರರು ಕಾರಿನ ಬಾನೆಟ್ ಮೇಲೆ ಬಿದ್ದು, ತರಗೆಲೆಗಳಂತೆ ಕೆಳಗೆ ಬಿದ್ದಿದ್ದಾರೆ. ಕೆಲವರು ಇಕ್ಕಟ್ಟಾದ ರಸ್ತೆಯ ಎಡಭಾಗಕ್ಕೆ ಬಿದ್ದರೆ, ಮತ್ತೆ ಕೆಲವರು ಇತರ ವಾಹನಗಳ ಮಧ್ಯ ಬಿದ್ದಿದ್ದಾರೆ.

ಇದು ಕರ್ನಾಟಕ, ಡಿಕೆಶಿ ರಿಪಬ್ಲಿಕ್ ಅಲ್ಲ

'ಗ್ಯಾರಂಟಿ' ವಿಷಯದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ತೀಕ್ಷ್ಣವಾಗಿ ತಿರುಗೇಟು ನೀಡಿದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ



ಬೆಂಗಳೂರು, ನ. 13(ಕೆಎಂಶಿ)–ಚಕ್ರ ತಿರುಗಲು ಶುರು ಆಗಿದೆ, ಮೇಲಿನ ಭಾಗ ಕೆಳಕ್ಕೆ ಬಂದೇ ಬರುತ್ತದೆ, ಸಮಯ ಬೇಕಷ್ಟೇ. ಈಗ ತಿರುಗಿರುವ ತಲೆ ಆಗ ತಾನಾಗಿಯೇ ನಿಲ್ಲುತ್ತದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹೇಳಿಕೆಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮಾರ್ಮಿಕವಾಗಿ ಚುಚ್ಚಿದ್ದಾರೆ.

ಗ್ಯಾರಂಟಿಗಳಿಗೂ ಕುಮಾರಸ್ವಾಮಿಗೂ ಏನು ಸಂಬಂಧ ಎಂದಿದ್ದ ಶಿವಕುಮಾರ್‌ಗೆ ತೀಕ್ಷ್ಣವಾಗಿ ತಿರುಗೇಟು ನೀಡಿರುವ ಅವರು, 'ಇದು ಕರ್ನಾಟಕ, ಡಿಕೆಶಿ ರಿಪಬ್ಲಿಕ್ ಅಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ 'ಎಕ್ಸ್' ಜಾಲತಾಣದಲ್ಲಿ ಕಿಡಿಕಾರಿರುವ ಅವರು, ಜನರು ಆಡಳಿತ ಪಕ್ಷದಲ್ಲಿ ಕೂರಿಸಿದ್ದಾರೆ ಎಂದು ಇವರ ತಲೆ ನಿಲ್ಲುತ್ತಿಲ್ಲ, ಡೂಪ್ಲಿಕೇಟ್ ಸಿಎಂ (ಡಿಸಿಎಂ) ಬಹಳ ಆವೇಶದಲ್ಲಿದ್ದಾರೆ, ಅತಿಯಾದ ಆವೇಶ ಆರೋಗ್ಯಕ್ಕೆ ಹಾನಿಕಾರಕ, ಇದು ನೆನಪಿದ್ದರೆ ಕ್ಷೇಮ ಎಂದು ಎಚ್ಚರಿಸಿದ್ದಾರೆ. ಹೆಚ್.ಡಿ.ಕುಮಾರಸ್ವಾಮಿಗೂ, ಗ್ಯಾರಂಟಿಗಳಿಗೂ ಏನು ಸಂಬಂಧ ಎಂಬ ಅಣಿಮುತ್ತು ಉದುರಿಸಿದ್ದಾರೆ, ಅಧಿಕಾರದ ಪಿತ್ತ ನೆತ್ತಿಗೇರಿ ಮಿದುಳು ಕೆಲಸ ಮಾಡದಿದ್ದರೆ, ನಾಲಿಗೆ ಹೀಗೆ ಹೊರಳುತ್ತದೆ. ಇದರಲ್ಲಿ ಅಚ್ಚರಿಯೇನೂ ಇಲ್ಲ.

ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷ, ಪ್ರತಿಪಕ್ಷ ಇರುತ್ತವೆ. ಪ್ರಶ್ನೆ ಮಾಡಬೇಕು ಎಂತಲೇ ಜನ ನನ್ನನ್ನು ವಿರೋಧಪಕ್ಷದಲ್ಲಿ ಕೂರಿಸಿದ್ದಾರೆ. ಜೆಡಿಎಸ್ ರೂಪಿಸಿದ್ದ ಪಂಚರತ್ನ ಯೋಜನೆಗಳು ರಾಜ್ಯದ ಸಮಗ್ರ ಅಭಿವೃದ್ಧಿಯ ಪಂಚಸೂತ್ರಗಳಾಗಿವೆ, ಕಾಂಗ್ರೆಸ್ ಗ್ಯಾರಂಟಿಗಳು ಜನರನ್ನು ಶಾಶ್ವತ ಆರ್ಥಿಕ ವಿಕಲರನ್ನಾಗಿಸುವ ತಾತ್ಕಾಲಿಕ ತಂತ್ರಗಳಷ್ಟೇ. ಕಾಂಗ್ರೆಸ್ ಕಳೆದ 75 ವರ್ಷಗಳಿಂದಲೂ ಇದನ್ನೇ ಮಾಡಿದೆ, ಜನರ ಕೈಯ್ಯಲ್ಲಿ ಭಿಕ್ಷಾಪಾತ್ರೆ ಇದ್ದರೆ, ಓಟಿನ ಜೋಳಿಗೆ ಭರ್ತಿ ಆಗುತ್ತದೆ ಎನ್ನುವ ದುಷ್ಟ ಬುದ್ಧಿ ಇವರದು.

ಜನರು ಸ್ವಾವಲಂಬಿಗಳಾಗಿ ಗೌರವಯುತ ಜೀವನ ನಡೆಸಬೇಕು ಎನ್ನುವ ಹಂಬಲ ನಮ್ಮ ಪಕ್ಷದ್ದಾಗಿತ್ತು.

ಸಹೋದ್ಯೋಗಿ ಸಚಿವರೊಬ್ಬರೇ ಹೇಳಿದ್ದು ನೆನಪಿಲ್ಲವೇ, ಎಲೆಕ್ಷನ್ ಗೆಲ್ಲಬೇಕಾದರೆ ಗ್ಯಾರಂಟಿಗಳಂಥ ಚೀಪ್ ಗಿಮಿಕ್ ಮಾಡಲೇಬೇಕು ಎಂದಿದ್ದರು. ಗ್ಯಾರಂಟಿಗಳು ಹಳ್ಳ ಹಿಡಿದು ವಿಫಲವಾಗಿವೆ. ಅನುಮಾನವೇ ಇಲ್ಲ, ಯಾವ ಗ್ಯಾರಂಟಿಯೂ ಸಮರ್ಪಕ ಜಾರಿ ಆಗಿಲ್ಲ. ಎಷ್ಟು ಜನರಿಗೆ ಫಲ ಸಿಕ್ಕಿದೆ, ಆರ್ಥಿಕವಾಗಿ ಹೊರೆ ಎಷ್ಟು ಬಿದ್ದಿದೆ, ಶ್ವೇತಪತ್ರ ಹೊರಡಿಸಿ ಬನ್ನಿ ಚರ್ಚೆಗೆ, ನಾನು ತಯಾರಿದ್ದೇನೆ. ಅಧಿವೇಶನದಲ್ಲೂ ದಾಖಲೆ ಸಮೇತ ಚರ್ಚೆಗೆ ಸಿದ್ಧನಿದ್ದೇನೆ. ಚನ್ನಪಟ್ಟಣದ ಜನರೂ ಮಾಹಿತಿ ನೀಡಿದ್ದಾರೆ. ರಾಜ್ಯದ ಉಳಿದ 223 ಕ್ಷೇತ್ರಗಳ ಜನರು ಕೊಟ್ಟ ವಿವರವೂ ತಮ್ಮ ಬಳಿ ಇದೆ.

ನೀವು ಒಳಗೊಳಗೆ ಮಾಡುತ್ತಿರುವ ಗಿಲೀಟುಗಳ ಮಾಹಿತಿಯೂ ಇದೆ, ಚರ್ಚೆ ಮಾಡೋಣವಂತೆ ಎಂದು ಉಪಮುಖ್ಯಮಂತ್ರಿ ಅವರಿಗೆ ನೇರ ಸವಾಲು ಹಾಕಿದ್ದಾರೆ ಕುಮಾರಸ್ವಾಮಿ. ಕೋಟಿ ರೂ. ಕೊಟ್ಟು ಗ್ಯಾರಂಟಿ ಸ್ಕೀಮುಗಳ ಬಗ್ಗೆ ಸಮೀಕ್ಷೆ ಮಾಡಿಸಿಕೊಂಡಿರಲ್ಲ, ಚನ್ನಪಟ್ಟಣದ ಜನರು ಏನು ಹೇಳಿದ್ದಾರೆ ಎಂಬ ಮಾಹಿತಿ ಅದರಲ್ಲಿ ಇದೆಯಾ. 'ಕೂಸು ಹುಟ್ಟುವ ಮುನ್ನವೇ ಕುಲಾವಿ ಹೊಲಿಸಿದಂತೆ' ಗ್ಯಾರಂಟಿ ಜಾರಿಗೆ ಮೊದಲೇ ಸಮೀಕ್ಷೆ ಪ್ಲ್ಯಾನ್ ಮಾಡಿಕೊಂಡಿದ್ದಿರಲ್ಲ, ನಿಮ್ಮ ಯೋಗ್ಯತೆಗೆ ಇನ್ನು 'ಯುವನಿಧಿ' ಜಾರಿಯಾಗೇ ಇಲ್ಲ. ಅದು ಬರುತ್ತೋ ಇಲ್ಲವೋ ಗೊತ್ತಿಲ್ಲ.

ರಾಜಕೀಯ ಸ್ವಾರ್ಥಕ್ಕಾಗಿ ರಾಮನಗರ, ಚನ್ನಪಟ್ಟಣ, ಮಾಗಡಿ ಕ್ಷೇತ್ರಗಳನ್ನು ಬಲಿಕೊಟ್ಟು, ರಾಮನಗರ ಹೆಸರಿಗೇ ಕೊಕ್ ಕೊಡಲು ಹೊರಟಿದ್ದಾರೆ. ಅಯ್ಯೋ ದೇವರೇ! ಈ ಸರ್ಕಾರದಲ್ಲಿ ರಾಮನ ಹೆಸರೂ ಗ್ಯಾರಂಟಿ ಇಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ.

ಮುಡಾ ಗುಂಪು ಮನೆ ಯೋಜನೆ

ಲಕ್ಷ ರೂ. ಠೇವಣಿಯೊಂದಿಗೆ ಬೇಡಿಕೆ ಸಮೀಕ್ಷೆಗೆ ಚಿಂತನೆ

ಮೈಸೂರು, ನ 13(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಅನುಷ್ಠಾನಗೊಳಿಸಲುದ್ದೇಶಿಸಿರುವ ಗುಂಪು ಮನೆ ಯೋಜನೆ (Group Housing Scheme)ಯಲ್ಲಿ ನಿಜವಾದ ಆಕಾಂಕ್ಷಿಗಳನ್ನು ತಿಳಿಯಲು ಒಂದು ಲಕ್ಷ ರೂ. ಠೇವಣಿಯೊಂದಿಗೆ ಹೆಸರು ನೋಂದಾಯಿಸಿಕೊಳ್ಳಲು ಅಧಿಕಾರಿಗಳು ಚಿಂತನೆ ನಡೆಸಿದ್ದಾರೆ.

ಮೈಸೂರು ನಗರದ ನಾಲ್ಕು ಕಡೆ ತನ್ನ ಅಧೀನದಲ್ಲಿರುವ ಜಾಗದಲ್ಲಿ 13 ಮಹಡಿ (G+12)ಯ ಕಟ್ಟಡಗಳನ್ನು ನಿರ್ಮಿಸಿ ಕೈಗೆಟಕುವ ದರದಲ್ಲಿ ಮನೆಗಳನ್ನು ಹಂಚಿಕೆ ಮಾಡುವ ಯೋಜನೆ ಅನುಷ್ಠಾನಗೊಳಿಸಲು ಮುಡಾ ಮುಂದಾಗಿತ್ತು. ಸರ್ಕಾರಕ್ಕೆ ಈಗಾಗಲೇ ಪ್ರಾಧಿಕಾರದಿಂದ ತಗಲುವ ವೆಚ್ಚ, ಮನೆಗಳ ಅಳತೆ, ವಿನ್ಯಾಸ, ಫಲಾನುಭವಿಗಳಿಗೆ ತಗಲುವ ವೆಚ್ಚ, ವಸತಿ ಸಮುಚ್ಚಯಕ್ಕೆ ಒದಗಿಸಲುದ್ದೇಶಿಸಿರುವ ಸೌಲಭ್ಯಗಳು, ನಿರ್ವಹಣೆ ವಿಧಾನ ಮತ್ತಿತರ ಮಾಹಿತಿಯುಳ್ಳ ಡಿಪಿಆರ್ (ಸಮಗ್ರ ಯೋಜನಾ ವರದಿ) ಸಲ್ಲಿಸಲಾಗಿದೆ.

ಆ ಪೈಕಿ ಮೈಸೂರಿನ ದಟ್ಟಗಳ್ಳಿ (ಮುಖ್ಯಮಂತ್ರಿ ಸಿದ್ದರಾಮಯ್ಯರ ನಿವಾಸ ಮತ್ತು ರಾಮಕೃಷ್ಣನಗರ ಸರ್ಕಲ್ ನಡುವೆ) ಹೈಟೆನ್ಷನ್ ಮಾರ್ಗದ ಪಕ್ಕದಲ್ಲಿರುವ 3 ಎಕರೆ ಜಾಗ ಹಾಗೂ ವಿಜಯನಗರ 4ನೇ ಹಂತದ ಬಸವನಹಳ್ಳಿಗೆ ಹೋಗುವ



ರಸ್ತೆ (ರಿಂಗ್ ರಸ್ತೆಯಿಂದ 500 ಮೀ. ದೂರದಲ್ಲಿ)ಯ ಪ್ರಮುಖ ಸ್ಥಳದಲ್ಲಿ ಗುಂಪು ಮನೆ ನಿರ್ಮಿಸುವ ಪ್ರಸ್ತಾವನೆಗೆ ಸರ್ಕಾರ ಅತೀ ಶೀಘ್ರದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡುವ ನಿರೀಕ್ಷೆ ಇದೆ.

ಈ ಹಿಂದೆ ಗುಂಪು ಮನೆಗಳಿಗಾಗಿ ಬೇಡಿಕೆ ಸಮೀಕ್ಷೆಗೆಂದು ಆಹ್ವಾನಿಸಿದ್ದಾಗ ಸುಮಾರು 47 ಸಾವಿರ ಮಂದಿ ಮನೆ ಬಯಸಿ ಅರ್ಜಿ ಸಲ್ಲಿಸಿದ್ದರು. ಇತ್ತೀಚೆಗೆ ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಸಭೆ ನಡೆಸಿದ್ದ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರು, ಗುಂಪು ಮನೆ ಯೋಜನೆ ಸಂಬಂಧ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಕೇವಲ ಅರ್ಜಿ ಕರೆದು ಸಮೀಕ್ಷೆ ಮಾಡುವುದರ ಬದಲು ಒಂದು ಲಕ್ಷ ರೂ. ಠೇವಣಿ ಹಣದೊಂದಿಗೆ ಬೇಡಿಕೆಗೆ ಅರ್ಜಿ ಕರೆದಲ್ಲಿ ನಿಜವಾಗಲೂ ಮನೆಯ ಅಗತ್ಯವಿರುವವರು ಹೆಸರು ನೋಂದಾಯಿಸಿಕೊಳ್ಳುತ್ತಾರೆ. ಆಗ ಮಾತ್ರ ಯೋಜನೆ ಮಾಡಿದರೆ ಮನೆಗಳು ಮಾರಾಟವಾಗುತ್ತವೆ ಎಂದು ಅಭಿಪ್ರಾಯಪಟ್ಟ ಸಚಿವರು, ಈಗಲೇ ಮತ್ತೊಮ್ಮೆ ಅರ್ಜಿ ಕರೆದು ಬೇಡಿಕೆ ಸಮೀಕ್ಷೆ ನಡೆಸಿ ಎಂದು ಸೂಚನೆ ನೀಡಿದ್ದರು.

ಅದರನ್ವಯ ಇದೀಗ ಮತ್ತೊಮ್ಮೆ ಬೇಡಿಕೆ ಸಮೀಕ್ಷೆಗೆ ಅರ್ಜಿ ಆಹ್ವಾನಿಸಲು ಸಿದ್ಧತೆ ಮಾಡಿಕೊಳ್ಳುತ್ತಿರುವ ಮುಡಾ ಅಧಿಕಾರಿಗಳು, ಅರ್ಜಿ ಜೊತೆ 1 ಲಕ್ಷ ರೂ. ಠೇವಣಿ ಹಣ ಪಾವತಿಸುವಂತೆ ಷರತ್ತು ವಿಧಿಸಲು ನಿರ್ಧರಿಸಿದ್ದಾರೆ. ತಾವು ನಿರ್ಮಿಸಲಿರುವ ವಸತಿ ಸಮುಚ್ಚಯದ ಮಾದರಿ, ಲಭ್ಯವಾಗುವ ಮನೆಗಳ ವಿಸ್ತೀರ್ಣ (ಬಿಲ್ಡಿಂಗ್ ಏರಿಯಾ), ಇನ್ನಿತರ ಸೌಲಭ್ಯಗಳು, ಅಂದಾಜು ವೆಚ್ಚ ಇನ್ನಿತರ ಮಾಹಿತಿಗಳನ್ನು ಅರ್ಜಿ ಆಹ್ವಾನಿಸಿದಾಗ ನೀಡಲಾಗುವುದು. 13 ಮಹಡಿಗಳ ವಸತಿ ಸಮುಚ್ಚಯದಲ್ಲಿ 300ರಿಂದ 350 ಮನೆಗಳನ್ನು ನಿರ್ಮಿಸಲುದ್ದೇಶಿಸಲಾಗಿದ್ದು, ಲಿಫ್ಟ್, ವಾಹನ ಪಾರ್ಕಿಂಗ್, ಮನರಂಜನೆಗೆ ಸ್ಥಳಾವಕಾಶ ಸೇರಿದಂತೆ ಒದಗಿಸುವ ಸೌಲಭ್ಯಗಳ ಬಗ್ಗೆಯೂ ಜನರಿಗೆ ಮಾಹಿತಿ ನೀಡಲಾಗುವುದು.

ವಸತಿ ಬಡಾವಣೆ ರಚಿಸಲು ಭೂಮಿ ಕೊರತೆ ಇರುವ ಕಾರಣ, ಲಭ್ಯವಿರುವ ಹಾಗೂ ಈ ಉದ್ದೇಶಕ್ಕೆಂದೇ ಮೀಸಲಿರಿಸಿರುವ ಜಾಗದಲ್ಲಿ ಗಗನಚುಂಬಿ ಕಟ್ಟಡಗಳನ್ನು ನಿರ್ಮಿಸಿ ಸೂರಿಲ್ಲದವರಿಗೆ ಕೈಗೆಟಕುವ ದರ (No Profit, No Loss)ದಲ್ಲಿ ಮನೆಗಳನ್ನು ಹಂಚಿಕೆ ಮಾಡುವ ಮೂಲಕ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿ ಹಲವು ವರ್ಷಗಳಿಂದ ಕಾಯುತ್ತಿರುವ ಆಕಾಂಕ್ಷಿಗಳ ಬೇಡಿಕೆ ಈಡೇರಿಸಲು ಮುಡಾ ಮುಂದಾಗಿದೆ.

ಮೈಸೂರಿನ ರಿಂಗ್ ರಸ್ತೆಯಲ್ಲಿ ಮತ್ತೆ ರಾರಾಜಿಸುತ್ತಿದೆ ಕಟ್ಟಡ ತ್ಯಾಜ್ಯದ ರಾಶಿ!

ಎಲ್ಲೆಂದರಲ್ಲಿ ಕಸ, ದೀಪದ ಕಂಬಗಳಲ್ಲಿ ನೇತು ಬಿದ್ದಿವೆ ಸಾವಿರಾರು ಫ್ಲೆಕ್ಸ್‌ಗಳು, ಗಿಡಗಂಟಿಗಳಿಂದ ಆವೃತವಾಗಿರುವ ಸರ್ವೀಸ್ ರಸ್ತೆಯಲ್ಲಿ ವಾಹನ ಸಂಚಾರ ದುಸ್ತರ, ಮದ್ಯಪಾನ ಮಾಡುವವರಿಗೆ ಪ್ರಶಸ್ತ ಸ್ಥಳವಾದ ಹೊರ ವರ್ತುಲ ರಸ್ತೆ



ಮೈಸೂರು, ನ.13(ಆರ್‌ಕೆ)– ಮೈಸೂರಲ್ಲಿ ವಾಹನ ದಟ್ಟಣೆ ತಪ್ಪಿಸಿ, ಸುಗಮ ಸಂಚಾರಕ್ಕೆ ಅನುಕೂಲವಾಗಲೆಂದು ನಿರ್ಮಿಸಿರುವ ಹೊರ ವರ್ತುಲ ರಸ್ತೆ (Outer Ring Road) ಈಗ ಕಟ್ಟಡವೂ ಸೇರಿದಂತೆ ತ್ಯಾಜ್ಯಗಳನ್ನು ಸುರಿಯುವ ಕಸದ ಜಾಗವಾಗಿದೆ.

ಎಲ್ಲೆಂದರಲ್ಲಿ ಘನತ್ಯಾಜ್ಯದ ರಾಶಿ ಕಂಡು ಬರುತ್ತಿದ್ದು, ಕೆಟ್ಟ ವಾಸನೆ ಬೀರುತ್ತಿದೆ. ಸರ್ವಿಸ್ ರಸ್ತೆ ಬದಿಯಲ್ಲಿ ಮದ್ಯದ ಬಾಟಲಿಗಳು, ಎರಡೂ ಕಡೆ ಚಾಚಿರುವ ಪೊದೆಗಳು ಸರ್ವಿಸ್ ರಸ್ತೆಯೇ ಕೆಲವೆಡೆ ಮುಚ್ಚಿ ಹೋಗಿದ್ದು, ಹಾವು–ಹಲ್ಲಿ, ನಾನಾ ಕ್ರಿಮಿಕೀಟಗಳ ತಾಣವಾಗಿರುವುದರಿಂದ ವಾಹನ ಸಂಚಾರ ದುಸ್ತರವಾಗಿದೆ.

ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಿಂದ ಬನ್ನೂರು ರಸ್ತೆ ಜಂಕ್ಷನ್‌ವರೆಗೆ ರಿಂಗ್ ರೋಡ್‌ನ ಎರಡೂ ಕಡೆಯ ಸರ್ವೀಸ್ ರಸ್ತೆ ಬದಿ ರಾಶಿಗಟ್ಟಲೆ ಕಟ್ಟಡ ತ್ಯಾಜ್ಯ, ಮನೆಗಳಲ್ಲಿ ಉತ್ಪತ್ತಿಯಾಗುವ ಹಸಿ ಮತ್ತು ಒಣ ಕಸವನ್ನು ತಂದು ಸುರಿದಿರುವುದರಿಂದ ಅಲ್ಲಿಯ ವಾತಾವರಣ ಹಾಳಾಗಿ ವಾಹನ ಸವಾರರು ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ.

ಪುಷ್ಪಾಶ್ರಮ ಸಮೀಪ ಹಳೆ ಕೆಸರೆಗೆ ಹೋಗುವ ಜಂಕ್ಷನ್‌ನಿಂದ ರಿಂಗ್ ರಸ್ತೆಯುದ್ದಕ್ಕೂ ಆರ್‌ಟಿಓ (ಪೂರ್ವ) ಕಚೇರಿ, ನಾರಾಯಣ ಹೃದಯಾಲಯ, ಹಂಚ್ಯಾ–ಸಾತಗಳ್ಳಿ–ವಿಟಿಯು ಪ್ರಾದೇಶಿಕ ಕಚೇರಿ ಸೇರಿದಂತೆ ಎರಡೂ ಕಡೆಗಳಲ್ಲಿ ತಿ.ನರಸೀಪುರ ರಿಂಗ್ ರಸ್ತೆವರೆಗೂ ಜನರು ಮನೆ ಕಸ, ಮಾಂಸದಂಗಡಿ ತ್ಯಾಜ್ಯ, ಹೋಟೆಲ್, ಕೋಳಿ ಅಂಗಡಿಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ಹಾಗೂ ಹಳೇ ಕಟ್ಟಡಗಳ ಧ್ವಂಸ ಮಾಡಿದ ಪಳೆಯುಳಿಕೆ ತಂದು ಸುರಿಯುತ್ತಿರುವುದರಿಂದ ಪರಿಸರಕ್ಕೆ ತೀವ್ರ ಹಾನಿಯಾಗುತ್ತಿದೆ.

ಪಾಲಿಕೆಯಿಂದಲೇ ತೆರವು



ಮೈಸೂರು, ನ. 13(ಆರ್‌ಕೆ)– ರಿಂಗ್ ರಸ್ತೆಯ ಆಸುಪಾಸಿನಲ್ಲಿ ಸುರಿದಿರುವ ತ್ಯಾಜ್ಯ, ಕಟ್ಟಡ ತ್ಯಾಜ್ಯಗಳನ್ನು ಮೈಸೂರು ಮಹಾನಗರ ಪಾಲಿಕೆಯಿಂದಲೇ ತೆರವುಗೊಳಿಸಲಾಗುವುದು ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಸ್ವಚ್ಛ ನಗರಿ, ಪಾರಂಪರಿಕ ನಗರಿ, ಸುಂದರ ನಗರಿ ಎಂದು ಹೇಳುವ ಮೈಸೂರಿನ ಸ್ವಚ್ಛತೆಗೆ ಪಾಲಿಕೆಯು ನಿರಂತರವಾಗಿ ಶ್ರಮಿಸುತ್ತಿದೆ. ವಿದೇಶಿಗರು, ಪ್ರವಾಸಿಗರು ಬರುವ ಮೈಸೂರು ನಗರವನ್ನು ಸ್ವಚ್ಛವಾಗಿಡುವುದು ನಮ್ಮ ಕರ್ತವ್ಯವಾಗಿರುವುದರಿಂದ ರಿಂಗ್ ರಸ್ತೆ ಬದಿ ಸುರಿದಿರುವ ತ್ಯಾಜ್ಯ ತೆರವುಗೊಳಿಸುತ್ತೇವೆ ಎಂದು ತಿಳಿಸಿದರು. ರಿಂಗ್ ರಸ್ತೆ ಭಾರತೀಯ ಹೆದ್ದಾರಿಗಳ ಪ್ರಾಧಿಕಾರಕ್ಕೆ ಸೇರಿದೆಯಾದರೂ, ಒಳ ಮತ್ತು ಹೊರಭಾಗದಲ್ಲಿ ಮೈಸೂರಿನ ಸೌಂದರ್ಯ ಕಾಪಾಡುವ ದೃಷ್ಟಿಯಿಂದ ಪಾಲಿಕೆಯಿಂದಲೇ ಸ್ವಚ್ಛಗೊಳಿಸಲಾಗುತ್ತದೆ. ಆದರೆ, ಟ್ರಕ್, ಟ್ರಾಕ್ಟರ್‌ಗಳಲ್ಲಿ ಕಟ್ಟಡ ತ್ಯಾಜ್ಯ ಸುರಿಯುವವರ ವಿರುದ್ಧ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ನುಡಿದರು. ಆಯಾ ಠಾಣಾ ವ್ಯಾಪ್ತಿಯ ಪೊಲೀಸರು ಆಗಿಂದಾಗ್ಗೆ ರಿಂಗ್ ರಸ್ತೆಯಲ್ಲಿ ಗಸ್ತು ತಿರುಗಿ ಕಸ ಸುರಿಯುವವರ ಮೇಲೆ ನಿಗಾ ವಹಿಸಬೇಕು. ಪಾಲಿಕೆ ವಲಯ ಕಚೇರಿ ಅಧಿಕಾರಿಗಳು, ಗ್ರಾಮ ಪಂಚಾಯ್ತಿಯಿಂದಲೂ ರಿಂಗ್ ರಸ್ತೆ ಬಗ್ಗೆ ಗಮನಹರಿಸಿದಲ್ಲಿ ಸಮಸ್ಯೆ ಉಂಟಾಗದಂತೆ ನಿರ್ವಹಿಸಬಹುದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಸರ್ವಿಸ್ ರಸ್ತೆ ಕಣ್ಮರೆ: ರಿಂಗ್ ರೋಡ್‌ನ ಎರಡೂ ಕಡೆಯ ಸರ್ವಿಸ್ ರಸ್ತೆಯ ಇಕ್ಕೆಲಗಳಲ್ಲಿ ಗಿಡ–ಗಂಟಿಗಳು ಬೆಳೆದು ರಸ್ತೆಯೇ ಕಾಣದಂತೆ ಮುಚ್ಚಿಹೋಗಿದೆ. ಪರಿಣಾಮ ಅಲ್ಲಿ ಹಾವು–ಹಲ್ಲಿಗಳು ಸೇರಿಕೊಂಡು ಆಶ್ರಯ ಪಡೆದಿರುವುದರಿಂದ ಬಹುತೇಕ ಭಾಗದಲ್ಲಿ ಜನರು ಓಡಾಡಲು ಭಯಪಡುತ್ತಿದ್ದಾರೆ.

ವರ್ಷವಿಡೀ ಫ್ಲೆಕ್ಸ್‌ಗಳಿಗೆ ವೇದಿಕೆಯಾದ ಕಂಬಗಳು: ರಿಂಗ್ ರಸ್ತೆಯ ವಿದ್ಯುತ್ ದೀಪದ ಕಂಬಗಳು ಫ್ಲೆಕ್ಸ್‌ಗಳಿಗೆ ವೇದಿಕೆಯಾಗಿವೆ. ರಾಜಕೀಯ ಪಕ್ಷಗಳ ಮುಖಂಡರ ಹುಟ್ಟುಹಬ್ಬದ ಶುಭಾಶಯ ಫ್ಲೆಕ್ಸ್‌ಗಳನ್ನು ಕಂಬಗಳಿಗೆ ಅಳವಡಿಸಿ ರಿಂಗ್ ರಸ್ತೆ ಸೌಂದರ್ಯವನ್ನು ಹಾಳು ಮಾಡಲಾಗುತ್ತಿದೆ. ಅಲ್ಲದೆ, ವಾಹನ ಸವಾರರ ಗಮನ ಸೆಳೆಯುವ ನೂರಾರು ವರ್ಣರಂಜಿತ ಫ್ಲೆಕ್ಸ್‌ಗಳು ಅಪಘಾತಗಳಿಗೂ ಕಾರಣವಾಗುತ್ತಿವೆ.

ಕುಡುಕರ ತಾಣ: ಹಿನಕಲ್‌ನಿಂದ ಬೋಗಾದಿ ಜಂಕ್ಷನ್, ಮುಂದೆ ದಟ್ಟಗಳ್ಳಿವರೆಗೆ, ಹೆಚ್.ಡಿ.ಕೋಟೆ ರಸ್ತೆ ಜಂಕ್ಷನ್, ಹಂಚ್ಯಾ–ಸಾತಗಳ್ಳಿಯ ಬನ್ನೂರು ರಸ್ತೆ ಜಂಕ್ಷನ್, ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಬಳಿ, ರಾಯಲ್ ಇನ್ ಜಂಕ್ಷನ್‌ನಿಂದ ಹೆಬ್ಬಾಳಿನ ಭಾರತ್ ಕ್ಯಾನ್ಸರ್ ಆಸ್ಪತ್ರೆ ಸರ್ಕಲ್‌ವರೆಗೆ ಬಹುತೇಕ 42.5 ಕಿ.ಮೀ. ರಿಂಗ್ ರಸ್ತೆಗಳ ಡಾಬಾಗಳು, ಮದ್ಯದಂಗಡಿ ಮಳಿಗೆಗಳ ಆಸುಪಾಸಿನಲ್ಲಿ ಕುಡುಕರು ಸರ್ವಿಸ್ ರಸ್ತೆಯಲ್ಲೇ ಮದ್ಯಪಾನ ಮಾಡಿ ಬಾಟಲಿಗಳನ್ನು ಅಲ್ಲಿಯೇ ಎಸೆದು ಹೋಗುತ್ತಿದ್ದಾರೆ.



ಮುರಿದು ಬಿದ್ದಿರುವ ಸ್ಲ್ಯಾಬ್‌ಗಳು: 42.5 ಕಿ.ಮೀ. ಉದ್ದಕ್ಕೂ ರಿಂಗ್ ರಸ್ತೆಯ ಎರಡೂ ಬದಿಯ ಸರ್ವಿಸ್ ರಸ್ತೆ ಮಧ್ಯೆ ಇರುವ ವಿಭಜಕದ ಚರಂಡಿಗೆ ಮುಚ್ಚಿರುವ ಸಿಮೆಂಟ್ ಕಾಂಕ್ರಿಟ್ ಸ್ಲ್ಯಾಬ್‌ಗಳು ಅಲ್ಲಲ್ಲಿ ಮುರಿದಿರುವುದರಿಂದ ಉಂಟಾಗಿರುವ ಕಂದಕಗಳು ಅಪಾಯಕ್ಕೆ ಬಾಯ್ತೆರೆದು ಕಾಯುತ್ತಿವೆ. ಬೀದಿದೀಪಗಳಿಗೆ ಕೇಬಲ್ ಸಂಪರ್ಕ ಕಲ್ಪಿಸಲೆಂದು ತೆಗೆದಿದ್ದ ಗುಂಡಿಯನ್ನು ಸರಿಯಾಗಿ ಮುಚ್ಚದಿರುವ ಕಾರಣ ಜಲ್ಲಿಕಲ್ಲುಗಳು ಹರಡಿಕೊಂಡು ದ್ವಿಚಕ್ರ ವಾಹನಗಳು ಆಯತಪ್ಪಿ ಬೀಳುವಂತಾಗಿವೆ.

ಕೆರೆಯಂತಾದ ರಸ್ತೆ: ಹೆಬ್ಬಾಳಿನ ಜೆಕೆ ಟೈರ್ಸ್ ಪ್ಲಾಂಟ್ ಮತ್ತು ಶುಭೋದಿನಿ ಕನ್ವೆನ್ಷನ್ ಹಾಲ್ ನಡುವೆ ಪೆಟ್ರೋಲ್ ಬಂಕ್ ಎದುರು ಸರ್ವಿಸ್ ರಸ್ತೆಯಲ್ಲಿ ಉಂಟಾಗಿರುವ ಗುಂಡಿಯಲ್ಲಿ ನೀರು ನಿಂತು ದೊಡ್ಡ ಹೊಂಡದಂತಾಗುತ್ತಿರುವುದರಿಂದ ವಾಹನ ಸವಾರರು ಸರ್ವೀಸ್ ರಸ್ತೆ ಬಿಟ್ಟು ರಿಂಗ್ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲೇ ಚಲಿಸಿ ಅಪಘಾತಗಳು ಸಂಭವಿಸುತ್ತಿವೆ. ಕಬ್ಬಿಣ–ಸಿಮೆಂಟ್, ನೂರಾರು ಹೋಟೆಲ್ ಸೇರಿದಂತೆ ಅಪಾರ ಪ್ರಮಾಣದ ವಾಣಿಜ್ಯ ಮಳಿಗೆಗಳು ರಿಂಗ್ ರಸ್ತೆಯಲ್ಲೇ ನಡೆಯುತ್ತಿದ್ದು, ಸರ್ವಿಸ್ ರಸ್ತೆಯಲ್ಲಿ ತ್ಯಾಜ್ಯ ಬಿಸಾಡುತ್ತಿರುವುದು, ವಾಹನ ರಿಪೇರಿ ಮಾಡುತ್ತಿರುವುದರಿಂದ ಕೆಲವೆಡೆ ಸರ್ವಿಸ್ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿದೆ.

ಈ ಹಿಂದೆ ರಿಂಗ್ ರಸ್ತೆ ಬದಿ ಕಸ, ಕಟ್ಟಡ ತ್ಯಾಜ್ಯ ತಂದು ಸುರಿಯುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದಾಗಿ ಪಾಲಿಕೆ ಅಧಿಕಾರಿಗಳು ಹೇಳುತ್ತಿದ್ದರಾದರೂ ನಿಯಂತ್ರಣಕ್ಕೆ ಕ್ರಮ ಕೈಗೊಂಡಿಲ್ಲ. ಹಲವು ಬಾರಿ ರಿಂಗ್ ರಸ್ತೆ ಸ್ವಚ್ಛಗೊಳಿಸಲಾಗಿತ್ತಾದರೂ, ಪೆಟ್ರೋಲಿಂಗ್ ಮಾಡಿ ನಿಗಾ ವಹಿಸದಿರುವುದು ಈ ಅವಾಂತರಕ್ಕೆ ಕಾರಣವಾಗಿದೆ.

ಶಾಸಕರಿಗೆ ಗಂಡಭೇರುಂಡ ಲಾಂಛನವುಳ್ಳ ಬ್ಯಾಡ್ಜ್: ಸ್ಪೀಕರ್ ಯು.ಟಿ. ಖಾದರ್

ಇನ್ನು ಮುಂದೆ ಉಡುಗೊರೆಗಳೂ ಈ ಲಾಂಛನದ ಮೂಲಕವೇ ನೀಡಲ್ಪಡುತ್ತವೆ



ಬೆಂಗಳೂರು: ಇದೇ ಮೊದಲ ಬಾರಿಗೆ ರಾಜ್ಯದ ಎಲ್ಲ ಶಾಸಕರಿಗೆ ಗಂಡಭೇರುಂಡ ಲಾಂಛನವಿರುವ ತಲಾ ಮೂರು ಬ್ಯಾಡ್ಜ್‌ಗಳನ್ನು ವಿತರಿಸಲು ವಿಧಾನಸಭೆ ಸಚಿವಾಲಯ ನಿರ್ಧರಿಸಿದೆ.

ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್ ಈ ತೀರ್ಮಾನ ಕೈಗೊಂಡಿದ್ದಾರೆ. ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳ ಪ್ರಮುಖರ ಜತೆ ಚರ್ಚಿಸಿದ ಬಳಿಕ ಅಂತಿಮ ನಿರ್ಧಾರ ಕೈಗೊಳ್ಳಲಾಗಿದೆ. ಒಬ್ಬ ಶಾಸಕರಿಗೆ ಒಂದು ಬ್ಯಾಡ್ಜ್ ವಿತರಿಸುವ ಪ್ರಸ್ತಾವ ಆರಂಭದಲ್ಲಿತ್ತು. ಈಗ ಶಾಸಕರ ಬೇಡಿಕೆಯಂತೆ ತಲಾ ಮೂರು ಬ್ಯಾಡ್ಜ್ ವಿತರಿಸಲು ತೀರ್ಮಾನಿಸಲಾಗಿದೆ.

ಬೆಂಗಳೂರಿನ ಐ ಡ್ರೀಮ್ಸ್ ಟ್ರೇಡ್ ಅಂಡ್ ಈವೆಂಟ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಿಂದ ಪ್ರತಿ ಬ್ಯಾಡ್ಜ್‌ಗೆ ಸರಕು ಮತ್ತು ಸೇವಾ ತೆರಿಗೆ ಸೇರಿದಂತೆ ರೂ. 2,832ರ ದರದಲ್ಲಿ ಬ್ಯಾಡ್ಜ್‌ಗಳನ್ನು ಖರೀದಿಸಲಾಗುತ್ತಿದೆ. ರೂ. 19.03 ಲಕ್ಷ ವೆಚ್ಚದಲ್ಲಿ ಬ್ಯಾಡ್ಜ್‌ಗಳನ್ನು ನೇರವಾಗಿ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ಸೆಕ್ಷನ್ 4ಜಿ ಅಡಿ ವಿನಾಯ್ತಿ ನೀಡಿ ಆರ್ಥಿಕ ಇಲಾಖೆ ಅಕ್ಟೋಬರ್ 30ರಂದು ಆದೇಶ ಹೊರಡಿಸಿದೆ.

'ಆಸ್ಟ್ರೇಲಿಯಾದ ಮೇಯರ್ ಒಬ್ಬರನ್ನು ಇತ್ತೀಚೆಗೆ ಭೇಟಿಮಾಡಿದ್ದೆ. ಅವರು ಸರ್ಕಾರದ ಲಾಂಛನವುಳ್ಳ ಬ್ಯಾಡ್ಜ್ ಅನ್ನು ನನಗೆ ಉಡುಗೊರೆಯಾಗಿ ನೀಡಿದ್ದರು. ಅಲ್ಲಿನ ಚುನಾಯಿತ ಪ್ರತಿನಿಧಿಗಳು ಗೌರವ ಸೂಚಕವಾಗಿ ಸರ್ಕಾರದ ಲಾಂಛನವುಳ್ಳ ಬ್ಯಾಡ್ಜ್ ಧರಿಸುವ ವಿಷಯ ತಿಳಿಸಿದ್ದರು. ಅದೇ ಮಾದರಿಯಲ್ಲಿ ರಾಜ್ಯದಲ್ಲೂ ಶಾಸಕರಿಗೆ ಸರ್ಕಾರದ ಅಧಿಕೃತ ಲಾಂಛನ ವುಳ್ಳ ಬ್ಯಾಡ್ಜ್ ವಿತರಿಸಲು ತೀರ್ಮಾನಿಸ ಲಾಗಿದೆ' ಎಂದು ಖಾದರ್ ತಿಳಿಸಿದ್ದಾರೆ.

ಉಡುಗೊರೆ ನೀಡುವುದಕ್ಕೂ ಸಿದ್ಧತೆ: ಶಾಸಕರು, ಗಣ್ಯರು, ಅಧಿಕಾರಿಗಳು ಮತ್ತು ಮಾಧ್ಯಮ ಪ್ರತಿನಿಧಿಗಳಿಗೆ ವಿಧಾನಸಭೆ ಸಚಿವಾಲಯದಿಂದ ಸರ್ಕಾರದ ಲಾಂಛನವುಳ್ಳ ಡೈರಿ, ಪೆನ್, ಸ್ಟೀಲ್ ನೀರಿನ ಬಾಟಲಿ, ವಿಸಿಟಿಂಗ್ ಕಾರ್ಡ್ ಹೋಲ್ಡರ್ ಮತ್ತು ಕೀ ಚೈನ್ ವಿತರಣೆಗೆ ಸಿದ್ಧತೆ ನಡೆದಿದೆ. ಈ ಎಲ್ಲ ವಸ್ತುಗಳನ್ನು ಒಳಗೊಂಡ 1,000 ಉಡುಗೊರೆ ಬಾಕ್ಸ್‌ಗಳನ್ನು ತಲಾ ರೂ. 1,947ರ ದರದಲ್ಲಿ ಮಂಗಳೂರಿನ ಉಳ್ಳಾಲದ ಬಿ.ಕೆ. ಸಪ್ಲೈಯರ್ಸ್ ಸಂಸ್ಥೆಯಿಂದ ಖರೀದಿಸಲಾಗುತ್ತಿದೆ. ಇದಕ್ಕಾಗಿ ರೂ. 19.47 ಲಕ್ಷ ವ್ಯಯಿಸಲು ಕೆಟಿಪಿಪಿ ಕಾಯ್ದೆಯ ಸೆಕ್ಷನ್ 4ಜಿ ಅಡಿಯಲ್ಲಿ ವಿನಾಯ್ತಿ ನೀಡಲಾಗಿದೆ.

ಬಹುಮಾನವಾಗಿ ಕಪ್ ಸಾಸರ್: ಅಧಿವೇಶನದ ಅವಧಿಯಲ್ಲಿ ದಿನದಲ್ಲಿ ಮೊದಲಿಗರಾಗಿ ಸದನ ಪ್ರವೇಶಿಸುವ ಶಾಸಕರಿಗೆ ಬಹುಮಾನದ ರೂಪದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅಧಿಕೃತ ಲಾಂಛನಗಳನ್ನು ಅಚ್ಚು ಹಾಕಿಸಿದ ಕಪ್ ಮತ್ತು ಸಾಸರ್ ನೀಡಲು ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್ ನಿರ್ಧರಿಸಿದ್ದಾರೆ. ವಿಧಾನಸಭೆಯ ಕಳೆದ ಅಧಿವೇಶನದಲ್ಲಿ ಬಹುಮಾನದ ವಿಚಾರ ಪ್ರಕಟಿಸಿದ್ದೆ. ಕೆಲವು ಶಾಸಕರಿಗೆ 15 12 ಹೀಗೆ ಹಲವು ಬಹುಮಾನ ವಿತರಿಸಬೇಕಿದೆ. ರಾಜಭವನದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಲಾಂಛನವನ್ನು ಅಚ್ಚು ಹಾಕಿಸಿರುವ ವಿಶೇಷ ಕಪ್ ಸಾಸರ್‌ಗಳನ್ನು ನೋಡಿದ ಬಳಿಕ ಅದೇ ಮಾದರಿಯ ಬಹುಮಾನ ನೀಡಲು ನಿರ್ಧರಿಸಿದೆ ಎಂದು ಅವರು ತಿಳಿಸಿದರು.

'ಅನ್ನಭಾಗ್ಯ' ಅಕ್ಕಿ ದಂಧೆಕೋರರಿಗೂ ಒಲಿದ ಭಾಗ್ಯ!

ಮನೆ ಮನೆಗೆ ತೆರಳಿ ಅಕ್ಕಿ ಸಂಗ್ರಹಿಸುವ ಜಾಲ ಕಾರ್ಯಪ್ರವೃತ್ತ





ಮೈಸೂರು, ನ.13– ಮೈಸೂರಲ್ಲಿ ವ್ಯಾಪಕವಾಗಿರುವ 'ಅನ್ನಭಾಗ್ಯ' ಅಕ್ಕಿ ದಂಧೆಯ ಹಿಂದೆ ಪ್ರಭಾವಿಗಳ ಕೈವಾಡವಿದೆ ಎಂಬ ಗಂಭೀರ ಆರೋಪ ಕೇಳಿಬರುತ್ತಿದೆ.

ಸಾರ್ವಜನಿಕರಿಂದ ಕಡಿಮೆ ಬೆಲೆಗೆ ಖರೀದಿಸಿ, ಅದಕ್ಕೆ ಪಾಲಿಶ್ ಮಾಡಿ ವಿವಿಧ ಕಂಪನಿ ಬ್ರ್ಯಾಂಡ್ ಚೀಲದಲ್ಲಿ ತುಂಬಿ ಮಾರುಕಟ್ಟೆಯಲ್ಲಿ ಭಾರಿ ಹಣ ಮಾಡುತ್ತಿದ್ದಾರೆ ಎಂದು ಆರೋಪಿಸಲಾಗುತ್ತಿದೆ.

ಮೈಸೂರಿನ ಯರಗನಹಳ್ಳಿ ವಾರ್ಡ್ (ಸಂಖ್ಯೆ–36)ನಲ್ಲಿ ಸಾರ್ವಜನಿಕರ ಮನೆ ಮನೆಗೆ ತೆರಳಿ ಅನ್ನಭಾಗ್ಯ ಅಕ್ಕಿ ಖರೀದಿಸುತ್ತಿದ್ದವರನ್ನು ಹಿಡಿದು ತರಾಟೆ ತೆಗೆದುಕೊಂಡ ಇಲ್ಲಿನ ನಿವಾಸಿಗಳು, ಅಕ್ಕಿ ದಂಧೆಯ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ.

ಪಡಿತರ ಕೇಂದ್ರಗಳಲ್ಲಿ ಬಡವರಿಗೆ ನೀಡುತ್ತಿರುವ ಅಕ್ಕಿ ಮತ್ತು ರಾಗಿಯನ್ನು ಖರೀದಿಸುವ ಜಾಲ ಮೈಸೂರಿನೆಲ್ಲೆಡೆ ವ್ಯಾಪಿಸಿದೆ. ಪಡಿತರದಾರರಿಂದ ಕೆಜಿಗೆ 15–16 ರೂ.ರಂತೆ ಖರೀದಿ ಮಾಡಿ, ಅದನ್ನು ಎರಡನೇ ಹಂತದ ವ್ಯಾಪಾರಿಗೆ ಕೆಜಿಗೆ 18 ರೂ.ನಂತೆ ಮಾರಾಟ ಮಾಡುತ್ತಾರೆ. ಆತ ಮೈಸೂರು ಹೊರವಲಯದ ಗೋಡೌನ್‌ನಲ್ಲಿ ದಾಸ್ತಾನು ಮಾಡುತ್ತಾರೆ. ಬಳಿಕ ಹಂತ ಹಂತವಾಗಿ ಆ ಅಕ್ಕಿಯನ್ನು ಪಾಲಿಶ್ ಮಾಡಿಸಿ, ಬೇರೆ ಬೇರೆ ಕಂಪನಿ ಬ್ರ್ಯಾಂಡ್ ಚೀಲಗಳಿಗೆ ತುಂಬಿ ಮೋಸದ ಮಾರ್ಗದಲ್ಲಿ ಮಾರುಕಟ್ಟೆಗೆ ಬಿಟ್ಟು ಕೆಜಿಗೆ 50–60 ರೂಗೆ ಮಾರಾಟ ಮಾಡುತ್ತಾರೆ. ಹೀಗೆ ವ್ಯವಸ್ಥಿತ ಜಾಲ ರೂಪಿಸಿಕೊಂಡು ಸರ್ಕಾರ ಹಾಗೂ ಜನರನ್ನು ವಂಚಿಸಲಾಗುತ್ತಿದೆ. ಇದೇ ರೀತಿಯಲ್ಲಿ ರಾಗಿಯನ್ನೂ ಕಡಿಮೆ ಬೆಲೆಗೆ ಖರೀದಿಸಿ ನಂತರ ಕ್ಲೀನ್ ಮಾಡಿಸಿ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗೆ ಮಾರಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಮೈಸೂರಿನೆಲ್ಲೆಡೆ ಈ ಜಾಲ ವ್ಯಾಪಿಸಿದೆ. ಪ್ರತಿ ತಿಂಗಳು 1ರಿಂದ 10ನೇ ತಾರೀಖಿನವರೆಗೆ ಪಡಿತರ ವಿತರಿಸಲಾಗುತ್ತದೆ. ಈ ಸಂದರ್ಭದಲ್ಲಿ ಸ್ಕೂಟರ್ ಹಾಗೂ ಆಟೋದಲ್ಲಿ ಖರೀದಿಗೆ ಬರುತ್ತಾರೆ. ಮೊದಲು ಒಬ್ಬ ಅಕ್ಕಿ–ರಾಗಿ ಎಂದು ಕೂಗಿಕೊಂಡು ಹೋಗುತ್ತಾನೆ. ಅವನ ಹಿಂದೆ ವಾಹನದಲ್ಲಿ ಇಬ್ಬರು ಬಂದು ಧಾನ್ಯ ಖರೀದಿಸಿಕೊಂಡು ಹೋಗುತ್ತಾರೆ. ನಿತ್ಯ ಕ್ವಿಂಟಾಲ್ ಗಟ್ಟಲೆ ಖರೀದಿಸುತ್ತಾರೆ. ಒಂದು ತಿಂಗಳಲ್ಲಿ 10ಕ್ಕೂ ಹೆಚ್ಚು ವಾಹನಗಳನ್ನು ಹಿಡಿದು, ಪೊಲೀಸರಿಗೊಪ್ಪಿಸಿದ್ದೇನೆ. ಕೆಲ ದಿನಗಳ ಬಳಿಕ ಆ ವಾಹನಗಳನ್ನು ಬಿಡಿಸಿಕೊಂಡು ಹೋಗುತ್ತಾರೆ. ಇತ್ತ ಆಹಾರ ಇಲಾಖೆಯವರಿಗೆ ತಿಳಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಹೀಗೆ ಅಕ್ಕಿ ಖರೀದಿಸುವವರ ವಿಚಾರಿಸಿದರೆ ಸಾಕು ಗುಂಪೊಂದು ಬೆದರಿಕೆ ಹಾಕುತ್ತದೆ. ಇದರ ಹಿಂದೆ ಪ್ರಭಾವಿಗಳಿದ್ದಾರೆ ಎಂದು ಸಂಶಯ ವ್ಯಕ್ತಪಡಿಸಿದ್ದಾರೆ.

ಸರ್ಕಾರ ಬಡವರ ಹಸಿವು ನೀಗಲಿ ಎಂಬ ಉದ್ದೇಶದಿಂದ ನೀಡುವ ಧಾನ್ಯವನ್ನು ಇಂತಹವರಿಗೆ ಮಾರಾಟ ಮಾಡಬೇಡಿ. 15–16 ರೂ.ಗೆ ಖರೀದಿಸಿ, ಕೆಲ ದಿನಗಳ ಬಳಿಕ ಅದೇ ಅಕ್ಕಿಯನ್ನು 50–60 ರೂ.ಗೆ ನಿಮಗೇ ಮಾರಾಟ ಮಾಡುತ್ತಾರೆ. ನಿಮಗೆ ಸಾಕಾಗಿದ್ದರೆ ಅಗತ್ಯವಿದ್ದವರಿಗೆ ನೀಡಿ. ದಯ ಮಾಡಿ ಈ ವಂಚಕರ ಜಾಲವನ್ನು ಬೆಳೆಸಿ, ಹೆಮ್ಮರವಾಗಿಸಬೇಡಿ. ಈ ಬಗ್ಗೆ ಜಿಲ್ಲಾಡಳಿತ ಹಾಗೂ ಸರ್ಕಾರ ಕೂಡಲೇ ಶಿಸ್ತು ಕ್ರಮ ಕೈಗೊಳ್ಳುವುದು ಅನಿವಾರ್ಯವಾಗಿದೆ ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಬಿ.ವೈ. ವಿಜಯೇಂದ್ರ ಪದಗ್ರಹಣ ಕಾರ್ಯಕ್ರಮಕ್ಕೆ ನಾನು ಹೋಗಲ್ಲ: ಸಿಟಿ ರವಿ



ಚಿಕ್ಕಮಗಳೂರು, ನ.13– ಚುನಾವಣೆ ಮುಗಿದು ಕಾಂಗ್ರೆಸ್ ಸರ್ಕಾರ ರಚನೆಯಾಗಿ ಐದಾರು ತಿಂಗಳ ನಂತರ ಕರ್ನಾಟಕ ಬಿಜೆಪಿ ಘಟಕಕ್ಕೆ ನೂತನ ಅಧ್ಯಕ್ಷರನ್ನು ನೇಮಿಸಲಾಗಿದೆ. ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರ ಪುತ್ರ ಬಿವೈ ವಿಜಯೇಂದ್ರ ಅವರಿಗೆ ಅಧ್ಯಕ್ಷ ಸ್ಥಾನ ಒಲಿದಿರುವುದು ಆಕಾಂಕ್ಷಿಗಳಾದ ಸೋಮಣ್ಣ, ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ ಕೆಲವರಿಗೆ ಅಸಮಾಧಾನ ಉಂಟಾಗಿದೆ. ಅಧ್ಯಕ್ಷ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದ ಸಿಟಿ ರವಿ ಮುನಿಸಿಕೊಂಡಿದ್ದಾರೆ.

ಈ ನಡುವೆ, ಸೋಮಣ್ಣ, ಸಿಟಿ ರವಿ, ಯತ್ನಾಳ್ ಸಹಿತ ಪಕ್ಷದ ಎಲ್ಲಾ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ವಿಜಯೇಂದ್ರ ಅವರು ಯತ್ನಿಸುತ್ತಿದ್ದಾರೆ. ನವೆಂಬರ್ 15 ರಂದು ನಡೆಯುವ ವಿಜಯೇಂದ್ರ ಪದಗ್ರಹಣ ಕಾರ್ಯಕ್ರಮಕ್ಕೆ ಸ್ಥಾನದ ಆಕಾಂಕ್ಷಿಗಳು, ಅದರಲ್ಲೂ ಇದ್ದ ಎಲ್ಲಾ ಅಧಿಕಾರಗಳು ಕೈತಪ್ಪಿ ಖಾಲಿ ಯಾಗಿರುವ ಸಿಟಿ ರವಿ ಅವರು ಆಗಮಿಸುತ್ತಾರೋ ಇಲ್ಲವೋ ಎನ್ನುವ ಪ್ರಶ್ನೆ ಎಲ್ಲರನ್ನೂ ಕಾಡುತ್ತಿತ್ತು ಈ ಬಗ್ಗೆ ಸ್ವತಃ ಸಿಟಿ ರವಿ ಅವರೇ ಮಾತನಾಡಿದ್ದು, ಪ್ರಮಾಣವಚನ ಕಾರ್ಯಕ್ರಮಕ್ಕೆ ನಾನು ಹೋಗಲ್ಲ ಎಂದಿದ್ದಾರೆ. ಚಿಕ್ಕಮಗಳೂರಿನಲ್ಲಿ ಮಾತನಾಡಿದ ಅವರು, ವಿಜಯೇಂದ್ರ ಅವರು ನನ್ನ ಜೊತೆ ಎರಡು ಬಾರಿ ದೂರವಾಣಿ ಕರೆ ಮಾಡಿ ಮಾತನಾಡಿದ್ದಾರೆ. ಆದರೆ, ನ.15ರ ರಾತ್ರಿವರೆಗೂ ಮಧ್ಯಪ್ರದೇಶದಲ್ಲಿ ಚುನಾವಣಾ ಪ್ರಚಾರ ಇದೆ. ವಿಜಯೇಂದ್ರ ಪದಗ್ರಹಣ ಕಾರ್ಯಕ್ರಮಕ್ಕೆ ಹೋಗಲ್ಲ ಈ ಬಗ್ಗೆ ಅವರಿಗೆ ತಿಳಿಸಿದ್ದೇನೆ ಎಂದು ಸ್ಪಷ್ಟಪಡಿಸಿದ್ದಾರೆ.

ರಾಜಕೀಯ ಬೇಡ ಅಂದ್ರೆ ಮನೆಯಲ್ಲಿರ್ತೀನಿ: ಅಧ್ಯಕ್ಷ ಸ್ಥಾನ ಅನ್ನೋದು ನ್ಯಾಯಪೀಠವಿದ್ದಂತೆ. ನ್ಯಾಯಾಧೀಶ ಬದಲಾಗಬಹುದು. ನ್ಯಾಯಪೀಠವಲ್ಲ. ಆ ಪೀಠಕ್ಕೆ ಯಾವ ಬೆಲೆ ಕೊಡಬೇಕೋ ಆ ಬೆಲೆಯನ್ನು ನಾನು ಕೊಡುತ್ತೇನೆ ಎಂದು ರವಿ ಹೇಳಿದ್ದಾರೆ.

ಮೋದಿಯವರು ಮತ್ತೊಮ್ಮೆ ಪ್ರಧಾನಿಯಾಗಬೇಕು ಅನ್ನೋದು ನಮ್ಮ ಗುರಿ. ದೇಶದಲ್ಲಿ ಮತ್ತೊಮ್ಮೆ ಮೋದಿಯವರ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಬೇಕು. ಆ ಗುರಿಯನ್ನು ಈಡೇರಿಸಲು ಎಲ್ಲ ರೀತಿಯ ಕೆಲಸ ಮಾಡಿ, ಸಹಕಾರ ನೀಡುತ್ತೇವೆ. ನಾವು ಇದುವರೆಗೂ ಪಕ್ಷದ ಲಕ್ಷ್ಮಣರೇಖೆ ದಾಟಿಲ್ಲ. 20 ವರ್ಷಗಳ ಕಾಲ ಶಾಸಕರಾಗಿ, 35 ವರ್ಷಗಳಿಂದ ಪಕ್ಷದ ಕಾರ್ಯಕರ್ತನಾಗಿ ಪಕ್ಷದ ಜವಾಬ್ದಾರಿ ನಿಭಾಯಿಸಿದ್ದೇನೆ. ನಾನು ಎಂದೂ ಪಕ್ಷದ ಲಕ್ಷ್ಮಣ ರೇಖೆ ದಾಟಿಲ್ಲ. ಒಂದು ವೇಳೆ ಜಗಳ ಮಾಡಿದ್ದರೂ ನಮ್ಮ ಮನೆಯ ಒಳಗೇ ಜಗಳ ಆಡಿದ್ದೇವೆ. ಪಕ್ಕದ ಮನೆಯಲ್ಲಿ ಕೂತು ನಮ್ಮ ಮನೆಯ ಸಮಸ್ಯೆಯನ್ನ ಬಗೆಹರಿಸಿ ಎಂದು ಕೇಳಿಲ್ಲ ಎಂದು ಹೇಳಿದ್ದಾರೆ.

ಪಕ್ಷ ನಮಗೆ ಯಾವುದೇ ರೀತಿಯ ಜವಾಬ್ದಾರಿ ಕೊಡದಿದ್ದರೂ ಬಿಜೆಪಿಗೆ ಮತ ನೀಡಿ ಅಂತ ನನ್ನ ಶಕ್ತಿ ಮೀರಿ ಮತಯಾಚನೆ ಮಾಡುತ್ತೇನೆ. ನನಗಿರುವುದು ಒಂದೇ ಪಾರ್ಟಿ ಅದು ಬಿಜೆಪಿ. ನನಗೆ ರಾಜಕೀಯ ಬೇಡ ಅಂದ್ರೆ ರಾಜಕೀಯ ಬಿಟ್ಟು ಮನೆಯಲ್ಲಿರುತ್ತೀನಿ ವಿನಃ ಬಿಜೆಪಿ ಬಿಟ್ಟು ಬೇರೆ ಪಕ್ಷಕ್ಕೆ ಹೋಗಿ ರಾಜಕಾರಣ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಮೈಸೂರು ಸಿಲ್ಕ್‌ಗೆ ಡಿಮ್ಯಾಂಡೋ ಡಿಮ್ಯಾಂಡು!

ಒಂದೇ ದಿನ 2.50 ಕೋಟಿ ಮೌಲ್ಯದ ರೇಷ್ಮೆ ಸೀರೆ ಮಾರಾಟ ದಾಖಲೆ



ಮೈಸೂರು, ನ.13(ಎಸ್‌ಬಿಡಿ)– ವಸ್ತ್ರ ಉದ್ಯಮದಲ್ಲಿ ಪೈಪೋಟಿ ನಡುವೆಯೂ 'ಮೈಸೂರು ರೇಷ್ಮೆ ಸೀರೆ' ಬೇಡಿಕೆ ಕಾಯ್ದುಕೊಂಡಿದ್ದು, ದೀಪಾವಳಿ ಹಿನ್ನೆಲೆಯಲ್ಲಿ ಮಾರಾಟ ಮತ್ತಷ್ಟು ಜೋರಾಗಿದೆ.

ಮೈಸೂರು ಸಿಲ್ಕ್ ಸ್ಯಾರಿ ಎಂದರೆ ಮಹಿಳೆಯರಿಗೆ ಅಚ್ಚುಮೆಚ್ಚು. ದೀಪಾವಳಿ ಹಬ್ಬಕ್ಕೆಂದು ರೇಷ್ಮೆ ಸೀರೆ ಕೊಳ್ಳುವವರ ಸಂಖ್ಯೆಯೂ ಜಾಸ್ತಿ ಇದೆ. ಜೊತೆಗೆ ಹಬ್ಬದ ಹಿನ್ನೆಲೆಯಲ್ಲಿ ಬೆಲೆಯಲ್ಲೂ ರಿಯಾಯಿತಿ ಇರುವುದರಿಂದ ಒಂದರ ಜೊತೆಗೆ ಮತ್ತೊಂದನ್ನು ಖರೀದಿಸುವುದುಂಟು. ಅಲ್ಲದೆ ಕಾರ್ತಿಕ ಮಾಸದಲ್ಲಿ ವಿವಾಹ ಇನ್ನಿತರ ಶುಭ ಸಮಾರಂಭಗಳು ನಡೆಯುವುದರಿಂದ ಮೈಸೂರು ರೇಷ್ಮೆ ಸೀರೆ ಬೇಡಿಕೆಯೂ ಹೆಚ್ಚಾಗಿದೆ. ಕಳೆದ ಶನಿವಾರ ಒಂದೇ ದಿನಕ್ಕೆ ಸುಮಾರು 2.50 ಕೋಟಿ ರೂ. ಮೌಲ್ಯದ ರೇಷ್ಮೆ ಸೀರೆಗಳ ಮಾರಾಟವಾಗಿದೆ ಎಂದು ತಿಳಿದುಬಂದಿದೆ.

ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ(ಕೆಎಸ್‌ಐಸಿ)ದ ಒಟ್ಟು 14 ಮಳಿಗೆಗಳಲ್ಲೂ ಭರ್ಜರಿ ವ್ಯಾಪಾರ ನಡೆದಿದೆ. ಮೈಸೂರಿನಲ್ಲಿ ಐದು, ಬೆಂಗಳೂರಿನಲ್ಲಿ ಆರು, ಚನ್ನಪಟ್ಟಣ, ದಾವಣಗೆರೆ ಹಾಗೂ ಹೈದರಾಬಾದ್‌ನಲ್ಲಿ ತಲಾ ಒಂದು ಮಳಿಗೆಗಳಿದ್ದು, ಎಲ್ಲಾ ಕಡೆ ಹಬ್ಬದ ರಿಯಾಯಿತಿ ಮಾರಾಟವಿದೆ. 25 ಸಾವಿರ ರೂ.ಗಿಂತ ಕಡಿಮೆ ಬೆಲೆಯ ಸೀರೆಗಳಿಗೆ ಶೇ.10, ಅದಕ್ಕಿಂತ ಹೆಚ್ಚು ಬೆಲೆಯ ಸೀರೆಗಳಿಗೆ ಶೇ.20 ರಿಯಾಯಿತಿ ನೀಡಿದ್ದು, ನ.18ರವರೆಗೆ ಮಾತ್ರ ಇದು ಅನ್ವಯವಾಗಲಿದೆ. ಬೆಲೆಯಲ್ಲಿ ಭಾರಿ ರಿಯಾಯಿತಿ ನೀಡಿರುವುದರಿಂದ ಮೂರ್ನಾಲ್ಕು ಪಟ್ಟು ಮಾರಾಟ ಜಾಸ್ತಿಯಾಗಿದೆ.

ಮೈಸೂರ ಉತ್ಪನ್ನ: ಕೆಎಸ್‌ಐಸಿ ಪ್ರಧಾನ ಕಚೇರಿ ಬೆಂಗಳೂರಿನಲ್ಲಿದ್ದರೂ ರೇಷ್ಮೆ ನೇಯ್ಗೆ ಕಾರ್ಖಾನೆ ಇರುವುದು ಮೈಸೂರಿನಲ್ಲಿ. ಜಿಲ್ಲೆಯ ತಿ.ನರಸೀಪುರದಲ್ಲಿ ರೇಷ್ಮೆ ನೂಲು ತೆಗೆಯುವ ಘಟಕವಿದೆ. ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿರುವ ಕಾರ್ಖಾನೆಯಲ್ಲಿ ಜರಿ ಕ್ರೇಪ್ ಸೀರೆಗಳು, ಜರಿ ಕ್ರೇಪ್ ಪ್ರಿಂಟೆಡ್ ಹಾಗೂ ಕ್ರೇಪ್ ಪ್ರಿಂಟೆಡ್ ಸೀರೆಗಳು, ಸಿದ್ಧ ಉಡುಪು, ಸ್ಕಾರ್ಫ್ ಮತ್ತು ಟೈಗಳನ್ನು ತಯಾರಿಸಲಾಗುತ್ತದೆ. ಇಲ್ಲಿ ಪರಿಶುದ್ಧ ರೇಷ್ಮೆ ಹಾಗೂ ಬಂಗಾರ ವರ್ಣದ ಜರಿಗಳಿಂದ ತಯಾರಾಗುವ ಮೈಸೂರು ರೇಷ್ಮೆ ಸೀರೆಗೆ ಎಲ್ಲಿಲ್ಲದ ಬೇಡಿಕೆ ಇದೆ. ಪ್ರತಿಯೊಂದು ಸೀರೆಯ ಬಾರ್ಡರ್ ಬಳಿ ಕೆಎಸ್‌ಐಸಿ ಕೋಡ್ ನಂಬರ್ ಹಾಕುವುದರಿಂದ ಸುಲಭವಾಗಿ ಮೈಸೂರು ಸಿಲ್ಕ್ ಸೀರೆಯನ್ನು ಗುರುತಿಸಬಹುದು. ಈ ಸೀರೆಗಳ ತೂಕ ಕಡಿಮೆ. ಚಿಕ್ಕ ಜರಿ, ದೊಡ್ಡ ಜರಿ, ಚಿಕ್ಕ ಬಾರ್ಡರ್, ಅಗಲ ಬಾರ್ಡರ್, ಡಬಲ್ ಬಾರ್ಡರ್‌ನ ವೈವಿಧ್ಯಮಯ ಸೀರೆಗಳು ಲಭ್ಯವಿದ್ದು, 16 ಸಾವಿರದಿಂದ 2 ಲಕ್ಷದವರೆಗೂ ಬೆಲೆ ಇದೆ. ಮಹಿಳೆಯರು ಮೈಸೂರು ರೇಷ್ಮೆ ಸೀರೆಗೆ ಮಾರು ಹೋಗುವುದರಿಂದ ಇಂದಿಗೂ ಭಾರಿ ಬೇಡಿಕೆ ಇದೆ.

ಇಬ್ಬರು ಜಿಲ್ಲಾ ನೋಂದಣಾಧಿಕಾರಿ, 7 ಉಪ ನೋಂದಣಾಧಿಕಾರಿಗಳ ವರ್ಗಾವಣೆ

ಮೈಸೂರು, ನ.13(ಎಸ್‌ಪಿಎನ್)– ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಹಾಗೂ ಹಾಸನ ಜಿಲ್ಲೆ ಸೇರಿದಂತೆ ಇತರೆ ಜಿಲ್ಲೆಗಳ 2 ಜಿಲ್ಲಾ ನೋಂದಣಾಧಿಕಾರಿಗಳು ಮತ್ತು 7 ಉಪ ನೋಂದಣಾಧಿಕಾರಿಗಳ ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶಿಸಿದೆ.

ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಮಂಡ್ಯ ಜಿಲ್ಲಾ ನೋಂದಣಾಧಿಕಾರಿ ವಿಜಯಲಕ್ಷ್ಮೀ ಆರ್.ಇನಾಂದಾರ್ ಅವರನ್ನು ಮೈಸೂರು ಜಿಲ್ಲಾ ನೋಂದಣಾಧಿಕಾರಿಯಾಗಿದ್ದ ಮೋಹನ್ ಕುಮಾರ್ ಪಂಡಿತ್ ಅವರ ಸ್ಥಾನಕ್ಕೆ ವರ್ಗಾಯಿಸಿದೆ. ತಿ.ನರಸೀಪುರ ತಾಲೂಕಿನ ಹಿರಿಯ ಉಪ ನೋಂದಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಎಂ.ವಿವೇಕ್ ಅವರನ್ನು ನಂಜನಗೂಡಿನ ಉಪ ನೋಂದಣಾಧಿಕಾರಿ ಶಿವಶಂಕರ್ ಮೂರ್ತಿ ಅವರ ಜಾಗಕ್ಕೆ ವರ್ಗಾಯಿಸಿದೆ.

ಸ್ಥಳ ನಿರೀಕ್ಷೆಯಲ್ಲಿದ್ದ ಉಪ ನೋಂದಣಾಧಿಕಾರಿ ವೆಂಕಟೇಶ್ ಅವರನ್ನು ಪಾಂಡವಪುರ ಉಪ ನೋಂದಣಾಧಿಕಾರಿಯಾಗಿ (ಖಾಲಿ ಜಾಗಕ್ಕೆ) ನೇಮಿಸಿದೆ. ತುಮಕೂರು ಉಪ ನೋಂದಣಾಧಿಕಾರಿ (ನಿಯಮ 32) ಯಾಗಿದ್ದ ಧನಲಕ್ಷ್ಮೀ ಅವರನ್ನು ಹಾಸನ ಜಿಲ್ಲೆ ಬಾಣಾವಾರದ ಉಪನೋಂದಣಾಧಿಕಾರಿಯಾಗಿ ವರ್ಗಾಯಿಸಿ ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ ಹಾಗೂ ನೋಂದಣಿ ಮತ್ತು ಮುದ್ರಾಂಕ)ಯ ಜಂಟಿ ಕಾರ್ಯದರ್ಶಿ ಟಿ.ಸಿ.ಕಾಂತರಾಜ್ ನ.10ರಂದು ಆದೇಶಿಸಿದ್ದಾರೆ. ಅಲ್ಲದೆ, ವರ್ಗಾವಣೆ ಆದೇಶವನ್ನು ಕೂಡಲೇ ಪಾಲಿಸತಕ್ಕದ್ದು, ತಪ್ಪಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಆದೇಶ ತಿಳಿಸಿದ್ದಾರೆ.

ನ.16ಕ್ಕೆ 'ರಬ್ಡಿ' ವಿಶೇಷ ಪ್ರದರ್ಶನ

ಮೈಸೂರು, ನ.13– 'ರಂಗ ವರ್ತುಲ' ರಂಗತಂಡದ 'ರಬ್ಡಿ' ನಾಟಕ ಯಶಸ್ವಿ ನೂರು ಪ್ರದರ್ಶನ ಪೂರೈಸಿರುವ ಹಿನ್ನೆಲೆಯಲ್ಲಿ ಬೆಂಗಳೂರಿನ ರಂಗಶಂಕರದಲ್ಲಿ ನ.16ರಂದು ಸಂಜೆ 7.30ಕ್ಕೆ ವಿಶೇಷ ಪ್ರದರ್ಶನ ಆಯೋಜಿಸಲಾಗಿದೆ.

ಇದು ರಾಜ್ಯಾದ್ಯಂತ 75ಕ್ಕೂ ಹೆಚ್ಚು ಪ್ರಯೋಗಗಳು ಹಾಗೂ ಅಮೇರಿಕಾದಾದ್ಯಂತ 20 ಹೌಸ್‌ಫುಲ್ ಪ್ರದರ್ಶನಗಳನ್ನು ಕಂಡ ಮೊದಲ ಕನ್ನಡ ನಾಟಕ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಹದಿಮೂರು ವರ್ಷಗಳಿಂದ ಕನ್ನಡ ರಂಗಭೂಮಿಯಲ್ಲಿ ನಿರಂತರವಾಗಿ ತೊಡಗಿಸಿಕೊಂಡು, 15 ನಾಟಕಗಳ 500ಕ್ಕೂ ಹೆಚ್ಚು ರಂಗಪ್ರಯೋಗಗಳನ್ನು ಪ್ರಸ್ತುತಪಡಿಸುವ ಮೂಲಕ 'ರಂಗ ವರ್ತುಲ' ತಂಡ ರಂಗಯಾನ ಮುಂದುವರೆಸಿದೆ.



ಸ್ವಿಮ್ಮಿಂಗ್ ಫೆಡರೇಷನ್ ಆಫ್ ಇಂಡಿಯಾ, ಕರ್ನಾಟಕ ಒಲಂಪಿಕ್ ಅಸೋಸಿಯೇಷನ್ ಮತ್ತು ಸ್ಪೋರ್ಟ್ಸ್ ಅಥಾರಿಟಿ ಆಫ್ ಕರ್ನಾಟಕ ಇದರ ಅಂಗಸಂಸ್ಥೆಯಾದ ಕರ್ನಾಟಕ ಸ್ವಿಮ್ಮಿಂಗ್ ಅಸೋಸಿಯೇಷನ್ ವತಿಯಿಂದ ಇತ್ತೀಚೆಗೆ ಬೆಂಗಳೂರಿನ ವಿಜಯನಗರ ಈಜುಕೊಳದಲ್ಲಿ ನಡೆದ ಕರ್ನಾಟಕ ರಾಜ್ಯ ಮಟ್ಟದ ಈಜು ಸ್ಪರ್ಧೆಯಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಎಸ್. ಅಚ್ಯುತ ಅವರು ಹಿರಿಯರ ತುಡದ 40X 50 ಮೀ. ಮಿಡ್ಲೇ ರಿಲೇಯಲ್ಲಿ ಚಿನ್ನದ ಪದಕ, 200 ಮೀ. ಮಿಡ್ಲೇ ಮತ್ತು 4 X 50 ಮೀ. ಫ್ರೀ ಸ್ಟೈಲ್ ರಿಲೇಯಲ್ಲಿ ಎರಡು ಬೆಳ್ಳಿ ಪದಕಗಳನ್ನು ಪಡೆದುಕೊಂಡಿದ್ದಾರೆ. ಈ ವೇಳೆ ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಎನ್. ಚಂದ್ರಶೇಖರ್, ಆಡಳಿತ ಮಂಡಳಿ ಸದಸ್ಯರಾದ ದಿನೇಶ್ ಜೋಶಿ, ಡಾ. ಉಮೇಶ್, ಮೋಹನ್‌ಮೂರ್ತಿ, ನರಸಿಂಹ, ನಿಕಟಪೂರ್ವ ಅಧ್ಯಕ್ಷ ಪಾರ್ಥಸಾರಥಿ, ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಯ, ನಾಗೇಶ್ ಹನಸೋಗೆ, ಬಾಬು ಮತ್ತಿತರರನ್ನು ಕಾಣಬಹುದು.





ದೀಪಾವಳಿ ಹಬ್ಬದ ಅಮಾವಾಸ್ಯೆ ದಿನವಾದ ಸೋಮವಾರ ರಾತ್ರಿ ಮೈಸೂರಿನ ಕೆಜಿ ಕೊಪ್ಪಲು, ಟಿ.ಕೆ.ಬಡಾವಣೆ ಸೇರಿದಂತೆ ಹಲವಾರು ಬಡಾವಣೆಗಳಲ್ಲಿ ದೇವಸ್ಥಾನ, ಗರಡಿ, ರಾಮಮಂದಿರಗಳ ಎದುರು ಹಾಗೂ ಬಡಾವಣೆಗಳ ಪ್ರಮುಖ ವೃತ್ತಗಳಲ್ಲಿ ಕೊಂಡ ಹಾಕುವ ಮೂಲಕ ಹಿಂದಿನಿಂದ ನಡೆದು ಬಂದಿರುವ ಸಂಪ್ರದಾಯವನ್ನು ಆಚರಿಸಲಾಯಿತು.

ಅರ್ಜಿ ಆಹ್ವಾನ

ಮೈಸೂರು, ನ.13– 2024–25ನೇ ಶೈಕ್ಷಣಿಕ ಸಾಲಿನಲ್ಲಿ ಜಿಲ್ಲೆಯಲ್ಲಿ ಖಾಸಗಿ ಅನುದಾನ ರಹಿತ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಇಚ್ಛಿಸುವ ಅರ್ಹ ಖಾಸಗಿ ಶಿಕ್ಷಣ ಸಂಸ್ಥೆಗಳಿಂದ, ಟ್ರಸ್ಟ್‌ಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಇಲಾಖೆಯ ವೆಬ್‌ಸೈಟ್ www.pue.kar.nic.in ಮೂಲಕ ನಿಗದಿತ ಅರ್ಜಿ ನಮೂನೆಯನ್ನು, ನವೆಂಬರ್ 14 ರಿಂದ 2024ರ ಮಾರ್ಚ್ 31ರವರೆಗೆ ಸಲ್ಲಿಸಬಹುದಾಗಿದೆ.

9 ಮೈತೇಯಿ ಉಗ್ರ ಸಂಘಟನೆ, ಅವುಗಳ ಸಹ ಸಂಘಟನೆ ನಿಷೇಧಿಸಿದ ಕೇಂದ್ರ



ನವದೆಹಲಿ: ಜನಾಂಗೀಯ ಹಿಂಸಾಚಾರದಿಂದ ತತ್ತರಿಸಿರುವ ಮಣಿಪುರದಲ್ಲಿ ರಾಷ್ಟ್ರವಿರೋಧಿ ಕೃತ್ಯಗಳಲ್ಲಿ ತೊಡಗಿರುವ ಮತ್ತು ಭದ್ರತಾ ಪಡೆಗಳ ಮೇಲೆ ಮಾರಣಾಂತಿಕ ದಾಳಿ ನಡೆಸುತ್ತಿರುವ ಒಂಬತ್ತು ಮೈತೇಯಿ ಉಗ್ರಗಾಮಿ ಸಂಘಟನೆಗಳನ್ನು ಮತ್ತು ಅವುಗಳ ಸಹ ಸಂಘಟನೆಗಳನ್ನು ಕೇಂದ್ರ ಸರ್ಕಾರ ಸೋಮವಾರ ನಿಷೇಧಿಸಿದೆ.

ಈ ಸಂಬಂಧ ಕೇಂದ್ರ ಗೃಹ ಸಚಿವಾಲಯ ಹೊರಡಿಸಿದ ಅಧಿಸೂಚನೆಯ ಪ್ರಕಾರ, ಪೀಪಲ್ಸ್ ಲಿಬರೇಶನ್ ಆರ್ಮಿ ಸಾಮಾನ್ಯವಾಗಿ PLA ಎಂದು ಕರೆಯಲಾಗುತ್ತದೆ ಮತ್ತು ಅದರ ರಾಜಕೀಯ ವಿಭಾಗವಾದ ಕ್ರಾಂತಿಕಾರಿ ಪೀಪಲ್ಸ್ ಫ್ರಂಟ್, ಯುನೈಟೆಡ್ ನ್ಯಾಷನಲ್ ಲಿಬರೇಶನ್ ಫ್ರಂಟ್ ಮತ್ತು ಅದರ ಸಶಸ್ತ್ರ ವಿಭಾಗ ಮಣಿಪುರ ಪೀಪಲ್ಸ್ ಆರ್ಮಿಯನ್ನು ಐದು ವರ್ಷಗಳ ಕಾಲ ನಿಷೇಧಿಸಲಾಗಿದೆ.

ಪೀಪಲ್ಸ್ ರೆವಲ್ಯೂಷನರಿ ಪಾರ್ಟಿ ಆಫ್ ಕಂಗ್ಲೀಪಾಕ್ ಮತ್ತು ಅದರ ಸಶಸ್ತ್ರ ವಿಭಾಗ ರೆಡ್ ಆರ್ಮಿ, ಕಂಗ್ಲೇಪಕ್ ಕಮ್ಯುನಿಸ್ಟ್ ಪಾರ್ಟಿ(ಏಅಕ) ಮತ್ತು ಅದರ ಸಶಸ್ತ್ರ ವಿಭಾಗ(ಕೆಂಪು ಸೈನ್ಯ ಎಂದೂ ಕರೆಯುತ್ತಾರೆ), ಕಂಗ್ಲೇಯೋಲ್ ಕನ್ಬಾಲುಪ್, ಸಮನ್ವಯ ಸಮಿತಿ ಮತ್ತು ಅಲಯನ್ಸ್ ಫಾರ್ ಸೋಷಿಯಲಿಸ್ಟ್ ಯೂನಿಟಿ ಕಂಗ್ಲೀಪಾಕ್ ಅನ್ನು ಸಹ ನಿಷೇಧಿಸಲಾಗಿದೆ.

ಕೇಂದ್ರ ಗೃಹ ಸಚಿವಾಲಯ, PLA, UNLF, PREPAK, KCP, ಮತ್ತು KYKL ಅನ್ನು ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯಿದೆ, 1967 (1967 ರ 37) ಅಡಿಯಲ್ಲಿ ಐದು ವರ್ಷಗಳ ಕಾಲ ನಿಷೇಧಿಸಿದೆ.

ಸಶಸ್ತ್ರ ಹೋರಾಟದ ಮೂಲಕ ಮಣಿಪುರವನ್ನು ಭಾರತದಿಂದ ಬೇರ್ಪಡಿಸುವ ಮೂಲಕ ಸ್ವತಂತ್ರ ರಾಷ್ಟ್ರವನ್ನು ಸ್ಥಾಪಿಸುವುದು ಮತ್ತು ಅಂತಹ ಪ್ರತ್ಯೇಕತೆಗೆ ಮಣಿಪುರದ ಮೂಲನಿವಾಸಿಗಳನ್ನು ಪ್ರಚೋದಿಸುವುದು ಮೈತೇಯಿ ಉಗ್ರಗಾಮಿ ಸಂಘಟನೆಗಳ ಗುರಿಯಾಗಿಗೆ ಎಂದು ಕೇಂದ್ರ ಗೃಹ ಸಚಿವಾಲಯ ತನ್ನ ಅಧಿಸೂಚನೆಯಲ್ಲಿ ತಿಳಿಸಿದೆ.

ಸಾಗರೆ ಶ್ರೀ ಮಾರಮ್ಮ ಕ್ರಿಕೆಟ್ ಪಂದ್ಯಾವಳಿ



ಮೈಸೂರು, ನ.13– ಸಾಗರೇ 24 ಮನೆ ತೆಲುಗು ಶೆಟ್ಟರ ಜನಾಂಗದ ಯುವಕ ತಂಡದಿಂದ ಮೈಸೂರಿನ ರೈಲ್ವೆ ಕ್ರೀಡಾಂಗಣದಲ್ಲಿ ಮೂರು ದಿನಗಳ ಸಾಗರೆ ಶ್ರೀ ಮಾರಮ್ಮ ಕ್ರಿಕೆಟ್ ಪಂದ್ಯಾವಳಿ ಏರ್ಪಡಿಸಲಾಗಿತ್ತು.

ಪಂದ್ಯಾವಳಿಯಲ್ಲಿ ಗೆಲುವು ಸಾಧಿಸಿದ ಬೆಂಗಳೂರು ತಂಡ(ಪ್ರಥಮ) ಹಾಗೂ ಸಾಗರೆ ತಂಡ(ದ್ವಿತೀಯ)ಗಳಿಗೆ ಬಹುಮಾನ ಹಾಗೂ ಟ್ರೋಫಿಯನ್ನು ನಿವೃತ್ತ ಇಂಜಿನಿಯರ್ ಎಸ್.ಎ.ಅಂಬರೀಶ್ ನೀಡಿದರು.

ಸಮಾರಂಭದಲ್ಲಿ 24 ಮನೆ ತೆಲುಗು ಶೆಟ್ಟರ ಜನಾಂಗದ ಯಜಮಾನರಾದ ಸುಂದರ ಶೆಟ್ಟಿ, ಅಣ್ಣಯ್ಯಸ್ವಾಮಿ ಶೆಟ್ಟಿ ಮಲ್ಲಿಕಾರ್ಜುನ್ ಮಣಿ ಮುಖಂಡರುಗಳಾದ ಎಸ್ ಪ್ರಕಾಶ್ ಎಸ್ ವಿ ವಸಂತ್ ಕುಮಾರ್ ಶಿವರುದ್ರ ಶೆಟ್ಟಿ ಸೋಮಣ್ಣ ಶೆಟ್ಟಿ, ಗೋವಿಂದ ಶೆಟ್ಟಿ, ನಟರಾಜ್, ರಾಜು, ಕಿರಣ್ ಕುಮಾರ್, ಶೆಟ್ಟಳ್ಳಿ ಪ್ರಕಾಶ್, ಮಂಜುನಾಥ್, ಗುರುಪ್ರಸಾದ್, ಲೋಕೇಶ್, ಜಯಣ್ಣ, ಪವನ್, ಹೇಮಂತ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನಲ್ಲೇ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಅರ್ಚಕರ ರಾಜ್ಯಮಟ್ಟದ ಸಮಾವೇಶಕ್ಕೆ ಮನವಿ



ಮೈಸೂರು, ನ.13–ಮೈಸೂರು ಜಿಲ್ಲೆಯವರೇ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ರಾಜ್ಯಮಟ್ಟದ ಅರ್ಚಕರ ಸಮಾವೇಶವನ್ನು ಮೈಸೂರಿನಲ್ಲಿ ಹಮ್ಮಿಕೊಳ್ಳಬೇಕೆಂದು ಮೈಸೂರು ಜಿಲ್ಲಾ ಅರ್ಚಕರ ಸಂಘದ ಅಧ್ಯಕ್ಷರಾದ ವಿದ್ವಾನ್ ಎಸ್.ಕೃಷ್ಣಮೂರ್ತಿ ಮನವಿ ಮಾಡಿದರು.

ಮೈಸೂರಿನ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಮೈಸೂರು ಜಿಲ್ಲಾ ಮುಜರಾಯಿ ದೇವಾಲಯಗಳ ಅರ್ಚಕರ, ಆಗಮಿಕರ ನೌಕರರ ಸಂಘದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಅರ್ಚಕರು ಹಾಗೂ ನೌಕರರ ಕಾರ್ಯಕಾರಿಣಿ ಸಮಿತಿಯ ಸಭೆಯಲ್ಲಿ ಅವರು ಮಾತನಾಡಿದರು.

ರಾಜ್ಯದ ಎಲ್ಲಾ ಅರ್ಚಕರಿಗೂ ತಸ್ತಿಕ್ ಹಣವನ್ನು ಪರಿಷ್ಕರಿಸಿ ಒಂದು ಲಕ್ಷದ ಇಪ್ಪತ್ತು ಸಾವಿರಕ್ಕೆ ಏರಿಸಬೇಕು ಎಂದು ಅವರು ಇದೇ ವೇಳೆ ಮನವಿ ಮಾಡಿದರು.

ರಾಜ್ಯಾದ್ಯಂತ ದೇವಾಲಯಗಳಲ್ಲಿ ಅರ್ಚಕರು ಎದುರಿಸುತ್ತಿರುವ ನಾನಾ ಸಮಸ್ಯೆ ನಿವಾರಣೆಗೆ ಕ್ರಮ ಕೈಗೊಳ್ಳಬೇಕು.

ಮುಜರಾಯಿ ಇಲಾಖೆಯ ದೇವಸ್ಥಾನಗಳ 1200 ಜನರಿಗೆ ಕಾಶಿಯಾತ್ರೆಗೆ ಹೋಗಲು ಮುಜರಾಯಿ ಸಚಿವರಾದ ರಾಮಲಿಂಗಾ ರೆಡ್ಡಿ ಅವರು ಆದೇಶ ಹೊರಡಿಸಿದ್ದಾರೆ. ದೇವಾಲಯದ ಅರ್ಚಕರಾಗಲೀ ಅಥವಾ ನೌಕರರಾಗಲೀ ಮೃತಪಟ್ಟರೆ ಅವರ ಕುಟುಂಬಕ್ಕೆ 2 ಲಕ್ಷ ರೂ ಪರಿಹಾರ ಕೊಡಲು ತೀರ್ಮಾನಿಸಿದ್ದಾರೆ.

ಅದೇ ರೀತಿ ಮುಜರಾಯಿ ದೇವಾಲಯದ ಎಲ್ಲಾ ಅರ್ಚಕರಿಗೂ ದೇವರ ದರ್ಶನ ಪಡೆಯಲು ಐಡೆಂಟಿಟಿ ಕಾರ್ಡ್ ಕೊಡಲು ಸಚಿವರು ಸೂಚಿಸಿದ್ದಾರೆ.

ಎಲ್ಲ ಅರ್ಚಕರು ತಮ್ಮ ತಮ್ಮ ದೇವಸ್ಥಾನಗಳ ಜೀರ್ಣೋದ್ಧಾರ ಮತ್ತು ಆದಾಯವನ್ನು ಹೆಚ್ಚಿಸಲು ಕಾರ್ಯೋನ್ಮುಖರಾಗಬೇಕು. ಅಲ್ಲದೆ ತಸ್ತಿಕ್ ಹಣ ಅರ್ಚಕರ ಖಾತೆಗಳಿಗೆ ನೇರವಾಗಿ ಜಮೆ ಮಾಡಬೇಕು ಎಂದು ವಿದ್ವಾನ್ ಎಸ್.ಕೃಷ್ಣಮೂರ್ತಿ ಕೋರಿದರು. ಮೈಸೂರು ಜಿಲ್ಲಾ ಅರ್ಚಕರ ಸಂಘದ ಕಾರ್ಯದರ್ಶಿ ಮಹದೇವ್ ಸ್ವಾಮಿ, ಖಜಾಂಚಿ ಎಂ.ವಿ.ಶ್ರೇಣಿಕ, ಉಪಾಧ್ಯಕ್ಷ ಕಿರಾಲು ಮಹೇಶ್, ಗುರುಸ್ವಾಮಿ, ವೀರಭದ್ರ ಸ್ವಾಮಿ, ಸೈನಿಕ, ಎಂ ಎಸ್ ರವಿ, ರವಿ ಶಾಸ್ತ್ರಿ, ತಾಲೂಕು ಖಜಾಂಚಿ ಗಣೇಶ್ ಮತ್ತಿತರರು ಭಾಗವಹಿಸಿದ್ದರು.

ಪಿ.ಗೌತಮ್‌ಗೆ ಹೈ ಜಂಪ್‌ನಲ್ಲಿ ಚಿನ್ನದ ಪದಕ



ಇತ್ತೀಚೆಗೆ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಕ್ರೀಡಾ ಸ್ಪರ್ಧೆಯಲ್ಲಿ ಮೈಸೂರಿನ ನಿವೇದಿತಾ ನಗರದ ದಿ ಆಕ್ಮಿ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಪಿ.ಗೌತಮ್ ಹೈ ಜಂಪ್, 200 ಮೀಟರ್ ಓಟದಲ್ಲಿ ಚಿನ್ನದ ಪದಕ, ಲಾಂಗ್ ಜಂಪ್‌ನಲ್ಲಿ ಬೆಳ್ಳಿ ಪದಕ ಪಡೆದುಕೊಂಡಿದ್ದಾರೆ. ಅಲ್ಲದೆ, ಶಾಲಾ ಅಥ್ಲೆಟ್‌ನಲ್ಲಿ ವೈಯುಕ್ತಿಕ ಚಾಂಪಿಯನ್ ಆಗಿ ಹೊರಹೊಮ್ಮಿದ್ದು, ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈತ ಕೆ. ಪಾಪಣ್ಣ ಮತ್ತು ಶ್ರೀಮತಿ ಎಂ. ಸುಜಾತ ದಂಪತಿ ಪುತ್ರ.

ಇತ್ತೀಚೆಗೆ ಶೃಂಗೇರಿಯ ಶ್ರೀ ಶಂಕರಗಿರಿ ಬೆಟ್ಟದಲ್ಲಿ 32 ಅಡಿ ಎತ್ತರದ ಜಗದ್ಗುರು ಶ್ರೀ ಶ್ರೀ ಶಂಕರಾಚಾರ್ಯರ ಶಿಲಾಮೂರ್ತಿಯನ್ನು ಶ್ರೀ ಶ್ರೀ ಭಾರತೀ ತೀರ್ಥ ಮಹಾ ಸನ್ನಿಧಾನಂಗಳು ಹಾಗೂ ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಲೋಕಾರ್ಪಣೆ ಮಾಡಿದರು.



ಉದ್ಯೋಗಾಧಾರಿತ ತಾಂತ್ರಿಕ ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ನ.13– ಕರ್ನಾಟಕ ಸರ್ಕಾರದ ಎಐಟಿಟಿ– ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿ (SC) ಮತ್ತು ಪರಿಶಿಷ್ಟ ಪಂಗಡದ (ST) ಅರ್ಹ ಯುವಕ, ಯುವತಿಯರಿಗಾಗಿ ಉದ್ಯೋಗ ಆಧಾರಿತ, ಉಚಿತ ತಾಂತ್ರಿಕ ಕೌಶಲ್ಯಾಭಿವೃದ್ಧಿ ತರಬೇತಿಗಳಾದ ಪೋಸ್ಟ್ ಡಿಪ್ಲೊಮಾ ಇನ್ ಟೂಲ್ ಡಿಸೈನ್, ಟೂಲ್ ರೂಮ್ ಮೆಕಾನಿಸ್ಟ್, ಸಿಎನ್‌ಸಿ ಟೆಕ್ನಾಲಜಿ, ಸಿಎಂಎಂ, ಸಿಎನ್‌ಸಿ ಪ್ರೋಗ್ರಾಮರ್–ವಿಎಂಸಿ, ಟರ್ನಿಂಗ್, ಡಿಸೈನರ್ ಮೆಕಾನಿಕಲ್ (ಸಿಎಡಿ–ಸಿಎಎಂ), ಎಲೆಕ್ಟ್ರಿಷಿಯನ್ (ಇಂಡಸ್ಟ್ರಿಯಲ್ ಅಂಡ್ ಡೊಮೆಸ್ಟಿಕ್), ಕನ್ವೆನ್ಷನಲ್ ಮಷಿನ್ಸ್, ಕ್ವಾಲಿಟಿ ಇನ್ಸ್‌ಪೆಕ್ಟರ್, ಸಿಎನ್‌ಸಿ ಮಷಿನ್ ಆಪರೇಟರ್ (ಟರ್ನರ್ ಅಂಡ್ ಮಿಲ್ಲರ್) ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳಿಗೆ ಮಾಸಿಕ 2500 ರೂ. ಸ್ಟೈಫಂಡ್ ನೀಡಲಾಗುವುದು. ದೂ.ಸಂ: 9945349638, 8095978954 ಅನ್ನು ಸಂಪರ್ಕಿಸಬಹುದು.

ಕೌಟಿಲ್ಯ ವಿದ್ಯಾಲಯದಲ್ಲಿ ಸಾರ್ಥಕತೆಯ ಮಕ್ಕಳ ದಿನಾಚರಣೆ



ಮೈಸೂರು, ನ. 13– ಮೈಸೂರಿನ ಕೌಟಿಲ್ಯ ವಿದ್ಯಾಲಯದಲ್ಲಿ ಪಂಡಿತ್ ಜವಾಹರಲಾಲ್ ನೆಹರು ಜಯಂತಿಯ ಅಂಗವಾಗಿ ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು. ಈ ವೇಳೆ ಮಕ್ಕಳು ಹಾಗೂ ಶಿಕ್ಷಕರಿಗೆ ಗಾಯನ, ನೃತ್ಯ, ನಾಟಕ ಸೇರಿ ಹಲವು ವೈವಿಧ್ಯಮಯ ಕಾರ್ಯಕ್ರಮಗಳ ಏರ್ಪಡಿಸಲಾಗಿತ್ತು. ಪ್ರಾಂಶುಪಾಲರು ಮಕ್ಕಳನ್ನು ಕುರಿತು ಹಿತನುಡಿಗಳನ್ನು ಆಡಿದರು. ನಂತರ ವಿದ್ಯಾರ್ಥಿಗಳಿಂದ ಬೆಂಕಿ ಇಲ್ಲದೆ ತಿನಿಸುಗಳನ್ನು ತಯಾರಿಸುವ ಚಮತ್ಕಾರವೂ ನಡೆಯಿತು. ವಿದ್ಯಾರ್ಥಿಗಳು ತಾವೇ ಸ್ವತಃ ತಯಾರಿಸಿದ ತಿನಿಸುಗಳನ್ನು ಸವಿದು ಹರ್ಷಚಿತ್ತರಾದರು. ವಿದ್ಯಾರ್ಥಿಗಳಿಗಾಗಿ ಹಲವು ಆಟೋಟಗಳನ್ನು ಏರ್ಪಡಿಸಲಾಗಿತ್ತು. ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಸಿಹಿ ಹಾಗೂ ಉಡುಗೊರೆಗಳನ್ನು ವಿತರಿಸಲಾಯಿತು. ಮುಂದುವರೆದು, ಸಂಜೆ ದೀಪಾವಳಿ ಹಬ್ಬವನ್ನು ವಿಶೇಷ ರೀತಿಯಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ಸವಿನೆನಪು ಫೌಂಡೇಶನ್ ಟ್ರಸ್ಟ್‌ನ ವಿದ್ಯಾರ್ಥಿಗಳಿಗೆ ಉಪಹಾರದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಶಾಲೆಯ ಅಧ್ಯಕ್ಷ ಟಿ.ಬಾಬು ಮಾತನಾಡಿ, ಉತ್ತಮ ಶಿಕ್ಷಣವನ್ನು ಪಡೆದು ಶ್ರೇಷ್ಠ ಮನುಷ್ಯರಾಗಿ ಒಳ್ಳೆಯ ಜೀವನವನ್ನು ಕಟ್ಟಿಕೊಳ್ಳಿ ಎಂದು ಕಿವಿಮಾತು ಹೇಳಿದರು.



ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ವತಿಯಿಂದ ಆಯೋಜಿಸಿದ್ದ, ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಪುರುಷರ ಕುಸ್ತಿ ಪಂದ್ಯಾವಳಿಯಲ್ಲಿ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು 2023–24ನೇ ಸಾಲಿನ ಪುರುಷರ ಕುಸ್ತಿ ಸಮಗ್ರ ತಂಡ ಪ್ರಶಸ್ತಿ ಪಡೆದುಕೊಂಡಿದೆ. ಚಿತ್ರದಲ್ಲಿ (ಎಡದಿಂದ ಬಲಕ್ಕೆ ಕುಳಿತಿರುವವರು): ಪಿ.ಎಸ್. ಮಧುಸೂಧನ, ದೈಹಿಕ ಶಿಕ್ಷಣ ನಿರ್ದೇಶಕರು, ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು, ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ, ಡಾ.ಎಸ್.ಆರ್.ರಮೇಶ್, ಸಿಇಒ, ಡಾ. ಭಾಸ್ಕರ್ ಹೆಚ್.ಎನ್., ದೈಹಿಕ ಶಿಕ್ಷಣ ನಿರ್ದೇಶಕರು, (ನಿಂತಿರುವವರು): ಮೋಹನ್ ಕುಮಾರ್ ಡಿ, ಲಾಲು ಪ್ರಸಾದ್, ಶಶಿಕುಮಾರ್ ಕೆ, ಗ್ಯಾಬ್ರಿಲ್, ಗಣೇಶ ಎ., ರಾಮು ಪಿ., ಮಂಚಣ್ಣ ಎಸ್. ಹಾಗೂ ತಂಡದ ನಾಯಕ ಯೋಗೇಶ್ ನಾಯಕ ಅವರನ್ನು ಕಾಣಬಹುದು.



ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟದ ಬಾಲ್ ಬ್ಯಾಡ್ಮಿಂಟನ್ ವಿಭಾಗದಲ್ಲಿ ಸತತ ಆರನೇ ಬಾರಿ ಪ್ರಥಮ ಸ್ಥಾನ ಪಡೆದ ಮೈಸೂರು ಬಾಲ್ ಬ್ಯಾಡ್ಮಿಂಟನ್ ತಂಡ ಸರ್ಕಾರಿ ನೌಕರರ ರಾಜ್ಯಾಧ್ಯಕ್ಷ ಸಿ.ಎಸ್. ಷಡಕ್ಷರಿ ಅವರಿಂದ ಪ್ರಶಸ್ತಿ ಪಡೆಯಿತು. ರಾಜ್ಯ ಪ್ರಶಸ್ತಿ ಪಡೆದ ತಂಡದ ನಾಯಕ ಮುಸ್ತಾಕ್, ಅಧೀಕ್ಷಕ ಅಭಿಯಂತರರಾದ ಜಿ.ಸಿ. ಜಗದೀಶ್, ಬಿ. ಕುಮಾರ್, ಸತೀಶ ವರ್ಮಾ, ವಿಶ್ವಾಸ್, ಡಿ. ಸಂದೀಪ್, ಎಂ. ಧನು, ಎಂ.ಎನ್. ರವಿಕುಮಾರ್, ವಿ ಜಯರಾಮ, ಕೆ.ವಿಶ್ವನಾಥ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಕಲ್ಪತರು ಚಾರಿಟೆಬಲ್ ಟ್ರಸ್ಟ್‌ನ ವತಿಯಿಂದ ಹೆಗ್ಗಡದೇವನಕೋಟೆ ತಾಲೂಕು ಆನೆಮಾಳ ಹಾಡಿಯ ಶಾಲಾ ಮಕ್ಕಳಿಗೆ ವಿವಿಧ ಪರಿಕರಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಅಧ್ಯಕ್ಷ ಡಾ.ಅಮ್ಮಸಂದ್ರ ಸುರೇಶ್, ಉಪಾಧ್ಯಕ್ಷ ಕುಮಾರ್, ಸಂಘಟನಾ ಕಾರ್ಯದರ್ಶಿ ಮಹಿಮಾ ಶ್ರೀನಿವಾಸ್, ಶಾಲೆಯ ಮುಖ್ಯಸ್ಥರಾದ ರಂಗಸ್ವಾಮಿ, ಶಿಕ್ಷಕ ಪ್ರಮೋದ್, ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಬಸವಿ ಹಾಜರಿದ್ದರು.

ಮೂರನೇ ಪುಟದಿಂದ

ಕಾಂಗ್ರೆಸ್ ಮೆಗಾ ಗೆಲುವಿನ ಮಂತ್ರ!

ಆ ವರ್ಗದ ಮತದಾರರನ್ನು ಓಲೈಸಿಕೊಳ್ಳುವುದು, ಮತ್ತೊಂದೆಡೆ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ತರಲು ಹೊರಟಿರುವ ಮಹಿಳಾ ಮೀಸಲಾತಿಗೂ ಮುನ್ನವೇ ನಾವು ಮೀಸಲಾತಿ ನೀಡಿದ್ದೇವೆ ಎಂದು ತೋರಿಸಿಕೊಳ್ಳುವುದು ಈ ಪಕ್ಷದ ಉದ್ದೇಶವಾಗಿದೆ.

ಪಕ್ಷದ ಪ್ರಭಾವೀ ನಾಯಕರು ಹಾಗೂ ಸಚಿವರ ಕುಟುಂಬ ವರ್ಗದ ಮಹಿಳೆಯರನ್ನೇ ಚುನಾವಣಾ ಕಣಕ್ಕೆ ಇಳಿಸಲು ಈಗಾಗಲೇ ಸಂಭವನೀಯ ಅಭ್ಯರ್ಥಿಗಳಾಗಿ ಕೆಲವರನ್ನು ಆಯ್ಕೆ ಮಾಡಲಾಗಿದೆ. ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ಸಂಭವನೀಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಪ್ರತಿ ಕ್ಷೇತ್ರಕ್ಕೂ ಸಚಿವರ ತಂಡವನ್ನು ನೇಮಿಸಲಾಗಿದೆ. ಅದರಲ್ಲಿ ಕೆಲವರು ಈಗಾಗಲೇ ವರದಿ ನೀಡಿದ್ದಾರೆ, ಇದರ ಜೊತೆಗೆ ರಾಜ್ಯಾಧ್ಯಕ್ಷರು ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ನಾಲ್ಕು ಸಮೀಕ್ಷೆಗಳನ್ನು ನಡೆಸಿದ್ದಾರೆ. ಈ ಎಲ್ಲಾ ವರದಿಗಳನ್ನು ಕ್ರೂಢೀಕರಿಸಿ ಪ್ರತಿ ಕ್ಷೇತ್ರಕ್ಕೆ ಮೂವರು ಅಭ್ಯರ್ಥಿಗಳಂತೆ ವರಿಷ್ಠರಿಗೆ ಶಿಫಾರಸು ಮಾಡಿ ಜನವರಿ ತಿಂಗಳಲ್ಲೇ ಕಣಕ್ಕಿಳಿಯುವ ಸ್ಪರ್ಧಾಳುಗಳನ್ನು ಘೋಷಿಸಲಿದ್ದಾರೆ.

ಮೈಸೂರಲ್ಲಿ ಪರಿಸರ ಸ್ನೇಹಿ ಎಲ್‌ಇಡಿ ಬಲ್ಬ್ ಅಳವಡಿಕೆಯಿಂದ ನಗರಪಾಲಿಕೆಗೆ ವಾರ್ಷಿಕ 14.8 ಕೋಟಿ ರೂ. ಉಳಿತಾಯ


ಸಾಂಸ್ಕೃತಿಕ ನಗರಿಯಲ್ಲಿ ಬೆಳಗುತ್ತಿವೆ 75,485 ಬಲ್ಬ್‌ಗಳು; ಅರ್ಧದಷ್ಟು ವಿದ್ಯುತ್ ಸೇವ್

ಮೈಸೂರು, ನ.13(ಎಂಕೆ)– ಮೈಸೂರು ನಗರದೆಲ್ಲೆಡೆ ಬೆಳಗುತ್ತಿರುವ 75,485 ಪರಿಸರ ಸ್ನೇಹಿ ಎಲ್‌ಇಡಿ ಬಲ್ಬ್‌ಗಳಿಂದ ನಗರಪಾಲಿಕೆಗೆ ಶೇಕಡ 50ರಷ್ಟು ವಿದ್ಯುತ್ ಜೊತೆಗೆ ವರ್ಷಕ್ಕೆ ಸುಮಾರು 14.8 ಕೋಟಿ ರೂ. ಉಳಿತಾಯವಾಗುತ್ತಿದೆ.

ಬೀದಿ ದೀಪಗಳ ಪ್ರಖರತೆ ಸಾಮರ್ಥ್ಯ ಹೆಚ್ಚಿಸುವುದರ ಜೊತೆಗೆ ವಿದ್ಯುತ್ ಉಳಿತಾಯ ಮಾಡುವ ದೃಷ್ಟಿಯಿಂದ ಸಾರ್ವಜನಿಕ–ಖಾಸಗಿ ಸಹಭಾಗಿತ್ವ(ಪಿಪಿಪಿ) ಮಾದರಿಂದೊಂದಿಗೆ ಆರಂಭವಾದ ಬೀದಿ ದೀಪ ಅನುಷ್ಠಾನ ಯೋಜನೆ ನಗರಪಾಲಿಕೆಗೆ ಪ್ರತಿ ತಿಂಗಳು ಲಾಭ ತರುತ್ತಿದ್ದು, ನಿರ್ವಹಣೆಯ ಖರ್ಚನ್ನು ಕೂಡ ಕಡಿತಗೊಳಿಸಿದೆ.


ನಗರದ ಎಲ್ಲಾ ರಸ್ತೆ, ಉದ್ಯಾನವನ, ರುದ್ರ ಭೂಮಿ ಸೇರಿದಂತೆ ಸಾರ್ವಜನಿಕ ಪ್ರದೇಶಗಳಲ್ಲಿ ಎಲ್‌ಇಡಿ ಬಲ್ಬ್‌ಗಳು ಬೆಳಗುತ್ತಿದ್ದು, ಕೇಂದ್ರೀಕೃತ ನಿಯಂತ್ರಣ ಮತ್ತು ಮೇಲ್ವಿಚಾರಣಾ ವ್ಯವಸ್ಥೆ(centralized control and monitoring system)ಯಿಂದಾಗಿ ಸ್ವಯಂಚಾಲಿತ(auto) ಆನ್ ಅಂಡ್ ಆಫ್ ಮೂಲಕ ಬೀದಿ ದೀಪಗಳನ್ನು ಬೆಳಗಿಸಲಾಗುತ್ತಿದೆ.

65–67 ರಷ್ಟು ವಿದ್ಯುತ್ ಉಳಿತಾಯ: ಮೈಸೂರು ನಗರಪಾಲಿಕೆ ಹಾಗೂ ಇಸ್ಮಾರ್ಟ್ ಎನರ್ಜಿ ಸಲೂಷನ್ಸ್ ಲಿಮಿಟೆಡ್ ನಡುವೆ ಆಗಿರುವ ಒಪ್ಪಂದದಂತೆ ಶೇ.58.77 ರಷ್ಟು ವಿದ್ಯುತ್ ಉಳಿತಾಯ ಮಾಡುವುದು ಕಡ್ಡಾಯವಾಗಿದೆ. ಆದರೆ, ಸ್ಥಳಗಳಿಗೆ ಅನುಗುಣವಾಗಿ 16 ರಿಂದ 120 ವ್ಯಾಟ್‌ವರೆಗಿನ ಎಲ್‌ಇಡಿ ಬಲ್ಬ್‌ಗಳ ಬಳಕೆಯಿಂದಾಗಿ ಪ್ರತೀ ತಿಂಗಳು



ಶೇ.65–67 ರಷ್ಟು ವಿದ್ಯುತ್ ಉಳಿತಾಯವಾಗುತ್ತಿದೆ. ಹಾಗೆಯೇ ಮೊದಲಿದ್ದ ಸುಮಾರು 57 ಸಾವಿರ ಬಲ್ಬ್‌ಗಳ ಜಾಗದಲ್ಲಿ ಹೆಚ್ಚುವರಿಯಾಗಿಯೇ(75,485) ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಿದ್ದು, ನಗರದಾದ್ಯಂತ ಬೆಳಕಿನ ಪ್ರಖರತೆ ಮತ್ತಷ್ಟು ಹೆಚ್ಚಾಗಿದೆ.

ಅದೇ ರೀತಿ ಪ್ರತಿ ತಿಂಗಳು ತಗುಲುತ್ತಿದ್ದ ನಿರ್ವಹಣಾ ವೆಚ್ಚ ಸುಮಾರು 45 ಲಕ್ಷ ರೂ. ಸೇರಿ ವರ್ಷಕ್ಕೆ ಸುಮಾರು 5 ಕೋಟಿ ರೂ. ಉಳಿತಾಯವಾಗುತ್ತಿದೆ. ಈ ಮೊದಲು ತಿಂಗಳಿಗೆ ಬರುತ್ತಿದ್ದ ಸುಮಾರು 2.51 ಕೋಟಿ ರೂ. ವಿದ್ಯುತ್ ಬಿಲ್, ಈಗ 85–90 ಲಕ್ಷ ರೂ.ಗಳಿಗೆ ಕಡಿಮೆಯಾಗಿದೆ ಎಂದು



ನಗರಪಾಲಿಕೆ ನೋಡಲ್ ಅಧಿಕಾರಿ ಸಾಯಿಶಂಕರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ದೇಶದ ಬಹುತೇಕ ನಗರಗಳಲ್ಲಿ ಎಲ್‌ಇಡಿ: ದೇಶದ ಸ್ವಚ್ಛ ನಗರಿ ಖ್ಯಾತಿಯ ಇಂದೋರ್ ಸೇರಿದಂತೆ ಬಹುತೇಕ ನಗರಗಳಲ್ಲಿ ಎಲ್‌ಇಡಿ ಬೀದಿ ದೀಪ ಅನುಷ್ಠಾನ ಯೋಜನೆಯನ್ನು ಅಳವಡಿಸಿಕೊಳ್ಳಲಾಗಿದೆ. ಈ ಮೂಲಕ ವಿದ್ಯುತ್ ಉಳಿತಾಯದ ಜೊತೆಗೆ ಖರ್ಚು ಕೂಡ ಕಡಿಮೆಯಾಗಲಿದೆ. ಅಲ್ಲದೆ ಪಾಲಿಕೆಯ ಆದಾಯವೂ ಹೆಚ್ಚಾಗಲಿದೆ ಎಂದು ತಿಳಿಸಿದರು.

ಸ್ಮಾರ್ಟ್ ಮೀಟರ್: ಈ ಹಿಂದೆ ವಿದ್ಯುತ್ ಬಿಲ್ ಎಷ್ಟೇ ಬಂದರೂ ಪ್ರಶ್ನೆ ಮಾಡುವ ಅವಕಾಶವಿರಲಿಲ್ಲ. ಆದರೀಗ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಿದ್ದು, ವಿದ್ಯುತ್ ಬಿಲ್ ಅನ್ನು ಪರಿಶೀಲನೆ ಮಾಡುವುದಲ್ಲದೆ ವ್ಯತ್ಯಾಸವಿದ್ದರೆ ಪ್ರಶ್ನಿಸಲು ಅವಕಾಶವಾಗಿದೆ ಎಂದರು.

ಕಂಟ್ರೋಲ್ ರೂಂ ಸಹಾಯ: ಬೀದಿ ದೀಪಗಳ ಬೆಳಗುವಿಕೆಯಲ್ಲಿ ಯಾವುದೇ ಸಮಸ್ಯೆಯಾದರೂ ದಿನದ 24 ಗಂಟೆಯೂ ಸೇವಾ ನಿರತವಾಗಿರುವ ಕಂಟ್ರೋಲ್ ರೂಂಗೆ ಕರೆ ಮಾಡಿ ಸಮಸ್ಯೆ ಹೇಳಿಕೊಳ್ಳಬಹುದು. ಸಮಸ್ಯೆ ತಿಳಿದ ಕೂಡಲೇ ಕಂಟ್ರೋಲ್ ರೂಂ ಸಿಬ್ಬಂದಿ ಸಂಬಂಧಪಟ್ಟವರಿಗೆ ಮಾಹಿತಿ ನೀಡುವುದರ ಜೊತೆಗೆ ತ್ವರಿತವಾಗಿ ಸಮಸ್ಯೆ ಬಗೆಹರಿಸಲಿದ್ದಾರೆ. ಕಂಟ್ರೋಲ್ ರೂಂ ಟೋಲ್ ಫ್ರೀ ಸಂಖ್ಯೆ – 18004255925 ಗೆ ಕರೆ ಮಾಡುವಂತೆ ಕೋರಿದ್ದಾರೆ.

ಜಾತ್ರೆಗಳಿಂದ ಬಿಲ್ ಜಾಸ್ತಿ...!

ಕಂಬಗಳಿಂದ ನೇರವಾಗಿ ವಿದ್ಯುತ್ ಬಳಕೆ ಮಾಡಿಕೊಳ್ಳುವುದರಿಂದ ಬಿಲ್ ಹೆಚ್ಚಳವಾಗುವುದರ ಜೊತೆಗೆ ಹೆಚ್ಚಿನ ವಿದ್ಯುತ್ ಬಳಕೆಯಾಗುತ್ತದೆ. ಮುಖ್ಯವಾಗಿ ಜಾತ್ರೆ ಹಾಗೂ ಇನ್ನಿತರೆ ಉತ್ಸವಗಳ ಹೆಸರಿನಲ್ಲಿ ನೇರವಾಗಿ(ಯಾವುದೇ ಮೀಟರ್ ಇಲ್ಲದೆ) ಕಂಬಗಳಿಂದ ವಿದ್ಯುತ್ ಬಳಕೆ ಮಾಡುವುದು ಹೆಚ್ಚು. ಸಾರ್ವಜನಿಕರು ಇದರ ಬಗ್ಗೆ ತಾವೇ ಅರ್ಥಮಾಡಿಕೊಂಡು ಇದನ್ನು ನಿಲ್ಲಿಸಿದರೆ ವಿದ್ಯುತ್ ಉಳಿತಾಯದ ಜೊತೆಗೆ ಎಲ್ಲರಿಗೂ ಪೂರೈಕೆ ಮಾಡಲು ಅನುಕೂಲವಾಗುತ್ತದೆ ಎಂದು ಪಾಲಿಕೆಯ ಅಧಿಕಾರಿಗಳು ಮನವಿ ಮಾಡಿದ್ದಾರೆ.

ರೋಟರಿಯಿಂದ ವಿದ್ಯಾರ್ಥಿಗಳಿಗೆ 'ಸಾಂಸ್ಕೃತಿಕ ಸಂಗಮ' ಸ್ಪರ್ಧೆ

ಮೈಸೂರು, ನ.13(ಎಂಟಿವೈ)– ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಡಿಎವಿ ಪಬ್ಲಿಕ್ ಶಾಲಾ ಸಭಾಂಗಣದಲ್ಲಿ ನ.18 ಮತ್ತು 19ರಂದು ಎಲ್‌ಕೆಜಿಯಿಂದ ಪಿಯುಸಿ ವಿದ್ಯಾರ್ಥಿಗಳಿಗಾಗಿ 'ಸಾಂಸ್ಕೃತಿಕ ಸಂಗಮ' ಸಾಂಸ್ಕೃತಿಕ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಕಾರ್ಯಕ್ರಮದ ಸಂಘಟನಾ ಸಮಿತಿ ಅಧ್ಯಕ್ಷ ರೊ.ಸುಬ್ರಹ್ಮಣ್ಯ ತಂತ್ರಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೋಟರಿ ಸೆಂಟ್ರಲ್ ಮೈಸೂರು ಸಂಸ್ಥೆ ವತಿಯಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವೇದಿಕೆ ಕಲ್ಪಿಸುವ ನಿಟ್ಟಿನಲ್ಲಿ ಸಾಂಸ್ಕೃತಿಕ ಸ್ಪರ್ಧೆ ನಡೆಸಲಾಗುತ್ತಿದೆ. ನ.18ರಂದು ಬೆಳಗ್ಗೆ 10.30ಕ್ಕೆ ಸ್ಪರ್ಧೆ ಆರಂಭವಾಗಲಿದೆ.



ಎಲ್‌ಕೆಜಿ, ಯುಕೆಜಿ ಮಕ್ಕಳು ಫ್ಯಾನ್ಸಿ ಡ್ರೆಸ್ ಹಾಗೂ ಚಿತ್ರಕಲಾ ಸ್ಪರ್ಧೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. 1ನೇ ತರಗತಿಯಿಂದ ಪಿಯುಸಿ ವಿದ್ಯಾರ್ಥಿಗಳಿಗೆ ಭಗವದ್ಗೀತೆ (ಸೋಲೋ), ಭಾವಗೀತೆ, ಚಲನಚಿತ್ರಗೀತೆ, ಪ್ರಬಂಧ ಸ್ಪರ್ಧೆ, ದೇಶಭಕ್ತಿಗೀತೆ, ಭಕ್ತಿಗೀತೆ, ಮೆಹಂದಿ, ರಂಗೋಲಿ, ಭರತನಾಟ್ಯ, ಜಾನಪದ ನೃತ್ಯ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ನ.19ರಂದು ಸಂಜೆ 4.30ಕ್ಕೆ ಸಮಾರೋಪ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂಖ್ಯೆ 94482 71837, 98458 65485 ಸಂಪರ್ಕಿಸುವಂತೆ ಕೋರಿದರು.

ಸುದ್ದಿಗೋಷ್ಠಿಯಲ್ಲಿ ರೋಟರಿ ಸೆಂಟ್ರಲ್ ಮೈಸೂರು ಅಧ್ಯಕ್ಷ ರೊ.ಎನ್. ಉಮೇಶ್, ರೋ. ರವೀಂದ್ರಭಟ್, ಪದಾಧಿಕಾರಿಗಳಾದ ಸಮರ್ಥ್ ವೈದ್ಯ, ಪ್ರೇಮ್‌ಸಾಗರ್ ಇದ್ದರು.

ನ.17, 'ದಿ ವೆಂಕಟ್ ಹೌಸ್' ಚಿತ್ರ ಬಿಡುಗಡೆ

ಮೈಸೂರು,ನ.13(ಎಂಟಿವೈ)– ಯುವ ಜನರನ್ನು ಸೆಳೆಯುವ ಹಾಗೂ ಖಾಲಿ ಮನೆ ಸುತ್ತಾ ಸಾಗುವ ಕಥಾ ಹಂದರ ಹೊಂದಿರುವ 'ದಿ ವೆಂಕಟ್ ಹೌಸ್' ಕನ್ನಡ ಚಲನಚಿತ್ರ ನ.17ರಂದು ರಾಜ್ಯದಾದ್ಯಂತ ತೆರೆ ಕಾಣಲಿದೆ ಎಂದು ಚಿತ್ರದ ನಿರ್ದೇಶಕಿ, ನಟಿ ಎಸ್ತರ್ ನರೋಹ್ನ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ನಾವಿಕ, ಅತಿರಥ, ನುಗ್ಗೇಕಾಯಿ, ಲೋಕಲ್ ಟ್ರೈನ್, ಲಂಕೆ, ಇನಾಮ್ದಾರ್ ಇನ್ನಿತರ ಚಲನಚಿತ್ರಗಳಲ್ಲಿ ನಟಿಸಿದ್ದು, ಇದೀಗ ನಟನೆಯೊಂದಿಗೆ ನಿರ್ದೇಶಕಿಯಾಗಿ ಸೇವೆ ಸಲ್ಲಿಸಿದ್ದೇನೆ. ಮಂಗಳೂರು ಮೂಲದ ನಾನು ಹಿರಿಯ ನಟ ಅನುಪಮ್ ಖೇರ್ ಅವರ ನಟನಾ ಶಾಲೆಯಲ್ಲಿ ತರಬೇತಿ ಪಡೆದಿದ್ದು, ಕೊಂಕಣಿ ಚಿತ್ರಗಳಲ್ಲಿ ಕಾರ್ಯನಿರ್ವಹಿಸಿದ ಅನುಭವವಿದೆ. ಇದೀಗ ಯುವ ಜನತೆಗೆ ವಿಭಿನ್ನ ಕಥೆಯ ಚಿತ್ರ ನೀಡುವ ಉದ್ದೇಶದಿಂದ ದಿ ವೆಕೆಂಟ್ ಹೌಸ್ ಎಂಬ ಕನ್ನಡ ಮತ್ತು ಕೊಂಕಣಿ ಭಾಷೆಯ ಚಲನಚಿತ್ರ ನಿರ್ಮಿಸಿದ್ದೇನೆ. ದಿ ವೆಂಕಟ್ ಹೌಸ್ ಚಲನಚಿತ್ರ



ವನ್ನು ನಿರ್ದೇಶಿಸಿ, ನಿರ್ಮಾಪಕಿಯಾಗಿ ಹಾಗೂ ಸಂಗೀತ ನಿರ್ದೇಶನವನ್ನೂ ಮಾಡಿರುವುದಾಗಿ ತಿಳಿಸಿದ ಅವರು, ಈಗಾಗಲೇ ಶೂಟಿಂಗ್ ಪೂರ್ಣಗೊಂಡಿದೆ. ತೆರೆಗೆ ಸಿದ್ಧವಾಗಿದ್ದು, ನ.17ರಂದು ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಲ್ಲೂ ಬಿಡುಗಡೆಯಾಗಲಿದೆ ಎಂದರು.

ಇದೊಂದು ಹೊಸ ಪ್ರಯತ್ನವಾಗಿದೆ. ಇದು ಚಿಂತನೆಗೆ ದೂಡುವ, ಒಂದು ಖಾಲಿ ಮನೆಯ ಸುತ್ತ ಸುತ್ತುವ ಕಥೆಯ ಚಿತ್ರವಾಗಿದೆ ಎರಡು ಹಾಡುಗಳಿವೆ. ರಾಜ್ಯದಾದ್ಯಂತ ಮಲ್ಟಿಪ್ಲೆಕ್ಸ್ ಸೇರಿದಂತೆ ಸುಮಾರು 76 ಚಿತ್ರ ಮಂದಿಗಳಲ್ಲಿ ಬಿಡುಗಡೆಗೊಳ್ಳಲಿದೆ. ಇದು ಹಾರರ್ ಸಿನಿಮಾ ಅಲ್ಲ, ಪ್ರೀತಿ ಮತ್ತು ಭಾವನೆ ಆಧರಿಸಿದ ಚಿತ್ರವಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ನಟಿ ಎಸ್ತರ್ ನರೋಹ್ನ ತಾಯಿ ಜಾನೆಟ್ ನೋರೊನಾ ಇದ್ದರು.

ಗ್ರಾಪಂ ಕಾರ್ಯದರ್ಶಿ ಇಲ್ಲವೇ ಎಸ್‌ಡಿಎಗೆ ಪಿಡಿಓ ಹುದ್ದೆ

ಮೈಸೂರು, ನ.13(ಎಸ್‌ಪಿಎನ್)– ರಾಜ್ಯಾದ್ಯಂತ ಗ್ರಾಪಂಗಳಲ್ಲಿ ಖಾಲಿ ಇರುವ ಪಿಡಿಓ ಹುದ್ದೆಗಳಿಗೆ ಅದೇ ಗ್ರಾಪಂನ ಕಾರ್ಯದರ್ಶಿ ಅಥವಾ ದ್ವಿತೀಯ ದರ್ಜೆ ಲೆಕ್ಕ ಸಹಾಯಕನನ್ನು ಹೆಚ್ಚುವರಿಯಾಗಿ ನಿಯೋಜಿಸುವಂತೆ ಪಂಚಾಯತ್ ರಾಜ್ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

ಇಂತಹ ಹೆಚ್ಚುವರಿ ಪ್ರಭಾರ ವ್ಯವಸ್ಥೆಯಲ್ಲಿ ಗ್ರಾಪಂಗಳಿಗೆ 2014ರ ಡಿ.23ರ ಆದೇಶವನ್ನು ಪಾಲಿಸುವಂತೆ ನ.10ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಜಿಪಂ ಸಿಇಓ, ತಾಪಂ ಇಓಗೆ ಸೂಚಿಸಲಾಗಿದೆ.

2014ರ ಸುತ್ತೋಲೆಯಲ್ಲಿ ಏನಿದೆ?: ರಾಜ್ಯದಲ್ಲಿನ ಗ್ರಾಮ ಪಂಚಾಯಿತ್ತಿಗಳಲ್ಲಿ ಖಾಲಿ ಇರುವ ಪಿಡಿಓ ಹುದ್ದೆಗಳಿಗೆ ಗ್ರಾಪಂ ಕಾರ್ಯದರ್ಶಿ ಗ್ರೇಡ್–2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ವೃಂದದ ನೌಕರರನ್ನು ಜಿಪಂ ಸಿಇಓ ಹಾಗೂ ತಾಪಂ ಇಓ, ಹೆಚ್ಚುವರಿ ಪ್ರಭಾರ ನಿಯೋಜಿಸುವ ಅಧಿಕಾರ ನೀಡಿರುವ ಅಂಶವನ್ನು, ಆಯಾಯ ವಿಧಾನಸಭೆಯ ಶಾಸಕರು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಗ್ರೇಡ್–1 ವೃಂದದ ಗ್ರಾಪಂ ಕಾರ್ಯದರ್ಶಿಗಳನ್ನು ಅವರು ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಯ ಜೊತೆಗೆ ಅದೇ ಗ್ರಾಪಂನಲ್ಲಿ ಖಾಲಿ ಇರುವ ಪಿಡಿಓ ಅಧಿಕಾರಿ ಹುದ್ದೆಗೆ ಹೆಚ್ಚುವರಿ ಪ್ರಭಾರದಲ್ಲಿ ಇಡತಕ್ಕದ್ದು. ಗ್ರೇಡ್–2 ಗ್ರಾಪಂಗಳಲ್ಲಿ ಪಿಡಿಓ ಹುದ್ದೆ ಖಾಲಿ ಇದ್ದಲ್ಲಿ ಅಂತಹ ಹುದ್ದೆಗೆ ಅದೇ ಗ್ರಾಪಂಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೇಡ್–2 ಗ್ರಾಪಂ ಕಾರ್ಯದರ್ಶಿಯನ್ನೇ ಪಿಡಿಓ ಹೆಚ್ಚುವರಿ ಪ್ರಭಾರದಲ್ಲಿರಿಸತಕ್ಕದ್ದು ಎಂದು ಸೂಚಿಸಿದ್ದಾರೆ.

ಗ್ರಾಪಂಗಳಲ್ಲಿ ಪಿಡಿಓ ಹುದ್ದೆ ಹಾಗೂ ಗ್ರಾಪಂ ಕಾರ್ಯದರ್ಶಿ ಗ್ರೇಡ್–2 ಎರಡೂ ಹುದ್ದೆಗಳೂ ಖಾಲಿ ಇದ್ದಲ್ಲಿ ಅಂತಹ ಗ್ರಾಪಂಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದ್ವಿತೀಯ ದರ್ಜೆ ಲೆಕ್ಕ ಸಹಾಯಕರನ್ನೇ ಪಿಡಿಓ ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿರಿಸತಕ್ಕದ್ದು. ಅಂತೆಯೇ ಒಬ್ಬ ನೌಕರರನ್ನು ಅವರು ಕರ್ತವ್ಯ ನಿರ್ವಹಿಸುವ ಗ್ರಾಪಂಗೆ ಮಾತ್ರ ಹೆಚ್ಚುವರಿ ಪ್ರಭಾರದಲ್ಲಿರಿಸತಕ್ಕದ್ದು, ಈ ವ್ಯವಸ್ಥೆಯ ಪಿಡಿಓ ವೃಂದದ ಖಾಲಿ ಹುದ್ದೆಗಳು ನೇರ ನೇಮಕಾತಿ/ ಬಡ್ತಿ ಮೂಲಕ ಭರ್ತಿಯಾಗುವವರೆಗೆ ಮಾತ್ರ ಅನ್ವಯಿಸುತ್ತದೆ.

ಮೇಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಅಂದಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪದನಿಮಿತ್ತ ಜಂಟಿ ಕಾರ್ಯದರ್ಶಿ ಹಾಗೂ ನಿರ್ದೇಶಕ (ಪಂ.ರಾಜ್)ರು ಆದೇಶಿಸಿದ್ದರು.

ಮಕ್ಕಳಿಗೆ ಇಂದು ವಸ್ತುಪ್ರದರ್ಶನಕ್ಕೆ ಉಚಿತ ಪ್ರವೇಶ

ಮೈಸೂರು, ನ.13– ಕರ್ನಾಟಕದ ವಸ್ತುಪ್ರದರ್ಶನದ ಪ್ರಾಧಿಕಾರದ ವತಿಯಿಂದ ನ.14ರಂದು ಮಕ್ಕಳ ದಿನಾಚರಣೆ ಪ್ರಯುಕ್ತ ಬೆಳಗ್ಗೆ 11ರಿಂದ ಮಧ್ಯಾಹ್ನ 3ರವರೆಗೆ 14 ವರ್ಷದ ಒಳಗಿನ ಎಲ್ಲ ಮಕ್ಕಳಿಗೆ ವಸ್ತು ಪ್ರದರ್ಶನವನ್ನು ವೀಕ್ಷಿಸಲು ಉಚಿತ ಪ್ರವೇಶಾವಕಾಶವನ್ನು ಕಲ್ಪಿಸಲಾಗಿದೆ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಕಾಶವಾಣಿ ಸಾಂದರ್ಭಿಕ ಉದ್ಘೋಷಕರಿಗೆ ಅರ್ಜಿ ಆಹ್ವಾನ

ಮೈಸೂರು, ನ.13–ಆಕಾಶವಾಣಿ ಮೈಸೂರು ಕೇಂದ್ರದಲ್ಲಿ ಸಾಂದರ್ಭಿಕ ಉದ್ಘೋಷಕರಾಗಿ ಕಾರ್ಯನಿರ್ವಹಿಸಲು ಆಸಕ್ತಿಯುಳ್ಳವರಿಂದ ಅರ್ಜಿ ಆಹ್ವಾನಿಸಲಾಗಿದೆ.

ಲಿಖಿತ ಪರೀಕ್ಷೆ, ಧ್ವನಿ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಆಯ್ಕೆಯಾದವರು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಅರ್ಹರಾಗಿದ್ದು, ಸಾಮಾನ್ಯ ಅಭ್ಯರ್ಥಿಗಳಿಗೆ ಧ್ವನಿ ಪರೀಕ್ಷೆ ಶುಲ್ಕ ಹಾಗೂ ಸೇವಾ ಶುಲ್ಕ 300 ರೂ. ಹಾಗೂ ಪರಿಶಿಷ್ಟ ಜಾತಿ, ಪಂಗಡದ ಅಭ್ಯರ್ಥಿಗಳಿಗೆ 225 ರೂ. ಆಗಿರುತ್ತದೆ. ಅರ್ಜಿ ಸಲ್ಲಿಸುವವರು ಅಧಿಕೃತ ವಿಶ್ವವಿದ್ಯಾಲಯದಿಂದ ಪದವಿ ಪಡೆದಿರಬೇಕು. ಮೈಸೂರು, ಮಂಡ್ಯ ಅಥವಾ ಚಾಮರಾಜನಗರ ಜಿಲ್ಲೆಯ ವಾಸಿಯಾಗಿರಬೇಕು. ಮೈಸೂರು ನಗರದಲ್ಲಿ ವಾಸಿಸುವವರಿಗೆ ಆದ್ಯತೆ ನೀಡಲಾಗುವುದು.

ಕನ್ನಡ ಭಾಷೆಯ ಸ್ಪಷ್ಟ ಉಚ್ಚರಣೆ, ಸಾಹಿತ್ಯ, ಸಂಗೀತ, ಕಲೆ ಸಂಸ್ಕೃತಿಗಳ ಪರಿಜ್ಞಾನ, ದೈನಂದಿನ ಆಗು–ಹೋಗುಗಳ ಬಗ್ಗೆ ತಿಳುವಳಿಕೆ ಅವಶ್ಯಕವಾಗಿರುತ್ತದೆ. ಇಂಗ್ಲಿಷ್ ಭಾಷೆಯ ಜ್ಞಾನ, ಕಂಪ್ಯೂಟರ್ ಜ್ಞಾನ ಮತ್ತು ಕಂಪ್ಯೂಟರ್ ಅಲ್ಲಿ ಕಾರ್ಯಕ್ರಮ ಸಿದ್ಧಪಡಿಸುವ ಕೌಶಲ್ಯ ಹೊಂದಿರುವುದು ಅಪೇಕ್ಷಣೀಯ. 20ರಿಂದ 50 ವರ್ಷದೊಳಗಿನವರು ಅರ್ಜಿಸಲ್ಲಿಸಬಹುದಾಗಿದ್ದು, ಆಸಕ್ತರು ಕೆಲಸದ ದಿನಗಳಲ್ಲಿ ಮೈಸೂರು ಆಕಾಶವಾಣಿಯಿಂದ ನಿಗದಿತ ಅರ್ಜಿಗಳನ್ನು ಪಡೆದು ನ.30ರೊಳಗೆ ಭರ್ತಿ ಮಾಡಿದ ಅರ್ಜಿಯ ಜೊತೆಗೆ ಧ್ವನಿ ಪರೀಕ್ಷೆಯ ಶುಲ್ಕವನ್ನು ಸಲ್ಲಿಸಬೇಕು. ಅರ್ಜಿಯನ್ನು ಮೈಸೂರಿನ ಯಾದವಗಿರಿಯ ಆಕಾಶವಾಣಿ ಕೇಂದ್ರದ ಸಾಂದರ್ಭಿಕ ಉದ್ಘೋಷಕರ ವಿಭಾಗದ ಕೇಂದ್ರ ನಿರ್ದೇಶಕರ ಕಚೇರಿಗೆ ಸಲ್ಲಿಸುವಂತೆ ಆಕಾಶವಾಣಿ ಸಹಾಯಕ ನಿರ್ದೇಶಕ ಉಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮನೆಮನೆ ದಸರಾದಲ್ಲಿ ಗೊಂಬೆ ಪ್ರದರ್ಶಿಸಿದ 25 ಮಂದಿಗೆ ಪುರಸ್ಕಾರ

ಗೊಂಬೆ ಪ್ರದರ್ಶನ ಆಕರ್ಷಕ ದಸರಾದ ಒಂದು ಭಾಗ: ಮೇಯರ್

ಮೈಸೂರು, ನ.13(ಎಸ್‌ಪಿಎನ್)– ಮನೆಮನೆ ದಸರಾ ಅಂಗವಾಗಿ ನಗರ ಪಾಲಿಕೆ ವ್ಯಾಪ್ತಿಯ 65 ವಾರ್ಡ್‌ಗಳಲ್ಲಿ ಏರ್ಪಡಿಸಿದ್ದ ಗೊಂಬೆ ಪ್ರದರ್ಶನದಲ್ಲಿ ಭಾಗವಹಿಸಿದ್ದ 89 ಜನರಲ್ಲಿ ಆಕರ್ಷಕ ರೀತಿ ಗೊಂಬೆಗಳನ್ನು ಕೂರಿಸಿದ 25 ಮಂದಿಗೆ ಮೈಸೂರು ಅರಮನೆ ಪ್ರತಿಕೃತಿಯ ಪಾರಿತೋಷಕ ಮತ್ತು ಪ್ರಶಂಸಾ ಪ್ರಮಾಣ ಪತ್ರಗಳನ್ನು ನೀಡಿ ಸೋಮವಾರ ಗೌರವಿಸಲಾಯಿತು.

ಮೈಸೂರು ನಗರ ಪಾಲಿಕೆ ಕಚೇರಿಯ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ಮೇಯರ್ ಶಿವಕುಮಾರ್, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಉಪ ಮೇಯರ್ ಡಾ.ರೂಪ, ಆಡಳಿತ ಪಕ್ಷದ ನಾಯಕ ಮಾ.ವಿ.ರಾಮಪ್ರಸಾದ್ ಸೇರಿದಂತೆ ಇತರೆ ಅಧಿಕಾರಿಗಳ ಸಮ್ಮುಖದಲ್ಲಿ ಪಾರಿತೋಷಕ ಮತ್ತು ಪ್ರಶಂಸಾ ಪತ್ರವನ್ನು ವಿತರಿಸಲಾಯಿತು.

ಈ ವೇಳೆ ರಾಮಚಂದ್ರ ಅಗ್ರಹಾರದ ನಿವಾಸಿ ಹೇಮಲತಾ ಕುಮಾರಸ್ವಾಮಿ, ಅನಂತ ನಾರಾಯಣ, ರಾಮಾನುಜ ರಸ್ತೆಯ ಸಿದ್ದರಾಜು, ಸುಬ್ಬರಾಯಕೆರೆ ಸೋನಾರ್ ಸ್ಟ್ರೀಟ್‌ನ ರಂಗಲಕ್ಷ್ಮಿ, ಮಂಡಿಮೊಹಲ್ಲಾದ ಆರ್.ಅನುಸೂಯ ದೇವಿ, ಕುವೆಂಪು ನಗರದ ಎಸ್.ಆರ್.ರಶ್ಮಿ, ಪದ್ಮಶ್ರೀ,



ರವಿಶಂಕರ್, ಸರಸ್ವತಿಪುರಂನ ಭಾನುಮತಿ ಸುಂದರೇಶನ್, ಬೋಗಾದಿ 2ನೇ ಹಂತದ ಪ್ರಶಾಂತ ನಗರದ ನಿವಾಸಿ ಎಸ್.ನಂದಿನಿ, ರಾಮಕೃಷ್ಣನಗರದ ಸವಿತಾ ದಿನೇಶ್, ಬಿ.ಜಿ.ಸರೂಪಿಣಿ, ಸರಸ್ವತಿಪುರಂನ ಜಯಶ್ರೀ ನಾಗಪ್ರಸಾದ್, ಕುವೆಂಪುನಗರ ಎಂ. ಬ್ಲಾಕಿನ ಶ್ಯಾಮ್ ಸುಂದರ್, ಜೆ.ಪಿ.ನಗರದ ವಿ.ಆರ್. ಪಾರ್ವತಿ ರಾವ್, ಅರವಿಂದನಗರದ ರಾಜೇಶ್ವರಿ ಗಣೇಶನ್, ಕೃಷ್ಣಮೂರ್ತಿಪುರಂನ ಜಿ.ಎಸ್.ಐಶ್ವರ್ಯ, ಶ್ರೀರಾಂಪುರ 2ನೇ ಹಂತದ ಟಿ.ಕೆ.ಉಮಾದೇವಿ, ಗಾಯಿತ್ರಿಪುರಂನ ಜಿ.ಸುಮಾ, ಸಾತಗಳ್ಳಿಯ ಶ್ರೀದೇವಿ ಶ್ರೀವತ್ಸ, ವಿಜಯನಗರ 2ನೇ ಹಂತದ ರಾಜೇಶ್ವರಿ ಅವರಿಗೆ ಪಾರಿತೋಷಕ ಮತ್ತು ಪ್ರಶಂಸಾ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ನಂತರ ಮೇಯರ್ ಶಿವಕುಮಾರ್ ಮಾತನಾಡಿ, ಮನೆಮನೆ ದಸರಾದಲ್ಲಿ ಆಕರ್ಷಕ ಗೊಂಬೆಗಳನ್ನು ಕೂರಿಸುವ ಮೂಲಕ ದಸರಾ ಮತ್ತಷ್ಟು ಕಂಗೊಳಿಸುವಂತೆ ಮಾಡಿದ 25 ಮಂದಿಗೆ ಪಾರಿತೋಷಕ ಮತ್ತು ಪ್ರಶಂಸಾ ಪ್ರಮಾಣ ಪತ್ರ ನೀಡಲಾಗಿದೆ. ಇದರಿಂದ ಸಾಂಸ್ಕೃತಿಕವಾಗಿ ಮೈಸೂರಿನ ಕೀರ್ತಿ ಮತ್ತಷ್ಟು ಹೆಚ್ಚಿದೆ ಎಂದು ತಿಳಿಸಿದರು.

ಮೈಸೂರು ಮಹಾರಾಜರು ತಮ್ಮ ಅಧಿಕಾರಾವಧಿಯಲ್ಲಿ ಕಲೆ, ಸಾಹಿತ್ಯ, ನೃತ್ಯ, ನಾಟಕ ಹಾಗೂ ಸಂಸ್ಕೃತಿಗೆ ಸಾಕಷ್ಟು ಕೊಡುಗೆಗಳನ್ನು ನೀಡಿ, ಮೈಸೂರಿನ ಹಿರಿಮೆಯನ್ನು ಇಮ್ಮಡಿಗೊಳಿಸಿದ್ದಾರೆ. ಅವರ ಹಾಕಿಕೊಟ್ಟ ಮಾರ್ಗದಲ್ಲಿ ನಾವು–ನೀವೆಲ್ಲರೂ ಸಾಗಬೇಕಿದೆ. ದಸರಾ ಸಂದರ್ಭದಲ್ಲಿ ಗೊಂಬೆ ಕೂರಿಸುವುದರ ಹಿನ್ನೆಲೆ, ಐತಿಹಾಸಿಕ ಸಂಗತಿಗಳು ಮುಂದಿನ ಪೀಳಿಗೆಗೂ ತಿಳಿಸಬೇಕಾಗಿದೆ ಎಂದರು.

ಮೈಸೂರು ನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಮಾತನಾಡಿ, ಮನೆಮನೆ ದಸರಾ ಅಂಗವಾಗಿ ಮೈಸೂರಿನ ವಿವಿಧ ಬಡಾವಣೆಗಳ ನಿವಾಸಿಗಳು ಗೊಂಬೆಗಳನ್ನು ಕೂರಿಸುವ ಪದ್ಧತಿ ರೂಢಿಯಲ್ಲಿದೆ. ಇದನ್ನು ಪ್ರೋತ್ಸಾಹಿಸುವ ಸಲುವಾಗಿ 25 ಮಂದಿಗೆ ಪಾರಿತೋಷಕ ಮತ್ತು ಪ್ರಶಂಸಾ ಪತ್ರ ನೀಡಲಾಯಿತು. ಉಳಿದ ಅಭ್ಯರ್ಥಿಗಳಿಗೂ ಪ್ರಶಂಸಾ ಪತ್ರ ವಿತರಿಸಿ, ಗೌರವಿಸಲಾಗಿದೆ ಎಂದು ವಿವರಿಸಿದರು.

ಪಾರಿತೋಷಕ ಪಡೆದ ರಾಜೇಶ್ವರಿ ಗಣೇಶನ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ, ಸಾಂಸ್ಕೃತಿಕವಾಗಿ ಮೈಸೂರು ಸಂಸ್ಥಾನ ಶ್ರೀಮಂತವಾಗಿತ್ತು. ಆ ಶ್ರೀಮಂತಿಕೆಯನ್ನು ಪ್ರಜಾಪ್ರಭುತ್ವ ಆಡಳಿತದಲ್ಲೂ ಮುಂದುವರೆಸಿಕೊಂಡು ಹೋಗುತ್ತಿರುವುದು ಸಂತೋಷ ಸಂಗತಿ. ಗೊಂಬೆ ಕೂರಿಸುವ ಕಲೆಯನ್ನು ಪ್ರೋತ್ಸಾಹಿಸುವುದರಿಂದ ಇಂದಿನ ಯುವಪೀಳಿಗೆಗೆ ಹೊಸತನ, ವ್ಯಕ್ತಿತ್ವ ಕೌಶಲ್ಯ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಯಾದವಗಿರಿಯ ಪಲ್ಲವಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ, ದಸರಾ ಸಂದರ್ಭದಲ್ಲಿ ಗೊಂಬೆ ಕೂರಿಸುವ ಪದ್ಧತಿ ಅನಾದಿಕಾಲದಿಂದಲೂ ಆಚರಣೆಯಲ್ಲಿದೆ. ಇದಕ್ಕೆ ಮೈಸೂರು ಮಹಾರಾಜರು ಪ್ರೋತ್ಸಾಹ ನೀಡುತ್ತಿದ್ದರು. ಇದರಿಂದ ರಾಮಾಯಣ, ಮಹಾ ಭಾರತ, ಮಹಿಷಾ ಸುರ ಮರ್ಧಿನಿ ಸೇರಿದಂತೆ ಇತರೆ ಪುರಾಣ ಘಟನೆಗಳು, ಇತಿಹಾಸ ಸನ್ನಿವೇಶಗಳು, ಕ್ರಿಕೆಟ್ ಆಟಗಾರರ ಗೊಂಬೆಗಳನ್ನು ಕೂರಿಸುವ ಪದ್ಧತಿಯಿದೆ. ಇಂತಹ ಸಂಗತಿಗಳು ಮಕ್ಕಳ ಮನಸ್ಸಿನಲ್ಲಿ ಭಾರತೀಯ ಪರಂಪರೆ ಬಗ್ಗೆ ಉತ್ತಮ ಅಭಿಪ್ರಾಯ ಮೂಡಲು ಉತ್ತಮ ಸನ್ನಿವೇಶ ಎನ್ನಬಹುದು ಎಂದು ಅಭಿಪ್ರಾಯಪಟ್ಟರು.

ವಿಜಯೇಂದ್ರಗೆ ಮೋದಿ, ಅಮಿತ್ ಶಾ ಮಹತ್ವದ ಹೊಣೆ ನೀಡಿದ್ದಾರೆ

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಶ್ಲಾಘನೆ



ಬೆಂಗಳೂರು: ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಂದು ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿ ಆಶೀರ್ವಾದ ಮತ್ತು ಮಾರ್ಗದರ್ಶನ ಪಡೆದರು.

ಇದೇ ವೇಳೆ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಎಸ್.ಎಂ.ಕೃಷ್ಣ ಅವರು, ಬಿಜೆಪಿ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾದ ವಿಜಯೇಂದ್ರರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಹತ್ತಾರು ವರ್ಷಗಳಿಂದ ಬಿಜೆಪಿಯನ್ನು ಕರ್ನಾಟಕದಲ್ಲಿ ಭದ್ರವಾದ ಬುನಾದಿಯ ಮೇಲೆ ಕಟ್ಟಲು ಯಡಿಯೂರಪ್ಪನವರು ಶ್ರಮಿಸಿದ್ದರು ಎಂದರು.

ಯಡಿಯೂರಪ್ಪ ಅವರು ಕಟ್ಟಿದ ಅಸ್ಥಿಭಾರದ ಮೇಲೆ ವಿಜಯೇಂದ್ರ ಅವರು ಬೃಹತ್ತಾಗಿ ಪಕ್ಷವನ್ನು ಕಟ್ಟುವ ಹಾಗೂ ಮುಂದಿನ ಲೋಕಸಭಾ ಚುನಾವಣೆ, ನಂತರ ಬರುವ ಸ್ಥಳೀಯ ಚುನಾವಣೆಗಳಲ್ಲಿ ತಮ್ಮ ಛಾಪನ್ನು ಒತ್ತಿ ತೋರಿಸುವ ದೊಡ್ಡ ಜವಾಬ್ದಾರಿ ಹೊರಲಿದ್ದಾರೆ. ಈ ಯುವ ಹೆಗಲಿನ ಮೇಲೆ ಅಂತಹ ಹೊಣೆ ನೀಡಲಾಗಿದೆ. ಈ ಪ್ರತಿಭೆಯನ್ನು ಗುರುತಿಸಿ ಪ್ರಧಾನಿ ನರೇಂದ್ರ ಮೋದಿಯವರು, ಗೃಹ ಸಚಿವ ಅಮಿತ್ ಶಾ ಮತ್ತು ಜೆಪಿ ನಡ್ಡಾ ಮಹತ್ವದ ಹೊಣೆ ನೀಡಿದ್ದಾರೆ. ವಿಜಯೇಂದ್ರರಿಗೆ ಎಲ್ಲ ರೀತಿಯಿಂದಲೂ ಯಶಸ್ಸು ಸಿಗಲೆಂದು ಹಾರೈಸುವುದಾಗಿ ತಿಳಿಸಿದರು.

ಯುವಕರಿಗೆ ಅಧ್ಯಕ್ಷ ಸ್ಥಾನ ಕುರಿತ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಇಂದಲ್ಲ ನಾಳೆ ಯುವ ಪ್ರತಿಭೆಗಳು ಹೊರಹೊಮ್ಮಬೇಕು. ಅವರ ಜೊತೆ ಹಿರಿಯರು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಅದಕ್ಕೆ ನಾವು ಅನುವು ಮಾಡಿಕೊಟ್ಟು ಅವರ ಕೈಗಳನ್ನು ಬಲಪಡಿಸಬೇಕು. ಅವರಿಗೆ ಮಾರ್ಗದರ್ಶನ ನೀಡಬೇಕು ಎಂದರು. ಶಾಸಕರಾದ ಕೃಷ್ಣಪ್ಪ, ಸಿ.ಕೆ.ರಾಮಮೂರ್ತಿ ಈ ಸಂದರ್ಭದಲ್ಲಿ ಜೊತೆಗಿದ್ದರು.

ಭಾರತೀಯ ಮೂಲದ ಬ್ರಿಟನ್ ಆಂತರಿಕ ಸಚಿವೆ ಸುಯೆಲ್ಲಾ ವಜಾಗೊಳಿಸಿದ ಸುನಕ್



ಲಂಡನ್: ಮುಂದಿನ ವರ್ಷ ನಡೆಯಲಿರುವ ಸಾರ್ವತ್ರಿಕ ಚುನಾವಣೆಗೆ ಮುನ್ನ ತಮ್ಮ ಸಂಪುಟವನ್ನು ಪುನರ್ ರಚಿಸಲು ಮುಂದಾಗಿರುವ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರು, ಭಾರತೀಯ ಮೂಲದ ವಿವಾದಿತ ಆಂತರಿಕ ಸಚಿವೆ ಸುಯೆಲ್ಲಾ ಬ್ರೆವರ್‌ಮನ್ ಅವರನ್ನು ಸೋಮವಾರ ಸಂಪುಟದಿಂದ ವಜಾ ಮಾಡಿದ್ದಾರೆ.

ಕಳೆದ ಶನಿವಾರ ಲಂಡನ್‌ನಲ್ಲಿ ನಡೆದ ಪ್ಯಾಲೆಸ್ತೀನ್ ಪರ ಪ್ರತಿಭಟನೆಯನ್ನು ಪೊಲೀಸರು ನಿಭಾಯಿಸಿದ ರೀತಿಯನ್ನು ಟೀಕಿಸಿ ಸುಯೆಲ್ಲಾ ಬ್ರೆವರ್‌ಮನ್ ಅವರು ಪೋಸ್ಟ್ ಹಾಕಿದ್ದರು. ಈ ಬೆನ್ನಲ್ಲೇ ಅವರನ್ನು ಸಂಪುಟದಿಂದ ವಜಾಗೊಳಿಸಲಾಗಿದೆ ಎಂದು ತಿಳಿದು ಬಂದಿದೆ.

ಪ್ಯಾಲೆಸ್ತೀನ್ ಪರ ಪ್ರತಿಭಟನಾಕಾರರೊಂದಿಗೆ ವ್ಯವಹರಿಸುವಾಗ ಲಂಡನ್ ಪೊಲೀಸರು ಪಕ್ಷಪಾತ ನೀತಿ ಅನುಸರಿಸಿದ್ದಾರೆ ಎಂದು ಸುಯೆಲ್ಲಾ ತನ್ನ ಪೋಸ್ಟ್‌ನಲ್ಲಿ ಆರೋಪಿಸಿದ್ದರು. ಸುಯೆಲ್ಲಾ ಅವರ ಈ ಪೋಸ್ಟ್ ಉದ್ವಿಗ್ನತೆಯನ್ನು ಪ್ರಚೋದಿಸಲು ಮತ್ತು ಬಲಪಂಥೀಯ ಪ್ರತಿಭಟನಾಕಾರರು ಲಂಡನ್‌ನ ಬೀದಿಗಿಳಿಯಲು ಪ್ರೋತ್ಸಾಹಿಸಿದೆ ಎಂದು ಟೀಕಿಸಲಾಗಿತ್ತು. ಇದರಿಂದ ತೀವ್ರ ಒತ್ತಡಕ್ಕೆ ಸಿಲುಕಿದ ರಿಷಿ ಸುನಕ್ ಅವರು ಸುಯೆಲ್ಲಾ ವಿರುದ್ಧ ಕ್ರಮ ಕೈಗೊಂಡಿದ್ದಾರೆ ಎನ್ನಲಾಗಿದೆ.

ವರದಿಗಳ ಪ್ರಕಾರ, ರಿಷಿ ಸುನಕ್ ಅವರು ತಮ್ಮ ಸಚಿವ ಸಂಪುಟದಲ್ಲಿ ಬದಲಾವಣೆಯನ್ನು ತರಲು ಮುಂದಾಗಿದ್ದು, ಇದರ ಭಾಗವಾಗಿ ಸುಯೆಲ್ಲಾ ಅವರನ್ನು ವಜಾಗೊಳಿಸಿದ್ದಾರೆ ಎನ್ನಲಾಗಿದೆ.

ವಜಾಗೊಂಡ ನಂತರ ಮಾತನಾಡಿದ 43 ವರ್ಷದ ವಕೀಲೆ ಸುಯೆಲ್ಲಾ ಅವರು, ಗೃಹ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುವುದು ನನ್ನ ಜೀವನದ ಅತ್ಯಂತ ದೊಡ್ಡ ಜವಾಬ್ದಾರಿ. ಸೂಕ್ತ ಸಮಯದಲ್ಲಿ ಹೆಚ್ಚಿನ ಮಾಹಿತಿ ನೀಡುತ್ತೇನೆ ಎಂದು ಹೇಳಿದ್ದಾರೆ.

ನೇಮಕಾತಿ ಪ್ರಕ್ರಿಯೆಯಲ್ಲಿ ಲೋಪ ಕೆಎಂಎಫ್‌ಗೆ ಹೈಕೋರ್ಟ್ ತರಾಟೆ



ಬೆಂಗಳೂರು: ಉದ್ಯೋಗ ಅರ್ಜಿಯೊಂದಿಗೆ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದ ಸಾಮಾಜಿಕ ಸ್ಥಾನಮಾನದ ಪ್ರಮಾಣ ಪತ್ರವು ಅಸ್ಪಷ್ಟವಾಗಿದೆ ಎಂಬ ಕಾರಣಕ್ಕಾಗಿ ಮೀಸಲಾತಿ ವರ್ಗದ ಅಭ್ಯರ್ಥಿಯನ್ನು ಸಾಮಾನ್ಯ ವರ್ಗಕ್ಕೆ ಸೇರಿಸಿದ್ದಕ್ಕಾಗಿ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಒಕ್ಕೂಟವನ್ನು (ಕೆಎಂಎಫ್) ಕರ್ನಾಟಕ ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

ಸ್ವಾಭಾವಿಕ ನ್ಯಾಯದ ತತ್ವದ ಅಡಿಯಲ್ಲಿ ಕೆಎಂಎಫ್ ಅಭ್ಯರ್ಥಿಯನ್ನು ಹೆಚ್ಚು ಸ್ಪಷ್ಟವಾದ ಪ್ರಮಾಣಪತ್ರವನ್ನು ಸಲ್ಲಿಸಲು ಕೇಳಬೇಕಾಗಿತ್ತು ಎಂದು ಅದು ಹೇಳಿದೆ.

ಈ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರ ವಿಭಾಗೀಯ ಪೀಠವು, ಕೆಎಂಎಫ್ ನಡೆಯನ್ನು ಅರ್ಥಮಾಡಿಕೊಳ್ಳುವಲ್ಲಿ ನಾವು ವಿಫಲರಾಗಿದ್ದೇವೆ. ಒಕ್ಕೂಟವು ಮೇಲ್ಮನವಿದಾರರಿಗೆ ಸ್ಪಷ್ಟವಾದ ಪ್ರಮಾಣಪತ್ರವನ್ನು ಸಲ್ಲಿಸುವಂತೆ ಕೇಳಿದ್ದರೆ ಏನಾಗುತ್ತಿತ್ತು ಎಂದು ತರಾಟೆಗೆ ತೆಗೆದುಕೊಂಡಿದೆ.

ದೇವರಾಜ್ ಪಿಆರ್ ಎಂಬುವವರು ಅಪ್‌ಲೋಡ್ ಮಾಡಿದ ಪ್ರಮಾಣಪತ್ರವು ಸ್ಪಷ್ಟವಾಗಿಲ್ಲ ಎಂಬ ಕಾರಣಕ್ಕಾಗಿ ಕೆಎಂಎಫ್ ಅದನ್ನು ತಿರಸ್ಕರಿಸಿತ್ತು ಮತ್ತು ಅವರು ಮೀಸಲಾತಿ ವರ್ಗದ ಅಡಿಯಲ್ಲಿ ಕೆಲಸ ಹುಡುಕುತ್ತಿದ್ದಾಗ ಅವರನ್ನು ಸಾಮಾನ್ಯ ವರ್ಗಕ್ಕೆ ಸೇರಿಸಿತ್ತು.


ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಫೆಬ್ರುವರಿ 14, 2023ರಂದು ಹೈಕೋರ್ಟ್ ಏಕಸದಸ್ಯ ಪೀಠ ಅರ್ಜಿಯನ್ನು ತಿರಸ್ಕರಿಸಿತ್ತು. ಬಳಿಕ ಅವರು ಸಲ್ಲಿಸಿದ ಮೇಲ್ಮನವಿಯನ್ನು ವಿಭಾಗೀಯ ಪೀಠವು ಅನುಮತಿಸಿತು.

ಸಂವಿಧಾನದ 12ನೇ ವಿಧಿಯ ಪ್ರಕಾರ ಕೆಎಂಎಫ್ ರಾಜ್ಯ ಘಟಕವಾಗಿದ್ದು, ಅದರ ವ್ಯವಹಾರಗಳು ನ್ಯಾಯಯುತವಾಗಿರಬೇಕು. ನಮ್ಮದು ಸಾಂವಿಧಾನಿಕವಾಗಿ ನಿಗದಿಪಡಿಸಿದಂತೆ ಕಲ್ಯಾಣ ರಾಜ್ಯವಾಗಿದೆ ಎಂದು ಪೀಠ ಹೇಳಿದೆ.

ಮೇಲ್ಮನವಿದಾರರು ಅಪ್‌ಲೋಡ್ ಮಾಡಿದ ಸಾಮಾಜಿಕ ಸ್ಥಾನಮಾನದ ಪ್ರಮಾಣಪತ್ರವು ಸ್ಪಷ್ಟವಾಗಿ ಗೋಚರಿಸದ ಕಾರಣ ಅಥವಾ ಅಸ್ಪಷ್ಟವಾಗಿರುವ ಕಾರಣಕ್ಕಾಗಿ ಸಾಮಾನ್ಯ ವರ್ಗಕ್ಕೆ ಸೇರಿಸುವ ಒಕ್ಕೂಟದ ಕ್ರಮವು ಸಂಪೂರ್ಣವಾಗಿ ಅನ್ಯಾಯವಾಗಿದೆ. ಸ್ವಾಭಾವಿಕ ನ್ಯಾಯದ ತತ್ವದ ಅಡಿಯಲ್ಲಿ ಸ್ಪಷ್ಟವಾದ ಪ್ರಮಾಣಪತ್ರವನ್ನು ಅಪ್‌ಲೋಡ್ ಮಾಡಲು ಅಭ್ಯರ್ಥಿಗೆ ತಿಳಿಸುವ ಅಗತ್ಯವಿದೆ ಎಂದು ಪೀಠ ಹೇಳಿದೆ.

ಮೇಲ್ಮನವಿಯನ್ನು ಪರಿಗಣಿಸಿದ ಕೋರ್ಟ್, ಎರಡು ವಾರಗಳಲ್ಲಿ ಮೂಲ ಜಾತಿ ಪ್ರಮಾಣಪತ್ರದೊಂದಿಗೆ ದೇವರಾಜ್ ಅವರ ಅರ್ಜಿಯನ್ನು ಪರಿಗಣಿಸಲು ಕೆಎಂಎಫ್‌ಗೆ ಎರಡು ವಾರಗಳ ಕಾಲಾವಕಾಶವನ್ನು ನೀಡಿತು.

ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದರೆ ಛತ್ತೀಸ್‌ಗಢದಲ್ಲೂ ಗೃಹಲಕ್ಷ್ಮಿ ಜಾರಿ



ನವದೆಹಲಿ: ಛತ್ತೀಸ್‌ಗಢ ವಿಧಾನಸಭೆ ಚುನಾವಣೆಯಲ್ಲಿ ಶತಾಯಗತಾಯ ಮತ್ತೊಂದು ಅವಧಿಗೆ ಅಧಿಕಾರಕ್ಕೆ ಬರಬೇಕೆಂದು ಪಣ ತೊಟ್ಟಿರುವ ಕಾಂಗ್ರೆಸ್, ಮತದಾರರಿಗೆ ಹಲವು ಭರವಸೆಗಳನ್ನು ನೀಡುತ್ತಿದೆ.

ಎರಡನೇ ಹಂತದ ಮತದಾನಕ್ಕೆ ಕೇವಲ ನಾಲ್ಕು ದಿನಗಳು ಬಾಕಿಯಿದ್ದು, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ರಾಜ್ಯದಲ್ಲಿ ಪಕ್ಷ ಮತ್ತೆ ಅಧಿಕಾರಕ್ಕೆ ಬಂದರೆ ಕರ್ನಾಟಕದಂತೆ ಛತ್ತೀಸ್‌ಗಢದಲ್ಲೂ 'ಗೃಹ ಲಕ್ಷ್ಮಿ' ಯೋಜನೆಯನ್ನು ಜಾರಿಗೆ ತರಲಾಗುವುದು ಎಂದು ಸೋಮವಾರ ಘೋಷಿಸಿದ್ದಾರೆ.


ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ, "'ಗೃಹ ಲಕ್ಷ್ಮಿ ಯೋಜನೆ' ಅನ್ನು ಛತ್ತೀಸ್‌ಗಢದಲ್ಲಿಯೂ ಜಾರಿಗೆ ತರಲಾಗುವುದು. ಈ ಯೋಜನೆ ಅಡಿ ವರ್ಷಕ್ಕೆ 15,000 ರೂ.ಗಳನ್ನು ಮಹಿಳೆಯರ ಖಾತೆಗಳಿಗೆ ಜಮೆ ಮಾಡಲಾಗುವುದು. ಇದರೊಂದಿಗೆ ಪ್ರತಿ ಎಲ್‌ಪಿಜಿ ಸಿಲಿಂಡರ್ 500 ರೂ. ಸಬ್ಸಿಡಿ ಇರುತ್ತದೆ ಎಂದು ಭರವಸೆ ನೀಡಿದ್ದಾರೆ.

ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದರೆ ಸ್ವ-ಸಹಾಯ ಗುಂಪುಗಳು ಮತ್ತು ಸಕ್ಷಮ್ ಯೋಜನೆಗಳ ಸಾಲಗಳನ್ನು ಮನ್ನಾ ಮಾಡಲಾಗುವುದು. ಛತ್ತೀಸ್‌ಗಢದ ಕಾಂಗ್ರೆಸ್ ಸರ್ಕಾರ, ರೈತರು, ಕಾರ್ಮಿಕರು, ಮಹಿಳೆಯರು, ಆದಿವಾಸಿಗಳು, ದಲಿತರು ಮತ್ತು ಬಡವರ ಸಮೃದ್ಧಿಯ ಮಾದರಿಯನ್ನು ಪ್ರಸ್ತುತಪಡಿಸಿದೆ ಎಂದು ಪ್ರಿಯಾಂಕ ಗಾಂಧಿ ಅವರು ಹೇಳಿದ್ದಾರೆ.

ಈಗಾಗಲೇ ಕರ್ನಾಟಕದಲ್ಲಿ ಗೃಹ ಲಕ್ಷ್ಮಿ ಯೋಜನೆ ಜಾರಿಯಲ್ಲಿದ್ದು, ಪ್ರತಿ ತಿಂಗಳೂ ಎರಡು ಸಾವಿರ ರೂ. ಹಣವನ್ನು ಮನೆ ಯಜಮಾನಿಯ ಖಾತೆಗೆ ಹಾಕಲಾಗುತ್ತಿದೆ. ಇದೇ ಮಾದರಿಯ ಯೋಜನೆಯನ್ನು ಛತ್ತೀಸ್‌ಗಢದಲ್ಲೂ ಕಾಂಗ್ರೆಸ್ ಪಕ್ಷ ಘೋಷಿಸಿದೆ.

ಕುಂಬಾರಕೊಪ್ಪಲಲ್ಲಿ ಶ್ರೀ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವಕ್ಕೆ ಸಂಭ್ರಮದ ಚಾಲನೆ

ಇಂದು ರಾತ್ರಿ ವಿಜೃಂಭಣೆಯ ಹಾಲರವಿ ಉತ್ಸವ





ಮೈಸೂರಿನ ಕುಂಬಾರಕೊಪ್ಪಲಿನ ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನದ ಗರ್ಭಗುಡಿಯಲ್ಲಿ ಅರ್ಚಕರು ಭಕ್ತಿಭಾವದಿಂದ ಪೂಜಾ ಕೈಂಕರ್ಯ ನಡೆಸುತ್ತಿರುವುದು. ಎಡ ಚಿತ್ರದಲ್ಲಿ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿರುವ ದೇವಸ್ಥಾನದ ಹೊರಾವರಣವನ್ನು ಕಾಣಬಹುದು.



ಕುಂಬಾರಕೊಪ್ಪಲಿನ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಸೋಮವಾರ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.

ಮೈಸೂರು,ನ.13(ಪಿಎಂ)– ಕುಂಬಾರಕೊಪ್ಪಲಿನ ಮೂರು ದಿನಗಳ ಶ್ರೀ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವಕ್ಕೆ ಸೋಮವಾರ ಚಾಲನೆ ದೊರೆಯಿತು.

ಜಾತ್ರೆಯ ಕೇಂದ್ರ ಬಿಂದುವಾದ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ ಸೇರಿದಂತೆ ಗ್ರಾಮದ ಎಲ್ಲಾ ದೇವಸ್ಥಾನಗಳಲ್ಲಿ ಇಂದು ವಿಶೇಷ ಪೂಜಾ ಕೈಂಕರ್ಯ ನಡೆಯಿತು.

ಇಲ್ಲಿನ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ, ಇದೇ ದೇವಾಲಯದ ಆವರಣದಲ್ಲಿರುವ ಶ್ರೀ ಸಿದ್ದಪ್ಪಾಜಿ ದೇವಸ್ಥಾನ, ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನ ಸೇರಿದಂತೆ ಗ್ರಾಮದ ಮಾರಮ್ಮನಗುಡಿ, ಬನ್ನಿ ಮಾರಮ್ಮ ದೇವಾಲಯ ಹಾಗೂ ಶ್ರೀ ಬಸವೇಶ್ವರ ದೇವಸ್ಥಾನ ಸೇರಿದಂತೆ ಗ್ರಾಮದ ಎಲ್ಲಾ ದೇವಾಲಯಗಳಲ್ಲಿ ಗ್ರಾಮಸ್ಥರು ಹಾಗೂ ಜಾತ್ರೆಗೆ ಆಗಮಿಸಿರುವ ನೆಂಟರಿಷ್ಟರು ಪೂಜಾ ಕೈಂಕರ್ಯ ನಡೆಸಿ, ಭಕ್ತಿಯ ಪರಾಕಾಷ್ಠೆ ಮೆರೆದರು.

ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು, ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು.

ಮಹದೇಶ್ವರಸ್ವಾಮಿ ದೇವಸ್ಥಾನದ ಮುಖ್ಯ ಅರ್ಚಕ ನಂಜಪ್ಪ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಮಲೆಮಹದೇಶ್ವರ ಬೆಟ್ಟದ ಮಹದೇಶ್ವರರ ಸನ್ನಿಧಿಯಲ್ಲಿ ಮಾಡುವ ಮಾದರಿಯಲ್ಲೇ ನಮ್ಮ ದೇವಸ್ಥಾನದಲ್ಲಿ ಶನಿವಾರ ಎಣ್ಣೆ ಮಜ್ಜನ ಪೂಜೆ ನರವೇರಿಸಲಾಯಿತು. ಇಂದು ಅಮಾವಾಸ್ಯೆ ಪೂಜೆ ನಡೆಸಲಾಗಿದೆ. ಈ ದೇವಸ್ಥಾನದ ಗರ್ಭಗುಡಿಯಲ್ಲಿ ಉದ್ಭವ ಲಿಂಗವಿದ್ದು, ಅದಕ್ಕೆ ಮಹದೇಶ್ವರರ ಬೆಳ್ಳಿಯ ಉತ್ಸವ ಮೂರ್ತಿ ಧಾರಣೆ ಮಾಡಲಾಗಿದೆ ಎಂದು ತಿಳಿಸಿದರು.



ಡಿ.ಮಾದೇಗೌಡ

ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ವಿಧಾನ ಪರಿಷತ್ ಮಾಜಿ ಸದಸ್ಯರೂ ಆದ ಗ್ರಾಮದ ಹಿರಿಯ ಮುಖಂಡ ಡಿ.ಮಾದೇಗೌಡ, ಪ್ರತಿವರ್ಷ ಜಾತ್ರೆಯ ಮೊದಲ ದಿನದ ಆಚರಣೆ ಬೆಳಗ್ಗೆಯಿಂದಲೇ ಪ್ರಾರಂಭಗೊಳ್ಳುತ್ತದೆ. ಆರಂಭದ ದಿನದಲ್ಲಿ ಎಲ್ಲಾ ಮನೆಗಳಲ್ಲಿಯೂ ಸ್ನಾನ-ಮಡಿ ಮುಗಿಸಿ ಗ್ರಾಮದಲ್ಲಿರುವ 8ಕ್ಕೂ ಹೆಚ್ಚು ದೇವಸ್ಥಾನಗಳಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸುತ್ತಾರೆ. ಇದರಲ್ಲಿ ಮಹದೇಶ್ವರಸ್ವಾಮಿ ದೇವಸ್ಥಾನ ಪ್ರಮುಖ. ಆ ಮೂಲಕ 3 ದಿನಗಳ ಜಾತ್ರೆಯ ವೈಭವಕ್ಕೆ ಚಾಲನೆ ದೊರೆಯಲಿದೆ ಎಂದು ಹೇಳಿದರು.

ಹಲವಾರು ವರ್ಷಗಳಿಂದ ಜಾತ್ರೆಯ ಅಂಗವಾಗಿ ಕಬಡ್ಡಿ ಆಯೋಜನೆ ಮಾಡಲಾಗುತ್ತಿದೆ. ಇದರಿಂದ ಕುಂಬಾರಕೊಪ್ಪಲು ರಾಜ್ಯಮಟ್ಟದಲ್ಲಿ ಹೆಸರುವಾಸಿಯಾಗಿದೆ. ಕಬಡ್ಡಿ ಸಂಘಟನೆಗಳಲ್ಲಿ ಇಲ್ಲಿಯ ಅನೇಕರು ರಾಜ್ಯ ಮಟ್ಟದ ಪದಾಧಿಕಾರಿಗಳಾಗಿದ್ದಾರೆ. ಈ ಪಂದ್ಯಾವಳಿ ಆಯೋಜನೆಗೆ ಜನರು ಉದಾರವಾಗಿ ಸಹಾಯ ಮಾಡುತ್ತಾ ಬಂದಿದ್ದಾರೆ. ರಾಜ್ಯದ 29 ಜಿಲ್ಲೆಗಳ ತಂಡಗಳು ಭಾಗವಹಿಸಿರುವುದು ಈ ಬಾರಿಯ ವಿಶೇಷ. ಪ್ರತಿ ಜಿಲ್ಲೆಯ ತಂಡಕ್ಕೂ ಪ್ರತ್ಯೇಕವಾದ ಸಮವಸ್ತ್ರ ನೀಡಲಾಗಿದೆ. ಈ ಪಂದ್ಯಾವಳಿಯಲ್ಲಿ ರಾಜ್ಯದ ಎಲ್ಲಾ ಪ್ರಾದೇಶಿಕತೆಗೂ ಪ್ರಾತಿನಿಧ್ಯ ದೊರೆತಂತಿದ್ದು, ಇದು ನಿಜಕ್ಕೂ ಹೆಮ್ಮೆಯ ವಿಷಯ. ಇದು ಭಾವೈಕ್ಯತೆ ಬೆಸೆಗೆ ಎಂದು ಮಾದೇಗೌಡರು ಬಣ್ಣಿಸಿದರು.

ನಾಳೆ ರಾತ್ರಿ 8ಕ್ಕೆ (ನ.14) ಮೈಸೂರು-ಕೆಆರ್‌ಎಸ್ ರಸ್ತೆಯಲ್ಲಿರುವ ತಿಪ್ಪಾಜಿ ಕೊಳದಿಂದ ಪ್ರಾರಂಭಗೊಳ್ಳುವ ಹಾಲ ರವಿ ಮತ್ತು ಬಾಯಿಬೀಗ ಉತ್ಸವವು ಕುಂಬಾರಕೊಪ್ಪಲಿನ ಪ್ರಮುಖ ಬೀದಿಗಳಲ್ಲಿ ಸಾಗಲಿದೆ. ಹಿಂದೆ ಈ ಉತ್ಸವದಲ್ಲಿ ದನಗಳ ಪರಸೆ ಕೂಡ ಬರುತ್ತಿತ್ತು. ದನಕರುಗಳ ಶೃಂಗಾರ ಮಾಡಿ ಕರೆತರುತ್ತಿದ್ದರು. ಅವುಗಳನ್ನು ನೋಡುವುದೇ ಒಂದು ಚಂದವಿತ್ತು. ಆದರೆ ಈಗ ಅಂತಹ ಸೊಬಗು ಇಲ್ಲವಾಗಿದೆ. ಕುಂಬಾರಕೊಪ್ಪಲಿನಲ್ಲಿ ಮೊದಲಿನಿಂದಲೂ ಎಲ್ಲಾ ಸಮುದಾಯಗಳ ನಡುವಿನ ಭಾವೈಕ್ಯತೆ, ಸಾಮರಸ್ಯಕ್ಕೆ ಕೊರತೆ ಇಲ್ಲ ಎಂದು ಹೇಳಿದರು.

ಕಬಡ್ಡಿಗೆ ಚಾಲನೆ: ಜಾತ್ರೆ ಪ್ರಯುಕ್ತ ಪ್ರತಿವರ್ಷದಂತೆ ಗ್ರಾಮದ ಶ್ರೀ ಕೆಂಪೇಗೌಡ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿರುವ ಕಬಡ್ಡಿ ಪಂದ್ಯಾವಳಿಗೆ ಇಂದು ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಿದರು. ಬಳಿಕ ಕಲಬುರ್ಗಿ ತಂಡ ಮತ್ತು ಚಾಮರಾಜನಗರ ತಂಡದ ನಡುವೆ ಹಾಗೂ ಮೈಸೂರು ತಂಡ ಮತ್ತು ಯಾದಗಿರಿ ತಂಡದ ನಡುವೆ ಪಂದ್ಯಗಳು ನಡೆದವು.

ಟಾಸ್ ಹಾಕುವ ಮೂಲಕ ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಅವರು ಮೈಸೂರು ಮತ್ತು ಯಾದಗಿರಿ ತಂಡಗಳ ನಡುವಿನ ಪಂದ್ಯಕ್ಕೆ ಚಾಲನೆ ನೀಡಿದರು. ರಾಜ್ಯ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಅಧ್ಯಕ್ಷ ಎಂ.ಹನುಮಂತೇಗೌಡ, ಶಾಸಕ ಕೆ.ಹರೀಶ್‌ಗೌಡ ಅವರ ಕಿರಿಯ ಸಹೋದರ ಗಿರೀಶ್, ಹಿರಿಯ ವಕೀಲ ಬಸವರಾಜು, ಮೈಸೂರು ತಹಸೀಲ್ದಾರ್ ಗಿರೀಶ್, ಕುಂಬಾರಕೊಪ್ಪಲು ಅಭ್ಯುದಯ ಸಂಘದ ಅಧ್ಯಕ್ಷ ಕೆ.ಟಿ.ಚೆಲುವೇಗೌಡ, ಕಾರ್ಯಕಾರಿ ಸಮಿತಿ ಸದಸ್ಯ ಚೇತನ್ ವಿಷಕಂಠೇಗೌಡ, ಆರ್ಟಿಸ್ಟ್ ರಾಮು ಮತ್ತಿತರರು ಹಾಜರಿದ್ದರು.

ಆರೋಗ್ಯಕ್ಕೆ ಕ್ರೀಡೆ, ಯೋಗ, ಧ್ಯಾನ ಸಹಕಾರಿ

ಕುಂಬಾರಕೊಪ್ಪಲಿನಲ್ಲಿ ಕಬಡ್ಡಿ ಪಂದ್ಯಕ್ಕೆ ಚಾಲನೆ ನೀಡಿದ ನಂತರ ಶಾಸಕ ಜಿ.ಟಿ.ದೇವೇಗೌಡ ಅಭಿಮತ



ಕುಂಬಾರಕೊಪ್ಪಲಿನಲ್ಲಿ ಶ್ರೀ ಮಹದೇಶ್ವರಸ್ವಾಮಿ ಜಾತ್ರೆಯ ಪ್ರಯುಕ್ತ ಹಮ್ಮಿಕೊಂಡಿರುವ ಕಬಡ್ಡಿ ಪಂದ್ಯಾವಳಿಯ ಉದ್ಘಾಟನಾ ಸಮಾರಂಭದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಮೈಸೂರು ಜಿಲ್ಲೆಯ ತಂಡದ ಆಟಗಾರರನ್ನು ಪರಿಚಯ ಮಾಡಿಕೊಂಡರು.

ಮೈಸೂರು,ನ.13(ಪಿಎಂ)–ಆರೋಗ್ಯಕ್ಕೆ ಕ್ರೀಡೆ, ಯೋಗ ಮತ್ತು ಧ್ಯಾನ ಬಹಳ ಮುಖ್ಯ. ಈ ಹಿನ್ನೆಲೆಯಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಕುಂಬಾರಕೊಪ್ಪಲಿನಿಂದ ಉತ್ತೇಜನ ದೊರೆಯುತ್ತಿರುವುದು ಪ್ರಶಂಸನೀಯ ಎಂದು ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಶ್ಲಾಘನೆ ವ್ಯಕ್ತಪಡಿಸಿದರು.

ಕುಂಬಾರಕೊಪ್ಪಲಿನಲ್ಲಿ ಶ್ರೀ ಮಹದೇಶ್ವರಸ್ವಾಮಿ ಜಾತ್ರೆ ಪ್ರಯುಕ್ತ ಹಮ್ಮಿಕೊಂಡಿರುವ ಕಬಡ್ಡಿ ಪಂದ್ಯಾವಳಿಯ ಉದ್ಘಾಟನಾ ಸಮಾರಂಭದಲ್ಲಿ ಟಾಸ್ ಹಾಕುವ ಮೂಲಕ ಮೈಸೂರು ಮತ್ತು ಯಾದಗಿರಿ ತಂಡಗಳ ನಡುವಿನ ಪಂದ್ಯಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜಾತ್ರೆಯ ಪ್ರಯುಕ್ತ ಕಳೆದ 30ಕ್ಕೂ ಹೆಚ್ಚು ವರ್ಷಗಳಿಂದ ಕಬಡ್ಡಿ ಪಂದ್ಯಾವಳಿ ಏರ್ಪಡಿಸುತ್ತಿರುವುದು ಶ್ಲಾಘನೀಯ. ಶಾಸಕರಾಗಿ ಕೆಂಪೀರೇಗೌಡರು ಇಲ್ಲಿನ ಕಬಡ್ಡಿ ಪಂದ್ಯಾವಳಿಗೆ ಭೇಟಿ ನೀಡಿದ್ದರು. ಅಂದಿನಿಂದ ನಿರಂತರವಾಗಿ ಕುಂಬಾರಕೊಪ್ಪಲಿನ ಮಾರುತಿ ಕಬಡ್ಡಿ ಕ್ರೀಡಾ ಸಂಸ್ಥೆ ಕಬಡ್ಡಿಗೆ ಪ್ರೋತ್ಸಾಹ ನೀಡುತ್ತಾ ಸಾಗಿದೆ. ಪ್ರಸ್ತುತ ರಾಜ್ಯ ಮಟ್ಟದಲ್ಲಿ ಕಬಡ್ಡಿ ಪಂದ್ಯಾವಳಿ ನಡೆಸಲಾಗುತ್ತಿದ್ದು, ಇದನ್ನು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲೂ ಆಯೋಜಿಸುವ ಸಂದರ್ಭವೂ ಒದಗಿ ಬರಲಿ ಎಂದು ಆಶಯ ವ್ಯಕ್ತಪಡಿಸಿದರು. ಈ ಬಾರಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ತಂಡಗಳು ಪಾಲ್ಗೊಂಡಿರುವುದು ವಿಶೇಷ. ನಮ್ಮಲ್ಲಿ ಇತ್ತೀಚಿನ ದಿನಗಳಲ್ಲಿ ಕಬಡ್ಡಿ ಮತ್ತೆ ಹೆಸರುವಾಸಿಯಾಗುತ್ತಿದ್ದು, ಪಂದ್ಯಾವಳಿಯಲ್ಲಿ ಭಾಗವಹಿಸಿರುವ ಕ್ರೀಡಾಪಟುಗಳು ಸೋಲು ಮತ್ತು ಗೆಲುವನ್ನು ಸಮಾನವಾಗಿ ಸ್ವೀಕರಿಸಿ, ಪ್ರೀತಿ-ವಿಶ್ವಾಸ ಗಳಿಸುವ ಇಂತಹ ಸುವರ್ಣಾವಕಾಶ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕ ಜಿ.ಟಿ.ದೇವೇಗೌಡರು ಸಲಹೆ ನೀಡಿದರು.

ಎರಡನೇ ಪತ್ನಿ ವಿವರ ಬಚ್ಚಿಟ್ಟ ಆರೋಪ: ಹೆಚ್‌ಡಿಕೆ ವಿರುದ್ಧದ ದೂರು ವಜಾಗೊಳಿಸಿದ ನ್ಯಾಯಾಲಯ

ಬೆಂಗಳೂರು: ಚನ್ನಪಟ್ಟಣ ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದ ಎಚ್.ಡಿ.ಕುಮಾರಸ್ವಾಮಿ ಅವರು, ಚುನಾವಣೆ ಸಮಯದಲ್ಲಿ ಪ್ರಮಾಣ ಪತ್ರ ಸಲ್ಲಿಸುವಾಗ ತಮ್ಮ ಎರಡನೇ ಪತ್ನಿ ಹಾಗೂ ಮಗಳ ವಿವರ ಬಚ್ಚಿಟ್ಟಿದ್ದಾರೆ' ಎಂದು ಆರೋಪಿಸಲಾಗಿದ್ದ ಖಾಸಗಿ ದೂರನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಜಾಗೊಳಿಸಿದೆ.

ಈ ಸಂಬಂಧ, 'ವಿಶ್ವ ಕನ್ನಡ ಸಮಾಜ'ದ ಸಂಸ್ಥಾಪಕ ಎಸ್.ಆನಂದ ಸಲ್ಲಿಸಿದ್ದ ಖಾಸಗಿ ದೂರಿನ ವಿಚಾರಣೆ ನಡೆಸಿದ, ಶಾಸಕರು, ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಜೆ.ಪ್ರೀತ್; 'ದೂರುದಾರರ ಆರೋಪಗಳಿಗೆ ಆಧಾರವಿಲ್ಲ ಎಂದು ಹೇಳಿದ್ದಾರೆ.



ದೂರುದಾರರು ತಮ್ಮ ಆರೋಪಗಳನ್ನು ಸಾಬೀತುಪಡಿಸುವಂತಹ ಒಂದೇ ಒಂದು ತುಣುಕು ದಾಖಲೆಯನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಹೀಗಾಗಿ, ಅವರು ತಮ್ಮ ಆರೋಪ ಸಾಬೀತುಪಡಿಸುವಲ್ಲಿ ವಿಫಲವಾಗಿದ್ದಾರೆ. ಹೀಗಾಗಿ, ಐಪಿಸಿ ಕಲಂ 181ರ ಅಡಿಯಲ್ಲಿ ಕುಮಾರಸ್ವಾಮಿ ಅವರು ಯಾವುದೇ ಅಪರಾಧ ಎಸಗಿಲ್ಲ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ದೂರಿನಲ್ಲಿ ಏನಿತ್ತು: ಕುಮಾರಸ್ವಾಮಿ ಅವರು 2018ರ ಮೇನಲ್ಲಿ ನಡೆದಿದ್ದ ವಿಧಾನಸಭೆ ಚುನಾವಣೆಯಲ್ಲಿ ಚನ್ನಪಟ್ಟಣ ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದರು. ನಾಮಪತ್ರ ಸಲ್ಲಿಕೆ ವೇಳೆ ಪ್ರಮಾಣಪತ್ರದಲ್ಲಿ ತಮ್ಮ ಎರಡನೇ ಪತ್ನಿ ರಾಧಿಕಾ ಕುಮಾರಸ್ವಾಮಿ ಮತ್ತು ಪುತ್ರಿ ಶಮಿಕಾ ಕುಮಾರಸ್ವಾಮಿ ಬಗ್ಗೆ ಚುನಾವಣಾ ಆಯೋಗಕ್ಕೆ ಸುಳ್ಳು ಮಾಹಿತಿ ನೀಡಿದ್ದಾರೆ. ಇದು ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 181ರ (ಪ್ರಮಾಣ ಪತ್ರ ಸಲ್ಲಿಕೆಯಲ್ಲಿ ಸುಳ್ಳು ಹೇಳಿಕೆ) ಮತ್ತು ಜನಪ್ರತಿನಿಧಿ ಕಾಯ್ದೆ-1951ರ ಕಲಂ 125ಎ (ತಪ್ಪು ಮಾಹಿತಿ ಒದಗಿಸುವುದು) ಅಡಿಯಲ್ಲಿನ ಅಪರಾಧವಾಗಿದೆ' ಎಂದು ದೂರಿನಲ್ಲಿ ಆರೋಪಿಸಲಾಗಿತ್ತು.

ವಿಜಯೇಂದ್ರಗೆ ಬೆಂಗಾವಲು ವಾಹನ, ಪೊಲೀಸ್ ಭದ್ರತೆ ಕಲ್ಪಿಸಿದ ಸರ್ಕಾರ



ಬೆಂಗಳೂರು: ಬಿಜೆಪಿ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವ ಶಿಕಾರಿಪುರದ ಶಾಸಕ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರಗೆ ರಾಜ್ಯ ಸರ್ಕಾರ ಬೆಂಗಾವಲು ವಾಹನ ಮತ್ತು ಪೊಲೀಸ್ ಭದ್ರತೆ ಒದಗಿಸಿದೆ. ಭಾನುವಾರದಿಂದ ಮೂವರು ಪೊಲೀಸ್ ಸಿಬ್ಬಂದಿ ಇರುವ ಬೆಂಗಾವಲು ವಾಹನ ಸೌಲಭ್ಯವನ್ನು ಸರ್ಕಾರ ಕಲ್ಪಿಸಿದೆ. ಪದಗ್ರಹಣ ಬಳಿಕ ಅಧಿಕೃತವಾಗಿ ಸಿಬ್ಬಂದಿ ಸಹಿತ ಬೆಂಗಾವಲು ವಾಹನವನ್ನು ಸರ್ಕಾರ ಒದಗಿಸಲಿದೆ. ಬುಧವಾರ ಪಕ್ಷದ ಕಚೇರಿಯಲ್ಲಿ ವಿಜಯೇಂದ್ರ ಪದಗ್ರಹಣ ಕಾರ್ಯಕ್ರಮ ನಡೆಯಲಿದೆ.

ಡಿ.ಎಂ. ದಾಕ್ಷಾಯಿಣಿಗೆ ಚಿನ್ನದ ಪದಕ



ಮೈಸೂರು,ನ.13(ಆರ್‌ಕೆ)–ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಡಿ.ಎಂ.ದಾಕ್ಷಾಯಿಣಿ ಅವರು ಹಿಂದೂಸ್ತಾನಿ ಸಂಗೀತ ಗಾಯನ ಸ್ನಾತಕ ಪದವಿಯಲ್ಲಿ ಹೆಚ್ಚು ಅಂಕ ಗಳಿಸಿ ಚಿನ್ನದ ಪದಕ ಪಡೆದಿದ್ದಾರೆ. ಇತ್ತೀಚೆಗೆ ನಡೆದ 6ನೇ ವಾರ್ಷಿಕ ಘಟಿಕೋತ್ಸವದಲ್ಲಿ ರಾಜ್ಯಪಾಲರು ದಾಕ್ಷಾಯಿಣಿ ಅವರಿಗೆ ಲೇಟ್ ವಿಶಾಲಕ್ಷಮ್ಮ ಅಮೃತೇಶ್ವರ ದತ್ತಿ ಚಿನ್ನದ ಪದಕ ನೀಡಿದರು.

ಪಂಚ ರಾಜ್ಯ ಚುನಾವಣೆ ಬಳಿಕ ಕೆಪಿಸಿಸಿಯಲ್ಲಿ ಮಹತ್ವದ ಬದಲಾವಣೆ

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿಕೆ

ಬೆಂಗಳೂರು,ನ.13–ಐದು ರಾಜ್ಯಗಳ ಚುನಾವಣೆ ನಂತರ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (KPCC)ಯಲ್ಲಿ ಬದಲಾವಣೆಗಳನ್ನು ಮಾಡಲಾಗುವುದು ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.

ಲೋಕಸಭೆ ಚುನಾವಣೆಗೂ ಮುನ್ನ ಪಕ್ಷದ ಕಾರ್ಯಾಧ್ಯಕ್ಷರು, ಜಿಲ್ಲಾಧ್ಯಕ್ಷರು ಹಾಗೂ ಇತರ ಪದಾಧಿಕಾರಿಗಳನ್ನು ಬದಲಿಸಲು ಪಕ್ಷ ಚಿಂತನೆ ನಡೆಸಿದೆ ಎಂದು ಅವರು ಹೇಳಿದ್ದಾರೆ. ಪಕ್ಷದ ಕರ್ನಾಟಕ ಘಟಕದ ಅಧ್ಯಕ್ಷರಾಗಿ ಬಿವೈ ವಿಜಯೇಂದ್ರ ಅವರನ್ನು ಬಿಜೆಪಿ ನೇಮಕ ಮಾಡಿದ ಬೆನ್ನಲ್ಲೇ, ಕಾಂಗ್ರೆಸ್ ಕೂಡ ಪಕ್ಷದ ರಾಜ್ಯ ಘಟಕದ ಪುನಶ್ಚೇತನಕ್ಕೆ ಮುಂದಾಗಿದೆ.

ಲೋಕಸಭೆ ಚುನಾವಣೆವರೆಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರಿಯಲಿದ್ದಾರೆ ಎಂದು ವಿಧಾನಸಭೆ ಚುನಾವಣೆ ಫಲಿತಾಂಶದ ಬಳಿಕ ಕಾಂಗ್ರೆಸ್ ಹೈಕಮಾಂಡ್ ಘೋಷಿಸಿತ್ತು. ಆದರೆ, ಸಿದ್ದರಾಮಯ್ಯ ಸಂಪುಟದಲ್ಲಿ ಮೂವರು ಸಚಿವರಾಗಿರುವ ಕಾರಣ ಕೆಪಿಸಿಸಿ ಕಾರ್ಯಾಧ್ಯಕ್ಷ ಹುದ್ದೆಯ ಜವಾಬ್ದಾರಿಯಿಂದ ಮುಕ್ತಗೊಳಿಸಬೇಕು ಎಂದು ಅವರು ಒತ್ತಾಯಿಸುತ್ತಿದ್ದಾರೆ. ಈ ಕುರಿತು ಮಾತನಾಡಿದ ಸತೀಶ್ ಜಾರಕಿಹೊಳಿ, ಐದು ರಾಜ್ಯಗಳ ಚುನಾವಣೆ ನಂತರ ಪಕ್ಷದ ಹೈಕಮಾಂಡ್ ಈ ಬಗ್ಗೆ ನಿರ್ಧಾರ ಕೈಗೊಳ್ಳಲಿದೆ ಎಂದಿದ್ದಾರೆ.



ನಾವು ಈಗ ಸಚಿವರಾಗಿರುವ ಕಾರಣ ನಮ್ಮನ್ನು ಬಿಡುಗಡೆ ಮಾಡುವಂತೆ ಹೈಕಮಾಂಡ್‌ಗೆ ಕೇಳಿದ್ದೇವೆ. ನಾವು ಈಗಾಗಲೇ ಶಿಫಾರಸುಗಳನ್ನು ಕಳುಹಿಸಿದ್ದೇವೆ. ಐದು ರಾಜ್ಯಗಳ ಚುನಾವಣೆಯ ನಂತರ ಪಕ್ಷವು ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಹೇಳಿದರು.

ಪ್ರಸ್ತುತ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಸಚಿವರಾದ ರಾಮಲಿಂಗಾರೆಡ್ಡಿ ಸತೀಶ್ ಜಾರಕಿಹೊಳಿ, ಈಶ್ವರ ಖಂಡ್ರೆ ಎಂಎಲ್‌ಸಿ ಸಲೀಂ ಅಹಮದ್ ಹಾಗೂ ಮಾಜಿ ಸಂಸದ ಬಿ.ಎನ್.ಚಂದ್ರಪ್ಪ ಕಾರ್ಯನಿರ್ವಹಿಸುತ್ತಿದ್ದಾರೆ. ಕೆಪಿಸಿಸಿ ಕಾರ್ಯಾಧ್ಯಕ್ಷರಲ್ಲದೆ, 20 ಜಿಲ್ಲಾಧ್ಯಕ್ಷರ ಸ್ಥಾನವನ್ನು ನಿರ್ಣಾಯಕ ಲೋಕಸಭೆ ಚುನಾವಣೆಗೂ ಮುನ್ನ ಪದಾಧಿಕಾರಿಗಳ ಬದಲಾಯಿಸಲು ಪಕ್ಷ ಮುಂದಾಗಿದೆ. ಮೇ ತಿಂಗಳಲ್ಲಿ ಚುನಾವಣೆ ಫಲಿತಾಂಶ ಬಂದ ಕೂಡಲೇ ಪಕ್ಷ ಬದಲಾವಣೆ ಮಾಡಲು ಕೆಪಿಸಿಸಿ ಅಧ್ಯಕ್ಷ ಡಿಕೆಶಿವಕುಮಾರ್ ಬಯಸಿದ್ದರೂ ಅಭ್ಯರ್ಥಿಗಳ ಬಗ್ಗೆ ಒಮ್ಮತ ಮೂಡದ ಕಾರಣ ವಿಳಂಬವಾಗಿದೆ.

ಸಿಎಂ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರು ತಮ್ಮ ಬೆಂಬಲಿಗರಿಗೆ ನಿರ್ಣಾಯಕ ಹುದ್ದೆಗಳನ್ನು ನೀಡಲು ಉತ್ಸುಕರಾಗಿದ್ದು, ಡಿಸೆಂಬರ್ 15ರ ಮೊದಲು ನೇಮಕಾತಿಯನ್ನು ಅಂತಿಮಗೊಳಿಸಲು ಹೈಕಮಾಂಡ್ ಮಧ್ಯಪ್ರವೇಶಿಸುವ ನಿರೀಕ್ಷೆಯಿದೆ.

ಇದೇ ವೇಳೆ ಸತೀಶ್ ಜಾರಕಿಹೊಳಿ ಅವರು ಕೆಪಿಸಿಸಿ ಕಾರ್ಯಾಧ್ಯಕ್ಷರು ಹಾಗೂ ಬೆಳಗಾವಿ ಜಿಲ್ಲಾಧ್ಯಕ್ಷರ ಹೆಸರನ್ನು ಶಿಫಾರಸು ಮಾಡಿದ್ದಾರೆ. ಅವರಿಗೆ ಸಿದ್ದರಾಮಯ್ಯ ಬೆಂಬಲ ನೀಡಿದ್ದು, ಪರಿಸ್ಥಿತಿ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿದೆ. ಇತ್ತೀಚೆಗಷ್ಟೇ ಶಿವಕುಮಾರ್ ಅವರು ಸತೀಶ್ ಜಾರಕಿಹೊಳಿ ಅವರನ್ನು ಅವರ ನಿವಾಸದಲ್ಲಿ ಭೇಟಿಯಾಗಿ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ.

ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನ: ಸಂಭಾವ್ಯರು ಯಾರೆಲ್ಲ: ವರದಿಗಳ ಪ್ರಕಾರ, ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನಕ್ಕೆ ಮಾಜಿ ಸಚಿವರಾದ ವಿನಯ್‌ಕುಮಾರ್ ಸೊರಕೆ, ವಿನಯ್ ಕುಲಕರ್ಣಿ, ಜಿ.ಸಿ.ಚಂದ್ರಶೇಖರ್ ಮತ್ತು ಮಾಜಿ ಶಾಸಕಿ ಅಂಜಲಿ ನಿಂಬಾಳ್ಕರ್ ಹೆಸರು ಕೇಳಿಬರುತ್ತಿದೆ. ಇದೇ ವೇಳೆ ಪಕ್ಷವು 28 ಲೋಕಸಭಾ ಸ್ಥಾನಗಳಿಗೆ ಸಚಿವರನ್ನು ವೀಕ್ಷಕರನ್ನಾಗಿ ನೇಮಿಸಿದ್ದು, ರಾಜ್ಯದ ಪ್ರತಿ ಕ್ಷೇತ್ರದಿಂದ ಮೂರು ಹೆಸರುಗಳ ಪಟ್ಟಿ ಸಲ್ಲಿಸಲು ಸೂಚಿಸಿದೆ.

ಕೆಂಪಿಸಿದ್ದನಹುಂಡಿ ಪ್ರತ್ಯೇಕ ಕಂದಾಯ ಗ್ರಾಮ

ಅಗತ್ಯ ದಾಖಲೆಗಳನ್ನ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ರಾಜೇಂದ್ರ ಸೂಚನೆ

ನಂಜನಗೂಡು, ನ13– ತಾಲೂಕಿನ ಕೆಂಪಿಸಿದ್ದನಹುಂಡಿಯನ್ನು ಪ್ರತ್ಯೇಕ ಕಂದಾಯ ಗ್ರಾಮವನ್ನಾಗಿ ಘೋಷಿಸಲು ಅಗತ್ಯ ಸರ್ವೇ ಕಾರ್ಯ ನಡೆಸಿ ದಾಖಲೆಗಳನ್ನು ಸಿದ್ಧಪಡಿಸುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಕಂದಾಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೆಂಪಿಸಿದ್ದನಹುಂಡಿ ಗ್ರಾಮದ ಸಮುದಾಯ ಭವನದಲ್ಲಿ ಸೋಮವಾರ ಗ್ರಾಮಸಭೆ ನಡೆಸಿ ಗ್ರಾಮಸ್ಥರ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಪ್ರತ್ಯೇಕ ಕಂದಾಯ ಗ್ರಾಮವಾಗಿಸಲು ಸುಮಾರು 250 ಎಕರೆಗಳು ಬೇಕಾಗಿರುವುದರಿಂದ ಮೂಲ ಕಂದಾಯ ಗ್ರಾಮವಾದ ಹೆಜ್ಜಿಗೆ, ತೊರೆಮಾವು ಗ್ರಾಮಗಳಲ್ಲಿ ಸೇರ್ಪಡೆಗೊಂಡಿರುವ ಗ್ರಾಮದ ಜಮೀನುಗಳನ್ನು ಸರ್ವೇ ನಡೆಸಿ ಆ ಗ್ರಾಮದಿಂದ ಕೈಬಿಟ್ಟು ಪ್ರತ್ಯೇಕ ಗ್ರಾಮವನ್ನಾಗಿ ನಿರ್ಮಿಸಲು ಉದ್ದೇಶಿಸಿರುವ ಜಮೀನುಗಳ ಪಟ್ಟಿ ಮಾಡಿ, ಸೂಚನಾ ಫಲಕದಲ್ಲಿ ಪ್ರಕಟಿಸಿ ಆಕ್ಷೇಪಣೆ ಸಲ್ಲಿಸಲು ಕಾಲಮಿತಿ ನೀಡಬೇಕು. ಕಂದಾಯ ಗ್ರಾಮವನ್ನು ನಿರ್ಮಿಸಲು ಅಗತ್ಯ ದಾಖಲೆ ಸಿದ್ಧಪಡಿಸಿ ಎಂದು ತಹಶೀಲ್ದಾರ್ ಶಿವಕುಮಾರ್ ಕಾಸ್ನೂರು ಅವರಿಗೆ ಆದೇಶಿಸಿದರು.

ಇದಕ್ಕೂ ಮೊದಲು ಸಭೆಯಲ್ಲಿ ಗ್ರಾಮ ಅಧ್ಯಕ್ಷ ಕೆ.ಎಸ್. ರವಿ ಮಾತನಾಡಿ, ಕೆಂಪಿಸಿದ್ದನಹುಂಡಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಸೇರಿದಂತೆ ಅನೇಕ ಕಚೇರಿಗಳ ಕಟ್ಟಡ ಸ್ಥಾಪನೆಯಾಗಿದ್ದರೂ ಕಂದಾಯ ಗ್ರಾಮವನ್ನಾಗಿಸದ ಕಾರಣ



ಕಂದಾಯ ಪಟ್ಟಿಯ ನಕಾಶೆಯಲ್ಲಿ ಗ್ರಾಮದ ಹೆಸರಿಲ್ಲ. ಕೆಂಪಿಸಿದ್ದನಹುಂಡಿ ಗ್ರಾಮವನ್ನು ಹೆಜ್ಜಿಗೆ–ತೊರೆಮಾವು ಗ್ರಾಮಗಳ ಸರ್ವೇ ನಂಬರ್‌ಗಳಲ್ಲಿ ಸೇರಿಸಲಾಗಿದೆ. ಕಳೆದ 15 ವರ್ಷಗಳಿಂದ ಕೆಂಪಿಸಿದ್ದನಹುಂಡಿಯನ್ನು ಪ್ರತ್ಯೇಕ ಕಂದಾಯ ಗ್ರಾಮವನ್ನಾಗಿಸುವಂತೆ ಸಿದ್ದರಾಮಯ್ಯ ಕಳೆದ ಬಾರಿ ಮುಖ್ಯಮಂತ್ರಿಯಾಗಿದ್ದಾಗಿನಿಂದಲೂ ಮನವಿ ಮಾಡಿದ್ದರೂ ಅದು ಕನಸಾಗಿಯೇ ಉಳಿದಿದೆ. ಇದರಿಂದ ಗ್ರಾಮಸ್ಥರಿಗೆ ಅಗತ್ಯ ಸರ್ಕಾರಿ ಸೌಲಭ್ಯಗಳನ್ನು ಪಡೆದುಕೊಳ್ಳಲು ಕಷ್ಟವಾಗಿದೆ. ಜತೆಗೆ ಕೆಂಪಿಸಿದ್ದನಹುಂಡಿ ಗ್ರಾಮಸ್ಥರ ಜಮೀನುಗಳನ್ನು ಕಾರ್ಖಾನೆ ನಿರ್ಮಾಣಕ್ಕೆ ನೀಡಿ ಭೂಮಿ ಕಳೆದುಕೊಂಡಿದ್ದಾರೆ. ಆದರೂ ಕಾರ್ಖಾನೆಗಳು ಗ್ರಾಮಕ್ಕೆ ಯಾವುದೇ ಸಿಎಸ್‌ಆರ್ ಅನುದಾನ ನೀಡದೇ ಸೌಲಭ್ಯಗಳಿಂದ ವಂಚಿಸುತ್ತಿವೆ. ನಮಗೆ ಸವಲತ್ತು ಪಡೆದು ಕೊಳ್ಳಲು ಕಂದಾಯ ಗ್ರಾಮವನ್ನಾಗಿಸಬೇಕೆಂದು ಮನವಿ ಮಾಡಿದರು.

ನಂತರ ಜಿಲ್ಲಾಧಿಕಾರಿ ಮಾತನಾಡಿ, ಗ್ರಾಮದಲ್ಲಿ ಈಗಾಗಲೇ ಕೃಷಿ ಜಮೀನುಗಳಲ್ಲಿ ಮನೆ ನಿರ್ಮಿಸಿಕೊಂಡು ಬಹಳ ವರ್ಷಗಳಿಂದ ವಾಸವಾಗಿರುವ ಬಡವರಿಗೆ ಹಕ್ಕುಪತ್ರಗಳನ್ನು ವಿತರಿಸಲು ವೈಯಕ್ತಿಕ ಸರ್ವೆ ನಡೆಸಬೇಕಿದೆ. ಅಲ್ಲದೆ ಗ್ರಾಮದಲ್ಲಿ ಸ್ಮಶಾನ ಸೌಲಭ್ಯವಿಲ್ಲದ ಕಾರಣ ಅಗತ್ಯ ಸರ್ಕಾರಿ ಜಮೀನುಗಳನ್ನು ಗುರ್ತಿಸಿ ಒತ್ತುವರಿಯಾಗಿದ್ದರೆ ತೆರವು ಮಾಡಿ ಗ್ರಾಮದ ಅನುಕೂಲಕ್ಕೆ ಹಾಗೂ ಸ್ಮಶಾನಕ್ಕೆ ಜಾಗ ಮಂಜೂರು ಮಾಡಿಕೊಡಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

> ನಂಜನಗೂಡಿನಲ್ಲಿದ್ದ 2 ಬಾರ್‌ಗಳನ್ನು ಕೆಂಪಿಸಿದ್ದನಹುಂಡಿ ಗ್ರಾಮದ ಸಮೀಪಕ್ಕೆ ವರ್ಗಾಯಿಸಿರುವುದರಿಂದ ಕೃಷಿ ಕಾರ್ಮಿಕರು ಕುಡಿತದ ಚಟಕ್ಕೆ ಬಲಿಯಾಗುತ್ತಿದ್ದಾರೆ. ಜತೆಗೆ ಕುಡುಕರ ಹಾವಳಿಯಿಂದ ಮಹಿಳೆಯರು, ಮಕ್ಕಳು ಓಡಾಡಲು ತೊಂದರೆಯಾಗುತ್ತಿದೆ. ಆದ್ದರಿಂದ ಬಾರ್‌ಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು.
>
> –ಕೆ.ಎಸ್.ಸಿದ್ದರಾಜು,
> ಕೆಂಪಿಸಿದ್ದನಹುಂಡಿ ಗ್ರಾಮದ ಮುಖಂಡ

ನಂತರ ರೈತಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ ಬರದ ಬಗ್ಗೆ ಪರಿಶೀಲನೆ ನಡೆಸಿ, ಜನ–ಜಾನುವಾರುಗಳಿಗೆ ಕುಡಿಯುವ ನೀರು, ಮೇವಿನ ಕೊರತೆಯಾಗದಂತೆ ಕ್ರಮವಹಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಇದೇ ವೇಳೆ ಉಪವಿಭಾಗಾಧಿಕಾರಿ ರಕ್ಷಿತ್, ಆರ್‌ಐ ಸರ್ವೇಶ್, ಕುರುಬರ ಸಂಘದ ತಾಲೂಕು ಅಧ್ಯಕ್ಷ ಕೆಂಪಣ್ಣ, ಗ್ರಾಪಂ ಸದಸ್ಯರಾದ ನಂಜಯ್ಯ, ಮುಖಂಡರಾದ ಕೆ.ಎನ್.ನಂಜಯ್ಯ, ಕೆ.ಸಿದ್ದು, ಮಹದೇವು, ರವಿ, ಸಿದ್ದರಾಜು, ನೀಲಿಸಿದ್ದು, ತಾಲೂಕು ಸರ್ವೆ ದಾಖಲೆಗಳ ಸಹಾಯಕ ನಿರ್ದೇಶಕ ಚಂದ್ರಶೇಖರ್, ತೋಟಗಾರಿಕಾ ಸಹಾಯಕ ನಿರ್ದೇಶಕ ಚಂದ್ರು, ಪಶು ಇಲಾಖೆ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ್, ಹಲವಾರು ಪ್ರಮುಖರು ಇದ್ದರು.

ರಾಮಾಯಣದಲ್ಲಿ ಸಂಬಂಧಗಳ ಮೌಲ್ಯ ಅಡಕ



ತಿ.ನರಸೀಪುರ: ಆದಿಕವಿ ಮಹರ್ಷಿ ವಾಲ್ಮೀಕಿ ಅವರು ರಚಿಸಿರುವ ರಾಮಾಯಣ ಗ್ರಂಥದಲ್ಲಿ ಅಡಕವಾಗಿರುವಂತಹ ಪಿತೃವಾಕ್ಯ ಪರಿಪಾಲನೆ ಹಾಗೂ ಸೋದರ ಬಾಂಧವ್ಯ ಸಂಬಂಧಗಳ ಮೌಲ್ಯಗಳನ್ನು ಇಂದಿನ ಯುವ ಪೀಳಿಗೆ ಅಳವಡಿಸಿಕೊಳ್ಳಬೇಕು ಎಂದು ರಾಜ್ಯ ಜೆಡಿಎಸ್ ಮಾಧ್ಯಮ ವಕ್ತಾರ ಹಾಗೂ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಹೇಳಿದರು.

ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತಾಯೂರು ಗ್ರಾಮದಲ್ಲಿ ಮಹರ್ಷಿ ವಾಲ್ಮೀಕಿ ನಾಯಕ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಲ್ಲಿಯವರೆಗೆ ಭೂಮಿಯಲ್ಲಿ ಪರ್ವತ, ಸಮುದ್ರ ನದಿಗಳಿರುತ್ತವೆಯೋ ಅಲ್ಲಿಯವರೆಗೂ ರಾಮಾಯಣ ಕಾವ್ಯ ಲೋಕದಲ್ಲಿ ಪ್ರಚಲಿತದಲ್ಲಿರುತ್ತದೆ. ಆದ್ದರಿಂದ ಸೂರ್ಯಚಂದ್ರ ಇರುವವರೆಗೂ ರಾಮಾಯಣ ಮಹಾಕಾವ್ಯ ಜಗತ್ತಿನಲ್ಲಿ ಅಮರ ಕಾವ್ಯವಾಗಿರುತ್ತದೆ ಎಂದರು.

ರಾಮಾಯಣ ದೇಶದ ಅತಿದೊಡ್ಡ ಮಹಾಕಾವ್ಯವಾಗಿದ್ದು, ಈ ಕಾವ್ಯದಲ್ಲಿ ಭಾರತದ ಜೀವನ ಚರಿತ್ರೆ ಸಂಸ್ಕೃತಿ ಅಡಗಿದೆ ವಾಲ್ಮೀಕಿ ಅವರು ತಪಸ್ಸಿನ ಶಕ್ತಿಯಿಂದ ಮಹಾಕಾವ್ಯ ರಚಿಸಿದ್ದಾರೆ. ರಾಮಾಯಣ ಪ್ರಪಂಚದಲ್ಲೇ ಶ್ರೇಷ್ಠ ಕಾವ್ಯ ಆಗಿದೆ ಎಂದು ಹೇಳಿದರು.

ಮಹರ್ಷಿ ವಾಲ್ಮೀಕಿ ಸಂಘದ ಅಧ್ಯಕ್ಷ ರಮೇಶ್‌ನಾಯಕ, ತಮ್ಮಯ್ಯನಾಯಕ, ರೇವಣ್ಣ, ಗ್ರಾಪಂ ಮಾಜಿ ಅಧ್ಯಕ್ಷ ಟಿ.ಎಂ. ಬಸವರಾಜು, ಟಿ.ಎಂ.ರಾಜುನಾಯಕ್ ಗ್ರಾಮಸ್ಥರು, ಯಜಮಾನರು ಹಾಜರಿದ್ದರು.



ನಂಜನಗೂಡು ತಾಲೂಕಿನ ಶ್ರೀ ಕ್ಷೇತ್ರ ಸುತ್ತೂರು ಮಠಕ್ಕೆ ದೀಪಾವಳಿ ಅಮಾವಾಸ್ಯೆ ಪ್ರಯುಕ್ತ ಸೋಮವಾರ ಭೇಟಿ ನೀಡಿದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ್ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು.

ಬಿ.ಆರ್.ಮಂಜುಳಾಗೆ ಪಿಹೆಚ್.ಡಿ



ಮೈಸೂರು: ಡಾ. ಎಸ್.ಡಿ. ಶಶಿಕಲಾ ಅವರ ಮಾರ್ಗದರ್ಶನದಲ್ಲಿ ಬಿ.ಆರ್. ಮಂಜುಳಾ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸರ್ಕಾರಿ ಭೂಮಿ ಒತ್ತುವರಿ ತೆರವಿಗೆ ಒತ್ತಾಯ



ಹುಣಸೂರು: ಗೋವಿಂದನಹಳ್ಳಿ ಸರ್ವೆ ನಂಬರ್ 21ರಲ್ಲಿ ನಾಗರಿಕ ಸೌಕರ್ಯಕ್ಕೆ ಮೀಸಲಿಟ್ಟಿರುವ ಕೋಟ್ಯಾಂತರ ರೂ. ಬೆಲೆ ಬಾಳುವ 52 ಎಕರೆ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿರುವುದನ್ನು ತೆರವುಗೊಳಿಸಿ ಸರ್ಕಾರ ವಶಕ್ಕೆ ತೆಗೆದುಕೊಳ್ಳಬೇಕು ಎಂದು ದಲಿತ ಚಳವಳಿ ನವನಿರ್ಮಾಣ ವೇದಿಕೆ, ಬುಡಕಟ್ಟು ಕೃಷಿಕರ ಸಂಘ, ಆದಿಜಾಂಬವ ಸಂಘ ಮತ್ತು ಡೀಡ್ ಸಂಸ್ಥೆ ಒತ್ತಾಯ ಪಡಿಸಿದವು.

ನಗರದ ಪತ್ರಕರ್ತರ ಭವನದಲ್ಲಿ ಸೋಮವಾರ ನಡೆದ ಜಂಟಿಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದಲಿತ ಚಳವಳಿ ನವನಿರ್ಮಾಣ ವೇದಿಕೆಯ ಮುಖ್ಯಸ್ಥ ಹರಿಹರ ಆನಂದಸ್ವಾಮಿ, ಕಾಡಂಚಿನ ಪ್ರದೇಶಗಳಲ್ಲಿ ಕೃಷಿ ಮಾಡಿ ಬದುಕುತ್ತಿರುವ ಹುಣಸೂರು ಉಪವಿಭಾಗದಲ್ಲಿನ 5 ಸಾವಿರ ಬಡಕುಟುಂಬಗಳಿಗೆ ಸಾಗುವಳಿ ವಿತರಿಸಬೇಕು. ಉಪವಿಭಾಗದ ನಾಲ್ಕು ತಾಲೂಕುಗಳಲ್ಲಿ ತಲೆ ಎತ್ತಿರುವ ನೂರಾರು ಅನಧಿಕೃತ ಬಡಾವಣೆಗಳನ್ನು ಶುಲ್ಕ ವಿಧಿಸಿ ಅಧಿಕೃತಗೊಳಿಸಬೇಕು ಎಂದು ಒತ್ತಾಯಿಸಿದರು.

ಹುಣಸೂರಿನ ಅಂಬೇಡ್ಕರ್ ಭವನದ ಮುಂದೆ ಅಂಬೇಡ್ಕರ್ ಪುತ್ಥಳಿ ನಿರ್ಮಿಸಬೇಕು. ಚಿಕ್ಕಹುಣಸೂರಿನ ಕೆರೆಯ ಮಧ್ಯಭಾಗದಲ್ಲಿ ಬುದ್ಧನ ಪ್ರತಿಮೆ ಸ್ಥಾಪಿಸಿ, ಬೌದ್ಧ ಧರ್ಮದ ಹಿರಿಮೆಯನ್ನು ಮೆರೆಯಬೇಕು ಹಾಗೂ ಹುಣಸೂರನ್ನು ಜಿಲ್ಲೆಯಾಗಿ ಘೋಷಿಸಬೇಕೆಂದು ಆಗ್ರಹಿಸಿದರು.

ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಪಿ.ಕೆ.ರಾಮು ಮಾತನಾಡಿ, ಪರಿಶಿಷ್ಟ ಹಾಗೂ ಪಂಗಡದ ಆದಿವಾಸಿ ಸಮುದಾಯಗಳಿಗೆ ಪ್ರತ್ಯೇಕ ಒಳಮೀಸಲಾತಿಯನ್ನು ಜಾರಿಗೊಳಿಸಬೇಕು. ಸರ್ಕಾರಗಳು ಬೇರೆ ಬೇರೆ ಸಮುದಾಯಗಳನ್ನು ಪರಿಶಿಷ್ಟರ ಪಟ್ಟಿಗೆ ಸೇರಿಸಲು ಹೊರಟಿರುವುದರಿಂದ ಮೂಲ ಸಮುದಾಯ ಹಾಗೂ ಆದಿವಾಸಿಗಳಿಗೆ ಆಗುವ ಅನ್ಯಾಯವನ್ನು ತಡೆಯಲು ಒಳಮೀಸಲಾತಿ ನೀಡಬೇಕು ಎಂದರು.

ನ.16ರಂದು ಬಿರ್ಸಾಮುಂಡ ಜಯಂತಿ ಪ್ರಯುಕ್ತ ಹುಣಸೂರಿನಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ ಬಿರ್ಸಾಮುಂಡ ಭವನದಿಂದ ಸಂವಿಧಾನ ವೃತ್ತದವರೆಗೆ ಹೈಕೋರ್ಟ್ ಹಾಗೂ ಆದಿವಾಸಿ ಮಾನವ ಸಂಪನ್ಮೂಲ ವರದಿಯನ್ನು ಪ್ರದರ್ಶಿಸುತ್ತ ಪಾದಯಾತ್ರೆ ನಡೆಸಿ ಆಗ್ರಹಿಸಲಾಗುವುದು ಎಂದು ತಿಳಿಸಿದರು.

ಆದಿಜಾಂಬವ ಸಂಘದ ಅಧ್ಯಕ್ಷ ಶಿವಣ್ಣ ಮಾತನಾಡಿ, ನಗರದಲ್ಲಿ ಬಹಳ ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಬಡವರಿಗಾಗಿ ನಿವೇಶನ ಹಂಚಿಕೆ ಕಾರ್ಯವನ್ನು ತುರ್ತಾಗಿ ಕೈಗೊಂಡು 20 ಸಾವಿರ ನಿವೇಶನ ಇಲ್ಲದ ಕಡುಬಡವರಿಗೆ ಹಂಚಿಕೆ ಮಾಡಬೇಕು. ಹುಣಸೂರಿನ ಕೊಳಚೆ ಪ್ರದೇಶ ಎಲ್ಲಾ ಬಡಾವಣೆಗಳಲ್ಲೂ ರಸ್ತೆ ಕಾಮಗಾರಿ, ಗೃಹ ನಿರ್ಮಾಣ ಕಾರ್ಯ ಕೈಗೊಂಡು ಕೊಳಚೆ ನಿವಾಸಿಗಳಿಗೆ ಬದುಕು ನೀಡಲು ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಡೀಡ್ ಸಂಸ್ಥೆ ನಿರ್ದೇಶಕ ಡಾ.ಎಸ್. ಶ್ರೀಕಾಂತ್, ದಲಿತ ಚಳವಳಿ ನವನಿರ್ಮಾಣ ವೇದಿಕೆಯ ದರ್ಶನ್ ಇದ್ದರು.

ಮಲ್ಲಿಕಾರ್ಜುನಸ್ವಾಮಿ ಬೆಟ್ಟ ಹತ್ತಿದ ಸಾವಿರಾರು ಭಕ್ತರು



ಬೆಟ್ಟದಪುರ: ದೀಪಾವಳಿ ಅಮಾವಾಸ್ಯೆ ದಿನವಾದ ಸೋಮವಾರ ಸಾವಿರಾರು ಭಕ್ತರು ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬೆಟ್ಟವನ್ನು ಹತ್ತಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಜನರು ಬೆಟ್ಟದಲ್ಲಿರುವ ಸುಮಾರು 20ಕ್ಕೂ ಹೆಚ್ಚು ಗುಹೆಗಳಿಗೆ ಭೇಟಿ ನೀಡಿ, ಮಾಹಿತಿ ಪಡೆದರು. ದೇವಸ್ಥಾನದ ಪ್ರಧಾನ ಅರ್ಚಕ ಕೃಷ್ಣಪ್ರಸಾದ್ ವಿಶೇಷ ಪೂಜೆ ನೆರವೇರಿಸಿದರು. ರಾತ್ರಿ ಮಲ್ಲಿಕಾರ್ಜುನಸ್ವಾಮಿಯ ಉತ್ಸವ ಮೂರ್ತಿ ಬಳ್ಳಿ ಬಸಪ್ಪನಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಬೆಟ್ಟದಪುರ ಪೊಲೀಸ್ ಠಾಣಾಧಿಕಾರಿ ಆಕಾಶ್ ಎಂ.ಎತ್ತಿನಮನಿ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಬೆಟ್ಟಕ್ಕೆ ಆಗಮಿಸಿದ ಸಾವಿರಾರು ಭಕ್ತರಿಗೆ ಗಾವಡಗೆರೆ ಮಠಾಧ್ಯಕ್ಷರಾದ ಶ್ರೀ ನಟರಾಜ ಸ್ವಾಮೀಜಿ ಹಾಗೂ ಬೆಟ್ಟದಪುರದ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ ನೇತೃತ್ವದಲ್ಲಿ ಅನ್ನದಾನ ಏರ್ಪಡಿಸಲಾಗಿತ್ತು.

ಈ ಸಂದರ್ಭದಲ್ಲಿ ಮುಖಂಡರಾದ ಲಾಲನಹಳ್ಳಿ ಸದಾನಂದ, ಬೆಟ್ಟದಪುರದ ವೀರಶೈವ–ಲಿಂಗಾಯತ ಸಮಾಜದ ಅಧ್ಯಕ್ಷ ಶಿವದೇವ್, ಉಪಾಧ್ಯಕ್ಷ ರುದ್ರೇಶ್ ಬ್ಯಾಟರಿ, ಕಾರ್ಯದರ್ಶಿ ಶಿವು, ಸಮಾಜ ಸೇವಕ ಎಸ್.ಮಲ್ಲೇಶ್, ಬಿಜೆಪಿ ಮುಖಂಡ ರಮೇಶ್, ಡಾ.ಗೌತಮ್, ಶಿಕ್ಷಕರಾದ ಸೋಮಶೇಖರ್, ಚಂದ್ರಶೇಖರ್ ಹಾಜರಿದ್ದರು.

ಗಾವಡಗೆರೆಯಲ್ಲಿ ಕಾಲಭೈರವೇಶ್ವರ ಉತ್ಸವ



ಹಿರೀಕ್ಯಾತನಹಳ್ಳಿ, ನ.13–ಹುಣಸೂರು ತಾಲೂಕಿನ ಗಾವಡಗೆರೆಯಲ್ಲಿ ದೀಪಾವಳಿ ಅಮಾವಾಸ್ಯೆಯ ಪ್ರಯುಕ್ತ ಸೋಮವಾರ ಶ್ರೀ ಕಾಲಭೈರವೇಶ್ವರಸ್ವಾಮಿಯ ಉತ್ಸವ ಅದ್ದೂರಿಯಾಗಿ ನೆರವೇರಿತು.

ಉತ್ಸವದ ಅಂಗವಾಗಿ ಕಾಲಭೈರವೇಶ್ವರಸ್ವಾಮಿಗೆ ಬೆಳಗ್ಗೆ ಅಭಿಷೇಕ ಹೋಮ–ಹವನ, ಪೂಜಾ ಕಾರ್ಯ ನೆರವೇರಿಸಲಾಯಿತು. ಗ್ರಾಮದ ಬಳಿಯ ಕೆರೆ ಅಂಗಳದಿಂದ ವಿಶೇಷವಾಗಿ ಅಲಂಕರಿಸಿದ ಸ್ವಾಮಿಯ ಉತ್ಸವ ಮೂರ್ತಿಯನ್ನು ನೂರಾರು ಮಹಿಳೆಯರು ಕಳಸ ಹೊತ್ತು ಗುಡ್ಡ ಕುಣಿತ, ತಮಟೆ, ಡೊಳ್ಳು ಕುಣಿತ, ಮಂಗಳವಾದ್ಯ, ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ನಂತರ ದೇವಸ್ಥಾನದಲ್ಲಿ ಸರತಿ ಸಾಲಿನಲ್ಲಿ ನಿಂತು ಸಾವಿರಾರು ಭಕ್ತರು ದೇವರ ದರ್ಶನ ಪಡೆದರು. ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಿತು. ಸಂಜೆ ಕಾರ್ತೀಕ ಮಾಸದ ಅಂಗವಾಗಿ ದೇವಸ್ಥಾನದಲ್ಲಿ ಸಾವಿರಾರು ಹಣತೆಗಳನ್ನು ಹಚ್ಚುವ ಮೂಲಕ ದೀಪೋತ್ಸವ ನಡೆಸಲಾಯಿತು.

ಉತ್ಸವದಲ್ಲಿ ಸಮಿತಿಯ ಅಧ್ಯಕ್ಷ ವಿಠಲ್‌ರಾವ್ ಪವಾರ್, ಪ್ರಧಾನ ಕಾರ್ಯದರ್ಶಿ ಜಿ.ವಿ.ಶ್ರೀನಾಥ್, ಖಜಾಂಚಿ ಮದನ ಬೊಡೆ, ಸದಸ್ಯರಾದ ಹೊನ್ನಪ್ಪ ರಾವ್ ಕಾಳಿಂಗೆ, ಸತ್ಯಪ್ಪ, ಲಕ್ಷ್ಮಣ್ ರಾವ್ ಪವಾರ್, ಚೇತನ್, ಭ'ರತ್, ರುಕ್ಮಾಂಗದ ರಾವ್, ಸುಘೋಷ್, ಸುನಿಲ್, ಸಮರ್ಥ, ಸುತ್ತಮುತ್ತಲ ಗ್ರಾಮದ ಸಾವಿರಾರು ಭಕ್ತರು ಭಾಗವಹಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಜಿಗರ್ ಥಂಡ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗರಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲಿಯೋ (ಕ)	2 ಪ್ರದರ್ಶನಗಳು
ರಾಜಕಮಲ್	
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಸಂಗಂ	
ಟಗರುಪಲ್ಯ(ಕ)–2 ಆಟಗಳು	ಟೈಗರ್–3(ಹಿಂದಿ) 2 ಆಟಗಳು
ಲಿಡೋ	
ಗರಡಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಟೈಗರ್ ನಾಗೇಶ್ವರರಾವ್ (ತ)	4 ಪ್ರದರ್ಶನಗಳು
ಪ್ರಭಾ	
ಜಪಾನ್(ತ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಗರಡಿ (ಕ):** ಬೆ.10.10ಕ್ಕೆ, ಮ.1.10ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, **ಟಗರುಪಲ್ಯ (ಕ):** ಸಂ.4.15ಕ್ಕೆ.
ಸ್ಕ್ರೀನ್ 2	**ಘೋಸ್ಟ್ (ಕ):** ಬೆ.10.10ಕ್ಕೆ, **ಜಿಗರ್‌ಥಂಡ ಡಬಲ್ x (ತ):** ಮ.1ಕ್ಕೆ, ಸಂ.6.50ಕ್ಕೆ, **ರೈಡ್ (ತ):** ಸಂ.4.25ಕ್ಕೆ, **ಟಗರುಪಲ್ಯ (ಕ):** ರಾ.10.05ಕ್ಕೆ.
ಸ್ಕ್ರೀನ್ 3	**ಜಪಾನ್ (ತ):** ಬೆ.10.15ಕ್ಕೆ, ಸಂ.4ಕ್ಕೆ, ರಾ.7ಕ್ಕೆ, **ಟಗರುಪಲ್ಯ (ಕ):** ಮ.1.20ಕ್ಕೆ, **ಬಂದ್ರ (ಮ):** ರಾ.10ಕ್ಕೆ.
ಸ್ಕ್ರೀನ್ 4	**ದಿ ಮಾರ್ವೆಲ್ಸ್ (3ಡಿ)(ಇಂ):** ಬೆ.8.30ಕ್ಕೆ, ಬೆ.10.45ಕ್ಕೆ, ಮ.1.05ಕ್ಕೆ, ಮ.3.25ಕ್ಕೆ, ಸಂ.5.40ಕ್ಕೆ, ರಾ.7.55ಕ್ಕೆ, ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ದಿ ಮಾರ್ವೆಲ್ಸ್ (3ಡಿ)(ಇಂ):** ಬೆ.9.30ಕ್ಕೆ, ಮ.12ಕ್ಕೆ, ಮ.2.30ಕ್ಕೆ, ಸಂ.5ಕ್ಕೆ, ರಾ.7.30ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	**ಗರಡಿ (ಕ):** ರಾ.10.15ಕ್ಕೆ, ಮ.1.20ಕ್ಕೆ, ರಾ.7.15ಕ್ಕೆ, **ಟಗರುಪಲ್ಯ (ಕ):** ಮ.12.55ಕ್ಕೆ, **ಜಿಗರ್‌ಥಂಡ ಡಬಲ್ x (ತ):** ರಾ.10.20ಕ್ಕೆ.
ಸ್ಕ್ರೀನ್ 3	**ಜಿಗರ್‌ಥಂಡ ಡಬಲ್ x (ತ):** ಬೆ.10.35ಕ್ಕೆ, ಮ.2.10ಕ್ಕೆ, ಸಂ.5.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 4	**ಜಪಾನ್ (ತ):** ಬೆ.9.30ಕ್ಕೆ, ಮ.12.45ಕ್ಕೆ, ಸಂ.4ಕ್ಕೆ, ರಾ.7.15ಕ್ಕೆ, ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ಸೈಕಲ್ ಸವಾರಿ (ಕ):** ಬೆ.10.30ಕ್ಕೆ, **ಕ್ರೇಜಿ ಕೀರ್ತಿ (ಕ):** ಮ.1.30ಕ್ಕೆ, **ಗರುಡ ಪುರಾಣ (ಕ):** ಸಂ.4ಕ್ಕೆ, **ಬಸ್ರಿಕಟ್ಟೆ (ಕ):** ಸಂ.6.45ಕ್ಕೆ, **ಲಿಯೋ (ತ):** ರಾ.9.15ಕ್ಕೆ.
ಸ್ಕ್ರೀನ್ 2	**ಟಗರುಪಲ್ಯ (ಕ):** ಬೆ.10.45ಕ್ಕೆ, ಮ.1.40ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ
ಸ್ಕ್ರೀನ್ 3	**ಲಿಯೋ (ತ):** ಮ.1.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	**ಘೋಸ್ಟ್ (ಕ):** ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.45ಕ್ಕೆ, **ಲಿಯೋ (ಕ):** ಮ.1.05ಕ್ಕೆ, **ಟಗರುಪಲ್ಯ (ಕ):** ರಾ.9.15ಕ್ಕೆ

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ):** ಮ.3.50ಕ್ಕೆ, **ಭಗವಂತ್ ಕೇಸರಿ (ತೆ):** ರಾ.7.05ಕ್ಕೆ, **ಗಣಪತ್: ಎ ಹೀರೋ (ಹಿಂ):** ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ):** ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ (ಕ):** ಮ.12.45ಕ್ಕೆ, **ಲಿಯೋ (ತ):** ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ):** ರಾ.10ಕ್ಕೆ, **ಟಗರುಪಲ್ಯ (ಕ):** ಮ.1ಕ್ಕೆ, ರಾ.7ಕ್ಕೆ, **ತೇಜಸ್ (ಹಿಂ):** ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ಮೂಗೂರಿನ ಶ್ರೀ ತ್ರಿಪುರಸುಂದರಿ ಅಮ್ಮನವರಿಗೆ ದೀಪಾವಳಿಯ ಕಾರ್ತಿಕ ಮಾಸದ ಅಂಗವಾಗಿ ಭಾನುವಾರ ವಿಶೇಷ ಪೂಜೆಯೊಂದಿಗೆ ಹೂವಿನ ಸೀರೆ ಅಲಂಕಾರ ಮಾಡಲಾಗಿತ್ತು. ಬೆಳಗ್ಗೆಯಿಂದಲೇ ಸಾವಿರಾರು ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದು ಪೂಜೆ ಸಲ್ಲಿಸಿದರು. ಅರ್ಚಕರಾದ ನಂಜುಂಡಸ್ವಾಮಿ, ಅಭಿಷೇಕ್ ಇದ್ದರು.

ಹೆಗ್ಗನೂರು ಗ್ರಾಮದಲ್ಲಿ ಮಳೆಗೆ ಮನೆ ಕುಸಿತ



ಸರಗೂರು: ತಾಲೂಕಿನ ಹೆಗ್ಗನೂರು ಗ್ರಾಮದಲ್ಲಿ ಕೆಲ ದಿನಗಳಿಂದ ಸುರಿದ ಭಾರಿ ಮಳೆಗೆ ವಾಸದ ಮನೆಯೊಂದು ಕುಸಿದಿದೆ.

ಗ್ರಾಮದ ದಿವಂಗತ ಹೊನ್ನೇಗೌಡರ ಪತ್ನಿ ನಾಗಮ್ಮ ಅವರ ಮನೆ ಕುಸಿದಿದೆ. ಇದರಿಂದ ಈಕೆಗೆ ವಾಸಿಸಲು ತೊಂದರೆಯಾಗುತ್ತಿದೆ. ಮನೆಯಲ್ಲಿದ್ದ ದವಸಗಳು ಮಳೆಗೆ ಹಾನಿಯಾಗಿದ್ದು, ಇದರಿಂದ ಅಪಾರ ನಷ್ಟವಾಗಿದೆ. ಆದ್ದರಿಂದ ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ಸೂಕ್ತ ಪರಿಹಾರ ನೀಡಬೇಕು ಎಂದು ನಾಗಮ್ಮ ಮನವಿ ಮಾಡಿದ್ದಾರೆ.

ನಂಜನಗೂಡು ಬಳಿ ಬೆಂಕಿ ಹಚ್ಚಿಕೊಂಡು ಯುವಕ ಆತ್ಮಹತ್ಯೆ

ಪೊಲೀಸರ ಭೀತಿಯಿಂದ ಪುತ್ರ ಆತ್ಮಹತ್ಯೆ: ತಂದೆ ದೂರು ದಾಖಲು



ಮೈಸೂರು, ನ.13(ಎಂಕೆ)– ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಯುವಕ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಂಜನಗೂಡು ತಾಲೂಕಿನ ನಗರ್ಲೆ ಗ್ರಾಮದಲ್ಲಿ ಕಳೆದ ರಾತ್ರಿ ನಡೆದಿದೆ.

ಗ್ರಾಮದ ನಿವಾಸಿ ರಾಜು ಎಂಬುವರ ಪುತ್ರ ಕಿರಣ್‌ಕುಮಾರ್(22) ಆತ್ಮಹತ್ಯೆಗೆ ಶರಣಾದವನಾಗಿದ್ದು, ಈತ ಭಾನುವಾರ ರಾತ್ರಿ 11.30ರ ಸುಮಾರಿಗೆ ಮೈಮೇಲೆ ಪೆಟ್ರೋಲ್ ಸುರಿದುಕೊಂಡು, ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದಾನೆ.

ಈ ವೇಳೆ ಆತನ ಕಿರುಚಾಟ ಕೇಳಿದ ಆತನ ತಂದೆ, ಅಣ್ಣ ಹಾಗೂ ಇನ್ನಿತರೆ ಗ್ರಾಮಸ್ಥರು ಹೊತ್ತಿ ಉರಿಯುತ್ತಿದ್ದ ಆತನ ಮೇಲೆ ಗೋಣಿಚೀಲ ಹೊದಿಸಿ, ರಕ್ಷಣೆ ಮಾಡಿ ನಂಜನಗೂಡು ಪ್ರಾಥಮಿಕ ತಾಲೂಕು ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಿದರಾದರೂ ಚಿಕಿತ್ಸೆ ಫಲಕಾರಿಯಾಗದೆ ಸೋಮವಾರ ಸಂಜೆ ಆತ ಕೊನೆಯುಸಿರೆಳೆದಿದ್ದಾನೆ.

ಕ್ಷುಲ್ಲಕ ಕಾರಣಕ್ಕೆ ಗಲಾಟೆ: ಭಾನುವಾರ ಮಧ್ಯಾಹ್ನ ಸರಗೂರು ಗ್ರಾಮದ ಯುವಕರೊಂದಿಗೆ ಕ್ಷುಲ್ಲಕ ಕಾರಣಕ್ಕೆ ಗಲಾಟೆ ಮಾಡಿಕೊಂಡಿದ್ದ ಕಿರಣ್‌ಕುಮಾರ್ ಹಾಗೂ ಆತನ ಸ್ನೇಹಿತನ ವಿರುದ್ಧ ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಈ ಸಂಬಂಧ ಪೊಲೀಸರು ಭಾನುವಾರ ಕಿರಣ್‌ಕುಮಾರ್‌ನನ್ನು ವಿಚಾರಣೆಗಾಗಿ ಠಾಣೆಗೆ ಕರೆಸಿಕೊಂಡಿದ್ದಾರೆ. ಈ ವೇಳೆ ಮೂತ್ರ ವಿಸರ್ಜನೆ ಮಾಡಿ ಬರುವುದಾಗಿ ಠಾಣೆಯಿಂದ ಹೊರ ಬಂದ ಕಿರಣ್‌ಕುಮಾರ್ ನೇರವಾಗಿ ನಗರ್ಲೆ ಗ್ರಾಮಕ್ಕೆ ಬಂದು ತಡರಾತ್ರಿ ಗ್ರಾಮದ ಮನೆಯೊಂದರ ಮುಂದೆ ಗಲಾಟೆ ಮಾಡಿದ ನಂತರ ತನ್ನ ಮೈ ಮೇಲೆ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾನೆ ಎನ್ನಲಾಗಿದೆ. ತಡರಾತ್ರಿ 1.20ರ ವೇಳೆಗೆ ಬಿಳಿಗೆರೆ ಠಾಣೆಗೆ ದೂರು ನೀಡಿರುವ ಗ್ರಾಮದ ಮನೆಯೊಂದರ ನಿವಾಸಿ, ಕಿರಣ್ ಕುಮಾರ್ ನಮ್ಮ ಮನೆ ಮುಂದೆ ನಿಂತು ಗಲಾಟೆ ಮಾಡಿದ ಬಳಿಕ ಆತನೇ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾಗಿ ದೂರಿನಲ್ಲಿ ತಿಳಿಸಿದ್ದಾರೆ.

ಜೈಲುವಾಸ: ಕೊಲೆಯತ್ನ ಪ್ರಕರಣವೊಂದರಲ್ಲಿ ಕಳೆದ ವರ್ಷ ಜೈಲುವಾಸ ಅನುಭವಿಸಿದ್ದ ಕಿರಣ್‌ಕುಮಾರ್, ಜೈಲಿನಿಂದ ಹೊರ ಬಂದ ಬಳಿಕ ಅಲ್ಲಿ–ಇಲ್ಲಿ ಸಣ್ಣಪುಟ್ಟ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದ ಎನ್ನಲಾಗಿದೆ.

ಪ್ರಕರಣ ದಾಖಲು: ಬಿಳಿಗೆರೆ ಠಾಣೆಯ ಪೊಲೀಸರು ಹಲ್ಲೆ ನಡೆಸಿದ್ದರಿಂದ ತಮ್ಮ ಪುತ್ರ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಕಿರಣ್‌ಕುಮಾರ್ ತಂದೆ ರಾಜು ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಭಾನುವಾರ ರಾತ್ರಿ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ ಮಗನನ್ನು ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಮಾತನಾಡಿಸಿದಾಗ ಆತ, ತನ್ನನ್ನು ಠಾಣೆಗೆ ಕರೆದೊಯ್ದು ಪೊಲೀಸರು ಹಲ್ಲೆ ನಡೆಸಿದರು. ನಾನು ಪೊಲೀಸರಿಂದ ತಪ್ಪಿಸಿಕೊಂಡು ಬಂದಿದ್ದು, ಮತ್ತೆ ಅವರಿಗೆ ಸಿಕ್ಕರೆ ಹಲ್ಲೆ ನಡೆಸುತ್ತಾರೆ ಎಂಬ ಭಯದಿಂದ ಬೆಂಕಿ ಹಚ್ಚಿಕೊಂಡಿದ್ದಾಗಿ ತಿಳಿಸಿದ್ದಾನೆ. ಹೀಗಾಗಿ ಬಿಳಿಗೆರೆ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಮತ್ತು ಸಿಬ್ಬಂದಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಬಿಳಿಗೆರೆ ಠಾಣೆಗೆ ಭೇಟಿ ನೀಡಿದ್ದ ಅಡಿಷನಲ್ ಎಸ್ಪಿ ನಂದಿನಿ ಅವರಿಗೆ ದೂರು ಸಲ್ಲಿಸಿದ್ದಾರೆ.

ಹೆಚ್.ಡಿ.ಕೋಟೆ ಬಳಿ ಹಾಡಹಗಲೇ ಮಹಿಳೆ ಹತ್ಯೆ

ಹೆಚ್.ಡಿ.ಕೋಟೆ: ಹಾಡಹಗಲೇ ಮನೆಯಲ್ಲಿದ್ದ ಒಂಟಿ ಮಹಿಳೆಯನ್ನು ಇರಿದು ಕೊಲೆ ಮಾಡಿರುವ ಘಟನೆ ತಾಲೂಕಿನ ಮಾದಾಪುರ ಗ್ರಾಮದಲ್ಲಿ ಸೋಮವಾರ ನಡೆದಿದೆ.

ಗ್ರಾಮದ ದಿವಂಗತ ವೀರಭದ್ರಪ್ಪ ಎಂಬವರ ಪತ್ನಿ ಗಾಯತ್ರಿ(48) ಕೊಲೆಯಾದವರಾಗಿದ್ದು, ಈಕೆಯ ಪುತ್ರ ಬೇರೆ ಊರಿನಲ್ಲಿ ಕೆಲಸ ಮಾಡುತ್ತಿದ್ದರಿಂದ ಇವರು ಮನೆಯಲ್ಲಿ ಒಬ್ಬರೇ ವಾಸವಾಗಿದ್ದರು. ಇಂದು ಸಂಜೆ 5 ಗಂಟೆಯಲ್ಲಿ ಹಿರೇನಂದಿ ಗ್ರಾಮದ ಸಹೋದರಿ ದೀಪಾವಳಿ ಹಬ್ಬಕ್ಕೆ ಗಾಯತ್ರಿಯನ್ನು ಕರೆಯಲು ಮನೆಗೆ ಬಂದಾಗ ಕೊಲೆಯಾಗಿರುವುದು ಗೊತ್ತಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಹೆಚ್.ಡಿ.ಕೋಟೆ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ಮತ್ತು ಸಿಬ್ಬಂದಿ ಪರಿಶೀಲನೆ ನಡೆಸಿದ್ದಾರೆ. ದೀಪಾವಳಿ ಹಬ್ಬದ ಪ್ರಯುಕ್ತ ಗ್ರಾಮದ ಚಂದ್ರಮೌಳೇಶ್ವರ ಮಲ್ಲಿಕಾರ್ಜುನ ದೇವಾಲಯದಲ್ಲಿ ಸೋಮವಾರ ವಿಶೇಷ ಪೂಜೆ ಇದ್ದ ಕಾರಣ ಗ್ರಾಮದ ಎಲ್ಲರೂ ಪೂಜೆಗೆ ತೆರಳಿದ್ದರು. ಇದರಿಂದ ಮನೆಯಲ್ಲಿ ಒಬ್ಬರೇ ಇದ್ದ ಗಾಯತ್ರಿಯನ್ನು ಕಿಡಿಗೇಡಿಗಳು ಕೊಲೆ ಮಾಡಿದ್ದಾರೆ ಎನ್ನಲಾಗಿದೆ. ಈ ಸಂಬಂಧ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪದ್ಮಮ್ಮ ನಿಧನ



ಹಿರೀಕ್ಯಾತನಹಳ್ಳಿ: ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದ ಪದ್ಮಮ್ಮ ಅನಾರೋಗ್ಯದಿಂದ ಸೋಮವಾರ ಮಧ್ಯಾಹ್ನ ನಿಧನರಾದರು.

ಮೃತರು ಪತಿ ಕೆಎಸ್‌ಆರ್‌ಟಿಸಿ ನಿವೃತ್ತ ಚಾಲಕ ರಾಮಸ್ವಾಮಿಗೌಡ, ಒಬ್ಬ ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಹಿರೀಕ್ಯಾತನಹಳ್ಳಿ ಗ್ರಾಮದ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.